UNIVERSAL
LIBRARY
OU_198198
UNIVERSAL
LIBRARY

# ಮೈಥಿಲೀ

(ಸಣ್ಣ ಕಥೆಗಳು)

ಎಸ್. ಅನಂತನಾರಾಯಣ ಎಂ. ಎ.

ಕನ್ನಡ ಕವಿ ಕಾವ್ಯ ಮಾಲೆ
ಮೈಸೂರು.

# ಮೈಥಿಲೀ

(ಸಣ್ಣ ಕಥೆಗಳು)

ಎಸ್. ಅನಂತನಾರಾಯಣ ಎಂ.ಎ.

ಕನ್ನಡ ಕವಿ ಕಾವ್ಯಮಾಲೆ
ಮೈಸೂರು.

ಮೊದಲು ಮುದ್ರಣ . . . . . ೧೯೫೦

ಎಲ್ಲ ಹಕ್ಕುಗಳೂ ಲೇಖಕರದು.

**ಬೆಲೆ: ೧—೮—೦.**

ಪ್ರಕಾಶಕರು:

ಎಚ್. ಎಂ. ಶಂಕರನಾರಾಯಣರಾವ್, ಎಂ. ಎ.

ಅಚ್ಚು ಮಾಡಿದವರು:

ಹಿಂದೂಸ್ಥಾನ್ ಪ್ರೆಸ್, ಮೈಸೂರು.

# ಪರಿವಿಡಿ


| | | |
|---|---|---|
| 1. | ಮೈಥಿಲೀ | 1—32 |
| 2. | ಕಲಾವಿದ. | 33—50 |
| 3. | ಜೂಡಾಸ್. | 51—72 |
| 4. | ವಿಷಚಕ್ರ. | 73—79 |
| 5. | ತಾಯಿ—ಬಂಜೆ. | 80—104 |

# ಮುನ್ನುಡಿ

ಪಾಶ್ಚಾತ್ಯ ಪುಸ್ತಕಪ್ರಕಾಶಕರು ಆಗಿಂದಾಗ ಹೊರಡಿಸುವ ಕಥಾ ಸಂಗ್ರಹಗಳಲ್ಲಿ ಕಂಡುಬರುವ ವಿಷಯ ವೈವಿಧ್ಯವನ್ನು ನೋಡಿದರೆ ಕರುಬು ವಂತಾಗುತ್ತದೆ. ಈ ಗುಣ ಈಚೆಗೆ ಕನ್ನಡ ಕಥೆಗಳಲ್ಲೂ ಪಡೆಯುತ್ತಿರು ವುದು ಸಂತೋಷದ ವಿಷಯ. ಕೆಲವು ವರ್ಷಗಳ ಕೆಳಗೆ ಕಥೆಗಳಲ್ಲಿ ಸಾಧಾರಣವಾಗಿ ಕಂಡುಬರುತ್ತಿದ್ದ ಯುವಕ-ಯುವತಿಯರ ಸರಸಾಲಾಪ, ಈಚೆಗೆ ಅಷ್ಟೇ ಸಾಧಾರಣವಾಗಿ ಕಂಡುಬರುತ್ತಿದ್ದ ಸ್ವಾತಂತ್ರ್ಯಕಾಂಕ್ಷೆ, ಬಡವರ ಸಂಕಟ—ಮುಂತಾದ್ದನ್ನು ಬದಿಗಿಟ್ಟು ಶ್ರೀ|| ಅನಂತನಾರಾಯಣ ರವರು ಹೊಸ ವಿಷಯಗಳನ್ನಾರಿಸಿಕೊಂಡಿದ್ದಾರೆ.

ಅನುಪಮ ಸೌಂದರ್ಯವುಳ್ಳ ಚಿತ್ರಗಳನ್ನು ರಚಿಸಬಲ್ಲ ಮೋಹನ ನಿಗೆ ವಿಧಿ ದೇಹಸೌಂದರ್ಯವನ್ನು ಕೊಡದೆ ವಿಕಾರರೂಪಿಯಾಗಿ ಮಾಡಿತು. ಪ್ರಪಂಚ ಅವನ ಕಲೆಯನ್ನೇನೋ ಮೆಚ್ಚಿತು; ಆದರೂ ಅವ ನಿಗೆ ಮುಖ್ಯವಾಗಿ ಬೇಕಾಗಿದ್ದ ಪ್ರೇಮ, ಅದರಲ್ಲೂ ಹೆಣ್ಣು ಹೃದಯದ ಪ್ರೇಮ ಅವನಿಗೆ ದೊರೆಯಲಿಲ್ಲ. ಕಲೆ ಎಲ್ಲರಿಗೂ ಬೇಕಾದರೂ ಕಲೆಗಾರ ಮಾತ್ರ ಯಾರಿಗೂ ಬೇಡವಾದನು. ಇಂಥವನ ಮನೋವಿಭಜನೆಯನ್ನು **"ಕಲಾವಿದ"** ಎಂಬ ಕಥೆಯಲ್ಲಿ ಕಾಣಬಹುದು. ಪಾಪಕ್ಕೂ ಪುಣ್ಯಕ್ಕೂ ವ್ಯತ್ಯಾಸವೇನು? ಅವೆರಡೂ ಇರುವುದು ನಾವು ಮಾಡುವ ಕೃತ್ಯದಲ್ಲೇ ಅಥವಾ ನೋಡುವ ದೃಷ್ಟಿಯಲ್ಲೇ? ಈ ಸಮಸ್ಯೆಯನ್ನು ವಿದ್ಯಾರಣ್ಯರ ಶಿಷ್ಯ ಸದಾನಂದನು ಎದುರಿಸಬೇಕಾಯಿತು. ನರ್ತಕಿ **"ಮೈಥಿಲಿ"**ಯ ಪ್ರಸಂಗದ ಸಹಾಯದಿಂದ ಈ ಸಮಸ್ಯೆಯನ್ನು ಬಿಡಿಸುವ ಯತ್ನ ನಡೆ ದಿದೆ. **"ಜುಡಾಸ್"** ಎಂಬ ಕಥೆ ನಮ್ಮನ್ನು ಎರಡು ಸಾವಿರ ವರ್ಷ ಹಿಂದಕ್ಕೆ,ಯೇಸುಕ್ರಿಸ್ತನ ಕಾಲಕ್ಕೆ ಒಯ್ಯುತ್ತದೆ. ಪ್ರಪಂಚದಲ್ಲಿ ಅತ್ಯಂತ ಹೇಯವಾದ ಕೃತ್ಯ ಮಾಡಿದವನೆಂದೂ ಪಾಪದ ಮೂರ್ತಿಯೆಂದೂ ಗಣಿಸ ಲ್ಪಟ್ಟಿರುವ ಜೂಡಾಸನನ್ನು ಶ್ರೀ|| ಅನಂತನಾರಾಯಣ ರವರು

ಹೊಸ ದೃಷ್ಟಿಯಿಂದ ನೋಡಿದ್ದಾರೆ. ಅವನು ಮಾಡಿದ್ದು ಪಾಪವಲ್ಲ, ಕೃಷ್ಣನಲ್ಲಿ ಅವನಿಗಿದ್ದ ಭಕ್ತಿಯ ಪರಮಾವಧಿ, ತನ್ನ ಗುರುವಿಗಾಗಿ ಮಾಡಿದ ತ್ಯಾಗದ ಪರಮಾವಧಿ, ಎಂದು ತೋರಿಸುವ ಪ್ರಯತ್ನ ಮಾಡಿದ್ದಾರೆ. ತಾಯ್ತನದ ಉತ್ಕಟವಾದ ಆಸೆ, ಅದು ವಿಫಲವಾದ್ದರಿಂದ ಉಂಟಾದ ಸಂಕಟ, ಬಂಜೆಯೆಂದು ಗಂಡನೂ ಅತ್ತೆಯೂ ಆಕೆಯನ್ನು ಅನಾದರಣೆಯಿಂದ ಕಂಡದ್ದರಿಂದ ಒದಗಿದ ಅನಾಹುತ—ಇವು **"ತಾಯಿ-ಬಂಜೆ"**ಯಲ್ಲಿ ಚಿತ್ರಿತವಾಗಿವೆ.

ವಿಷಯ ಗಹನವಾದದ್ದು, ನಿರೂಪಿಸಿರುವ ರೀತಿಯಲ್ಲಿ ವಿಷಯಕ್ಕೆ ತಕ್ಕ ಗಂಭೀರ ದೃಷ್ಟಿಯಿದೆ; ಮಾನವಸ್ವಭಾವವನ್ನೂ ಅವನ ಸಮಸ್ಯೆಗಳನ್ನೂ ಸೂಕ್ಷ್ಮದೃಷ್ಟಿಯಿಂದ ಪರಿಶೀಲಿಸುವ ಪ್ರಯತ್ನವಿದೆ. ಶ್ರೀ॥ ಯವರ ಕಥನಶಕ್ತಿ ನಿಂತಲ್ಲಿ ನಿಲ್ಲದೆ ಬೆಳೆಯುತ್ತಿದೆಯೆಂದೂ, ಶೈಲಿ ಪಳಗುತ್ತಿದೆಯೆಂದೂ ಓದುಗರಿಗೆ ಅರಿವಾಗದಿರದು.

ಸೆಂಟ್ರಲ್ **ಕಾಲೇಜು,**
ಬೆಂಗಳೂರು

**ಎ. ಎನ್. ಮೂರ್ತಿರಾವ್.**

———

# ನನ್ನ ನುಡಿ

"ಮೈಥಿಲೀ" ನನ್ನ ಮೊದಲ ಕಥಾ ಸಂಕಲನ. ಇದರಲ್ಲಿರುವ ಕತೆಗಳಲ್ಲಿ "ಕಲಾವಿದ" ಮತ್ತು "ತಾಯಿ–ಬಂಜೆ" ಈ ಮೊದಲೇ ಪ್ರಬುದ್ಧ ಕರ್ಣಾಟಕದಲ್ಲಿ ಅಚ್ಚಾಗಿದ್ದುವು. ತಮ್ಮ ಪತ್ರಿಕೆಯಲ್ಲಿ ಅವುಗಳಿಗೆ ಸ್ಥಾನಕೊಟ್ಟ ಪ್ರಬುದ್ಧ ಕರ್ಣಾಟಕದ ಸಂಪಾದಕರಿಗೆ ನನ್ನ ವಂದನೆಗಳು. ಈ ಕತೆಗಳನ್ನು ಜನತೆಯ ಮುಂದಿಡುತ್ತಿರುವ ಗೆಳೆಯ ತ. ಸು. ಶಾಮರಾಯರಿಗೂ, ಶ್ರೀ|| ಎಚ್. ಎಂ. ಶಂಕರನಾರಾಯಣರಾಯರಿಗೂ ನಾನು ಆಭಾರಿಯಾಗಿದ್ದೇನೆ. ಕೇಳಿದೊಡನೆಯೇ ವಿಶ್ವಾಸದಿಂದ ಮುನ್ನುಡಿ ಬರೆದು ಕೊಟ್ಟ ಹಿರಿಯ ಗೆಳೆಯ ಎ. ಎನ್. ಮೂರ್ತಿರಾಯರ ಪ್ರೇಮ ನನಗೆ ಬೆಂಬಲವಾಗಿದೆ. ಇದು ನನ್ನ ಜೀವದ ಗೆಳೆಯನಿಗೆ ಕುರುಹಾಗಿ ಅರ್ಪಿತ. ಕತೆಗಳ ತಿದ್ದುಪ್ರತಿಯನ್ನು ಒಪ್ಪಮಾಡಿಕೊಟ್ಟ ಗೆಳೆಯ ಶ್ರೀ|| ಟಿ. ವಿ. ಸುಬ್ರಹ್ಮಣ್ಯಂ ಅವರಿಗೆ ನನ್ನ ನೆನಕೆಗಳು. ಈ ತನಕ ಕನ್ನಡ ಜನ ನನ್ನ ಪುಸ್ತಕಗಳ ಬಗ್ಗೆ ತೋರಿರುವ ಆದರ ವಿಶ್ವಾಸಗಳಿಗೆ ಇದೂ ತಕ್ಕುದಾಗಿದೆಯೆಂದು ನನ್ನ ನಂಬಿಕೆ.

ಫಸ್ಟ್ ಗ್ರೇಡ್ ಕಾಲೇಜು,
ಮೈಸೂರು
ವಿರೋಧಿ ಸಂವತ್ಸರ, ಸಂಕ್ರಾಂತಿ.

**ಎಸ್. ಅನಂತನಾರಾಯಣ.**

---

# ನಮ್ಮ ನುಡಿ

ನಮ್ಮ ಮಾಲೆಯಲ್ಲಿ ಪ್ರಕಟವಾಗುತ್ತಿರುವ ಸಣ್ಣ ಕಥಗಳಲ್ಲಿ ಇದೇ ಮೊದಲನೆಯದು. ಈ ಉತ್ತಮವಾದ ಕಥಾ ಸಂಗ್ರಹವನ್ನು ನಮ್ಮ ಮಾಲೆಯಲ್ಲಿ ಸೇರಿಸಿಕೊಳ್ಳಲು ಅನುಮತಿಯಿತ್ತ ನಮ್ಮ ಮಿತ್ರರಾದ ಶ್ರೀ|| ಎಸ್. ಅನಂತನಾರಾಯಣ ಅವರಿಗೂ, ಗ್ರಂಥವನ್ನು ಬಹುಬೇಗ ಸುಂದರವಾಗಿ ಅಚ್ಚುಮಾಡಿಕೊಟ್ಟ ಹಿಂದೂಸ್ಥಾನ್ ಪ್ರೆಸ್ಸಿನ ಅಧಿಕಾರಿಗಳಿಗೂ ಅತ್ಯಂತ ಕೃತಜ್ಞನಾಗಿದ್ದೇನೆ.

**ಶಾರದಾ ವಿಲಾಸ ಕಾಲೇಜು,**
**ಮೈ ಸೂ ರು .**
೧೨–೧–೫೦

**ಎಚ್. ಎಂ. ಶಂಕರನಾರಾಯಣರಾವ್.**

# ಮೈಥಿಲೀ

"ಹಾಗಿದ್ದರೆ, ಪಾಪವೆಂದರೇನು ಗುರುಗಳೇ ?"

ಕಣ್ಣುಮುಚ್ಚಿ ಧ್ಯಾನಾಸಕ್ತರಾದ ಯೋಗೀಶ್ವರ ವಿದ್ಯಾರಣ್ಯರು ಕಣ್ತೆರೆಯಲಿಲ್ಲ. ಶಿಷ್ಯನ ಪ್ರಶ್ನೆಗೆ ಉತ್ತರ ಕೊಡಲಿಲ್ಲ. ತೇಜಪುಂಜವಾದ ಗಂಭೀರವಾದ ಮುಖದ ಮೇಲೊಂದು ಮುಗುಳುನಗೆ ಸುಳಿಯಿತು ಅಷ್ಟೇ !

"ಹಾಗಿದ್ದರೆ, ಪಾಪವೆಂದರೇನು ಗುರುಗಳೇ ?"

ಅದೇ ಉತ್ಸುಕ ಕಂಠದಿಂದ ಮತ್ತೊಮ್ಮೆ ಅದೇ ಪ್ರಶ್ನೆ. ವಿದ್ಯಾರಣ್ಯರು ಕಣ್ಣು ತೆರೆದು, ಎದುರಿಗೆ ಕೈಮುಗಿದು, ತಲೆಬಾಗಿಸಿ ಕುಳಿತ ಶಿಷ್ಯನ ಕಡೆಗೆ ನೋಡಿದರು. ಹಠಯೋಗಿ, ಯುವಕಸನ್ಯಾಸಿ—ಬ್ರಹ್ಮಚಾರಿ ಸದಾನಂದ, ಆಶ್ರಮಕ್ಕೆನ್ನೂ ಹೊಸದಾಗಿ ಬಂದವನು. ಆದರೂ ಚಿಕ್ಕ ವಯಸ್ಸಿನಲ್ಲೇ ಹಲವಾರು ಕಠಿಣಯೋಗಗಳನ್ನು ಸಾಧಿಸಿದವನು. ಯೌವನದಲ್ಲಿಯೇ ಜೀವನದ ಮಾಯೆಗಳನ್ನೆಲ್ಲಾ ಬಿಟ್ಟುಬಂದವನು. ಮೋಹಗಳನ್ನು ಕಡೆಗಾಣಿಸಿದವನು. ಎಂತೆಂತಹ ತಪಸ್ಯೆಗಳನ್ನೆಲ್ಲಾ ಕೈಗೊಂಡು ಜಯಿಸಿದ ಮಹಾಸನ್ಯಾಸಿ. ದೇವತಾಧ್ಯಾನ ಮಾತ್ರವೇ ತನ್ನ ಗುರಿಯನ್ನಾಗಿಟ್ಟುಕೊಂಡು, ವಾಸನೆಗಳೆಲ್ಲವನ್ನೂ ಮಣ್ಣುಮಾಡಿದ ಅಖಂಡ ಬ್ರಹ್ಮಚಾರಿ ಸದಾನಂದ. ಇಂದು ಪಾಪವೆಂದರೇನೆಂದು ಪ್ರಶ್ನೆ ಕೇಳುತ್ತಿದಾನೆ. ಆಶ್ರಮದ ಸನ್ಯಾಸಿಗೆ ಪಾಪದ ಸಂಪರ್ಕವೆಲ್ಲಿ ಬರಬೇಕು. ಅಷ್ಟೇ ಅಲ್ಲ. ಪಾಪದ ರೂಪವಾದರೂ ಹೇಗೆ ತಿಳಿಯಬೇಕು. ವಿದ್ಯಾರಣ್ಯರು ತಮ್ಮ ಶಿಷ್ಯನ ಈ ನಿಷ್ಕಳಂಕಜ್ಞಾನ ಕಂಡು ತುಸು ನಕ್ಕರು. ಗುರುಗಳು ಏನುತ್ತರ ಕೊಡುವರೋ ಎಂದು ಅತ್ಯಾಸಕ್ತಿಯಿಂದ ಸದಾನಂದನ ಮುಖದ ಮೇಲೆ ಉತ್ಸುಕತೆ ಮೂಡಿತ್ತು. ನಿಷ್ಕಳಂಕ ಮನಸ್ಸಿನ ಜ್ಞಾನೋಪಾಸನೆಯ ಬಗೆ ಅದರಲ್ಲಿ ಬೆರೆತಿತ್ತು. ಜತೆಗೆ ಎಳೆಯ ಮಗು ಹೊಸದನ್ನು ಕಾಣುವಾಗಿನ ಕುತೂಹಲವೂ ಕೂಡಿಕೊಂಡಿತ್ತು.

"ಮಗು, ಪಾಪ ಪುಣ್ಯಗಳನ್ನು ಹೀಗೆಯೇ ಎಂದು ನಿಯತವಾಗಿ ಹೇಳಲು ಸಾಗದು, ಮಗು" ಎಂದರು ವಿದ್ಯಾರಣ್ಯರು ಗಂಭೀರವಾದ ದನಿಯಲ್ಲಿ.

"ಹಾಗಿದ್ದರೆ, ಪಾಪ, ಪುಣ್ಯದಿಂದ ಬೇರೆಯಲ್ಲವೇ, ತಂದೆ?"

"ನಿಜ, ಮಗು, ಪಾಪ ಪುಣ್ಯದಿಂದ ಹೊರತಾದುದು. ಎರಡೂ ಬೇರೆ ಬೇರೆ. ಆದರೆ ಇದು ಪಾಪ, ಇದು ಪುಣ್ಯವೆಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ."

ಶಿಷ್ಯನ ಮನಸ್ಸಿಗೆ ಇದರಿಂದ ಸಮಾಧಾನವಾಗಲಿಲ್ಲ. ಅವನ ಮುಖದಲ್ಲಿನ್ನೂ ಸಂದೇಹ ಕಾಣಿಸಿತು. ಒಂದು ಕ್ಷಣ ಮೌನದ ನಂತರ ಮತ್ತೆ ಪ್ರಶ್ನೆ.

"ಪಾಪದಿಂದ ಪುಣ್ಯವನ್ನು ಬೇರೆ ಮಾಡಲಾಗುವುದಿಲ್ಲವೇ, ತಂದೆ?"

"ಮಗು ಜೇನುಗೂಡಿನಲ್ಲಿ ಜೇನುತುಪ್ಪವೂ ಇದೆ, ಜೇನಿನ ವಿಷ ಪೂರಿತ ಕಡಿತವೂ ಇದೆ. ಜೀವನದಲ್ಲಿ ಯಾರೂ ಪೂರ್ತಿ ಒಳ್ಳೆಯವರಲ್ಲ, ಯಾರೂ ಪೂರ್ಣವಾಗಿ ಕೆಟ್ಟವರೂ ಅಲ್ಲ. ಒಳಿತುಕೆಡಕುಗಳ ಮಿಶ್ರಣ ಜೀವನ. ಹಾಗೆಯೇ ಮನುಷ್ಯನ ಎಲ್ಲ ಕಾರ್ಯವೂ ಪಾಪಪುಣ್ಯಗಳ ಮಿಶ್ರಣ."

"ಎಂದರೆ ಪಾಪಕ್ಕೆ ಬೇರೆ ಅಸ್ತಿತ್ವವಿಲ್ಲವೇ, ತಂದೆ?"

"ಇಲ್ಲ, ಮಗು. ಪಾಪಪುಣ್ಯಗಳು ಮಾಡುವ ಕೆಲಸದಲ್ಲಿಲ್ಲ, ನೋಡುವ ನೋಟದಲ್ಲಿದೆ. ನಮ್ಮ ಕಣ್ಣಿಗೆ ಪಾಪವಾಗಿ ತೋರಿದುದು ಮತ್ತೊಬ್ಬರ ಕಣ್ಣಿಗೆ ಪುಣ್ಯವಾಗಿ ತೋರಬಹುದು."

"ಆದರೆ ಸಂಪೂರ್ಣವಾಗಿ ಪಾಪಪೂರಿತವಾದುವು, ಸಂಪೂರ್ಣ ವಾಗಿ ಪುಣ್ಯವುಳ್ಳವು ಕೆಲವಿರಲೇ ಬೇಕಲ್ಲವೇ, ತಂದೆ?"

"ಇಲ್ಲ, ಮಗು, ಅದು ಸಾಧ್ಯವಿಲ್ಲ. ಚಂದ್ರನು ಹುಣ್ಣಿಮೆಯ ದಿನ ಕೂಡ ಕಳಂಕವನ್ನು ಹೊತ್ತಿರುತ್ತಾನೆ. ಮಹಾ ಆಕಾಶದಲ್ಲಿ ಎಲ್ಲಾ ದರೂ ಸರಿ, ಒಂದಲ್ಲ ಒಂದು ಕಡೆ, ಒಂದು ಚೂರಾದರೂ ಮೋಡ

ಮುಸುಕಿಯೇ ಇರುತ್ತದೆ. ಆ ಪರಮಾತ್ಮನಿಗೆ ಕೂಡ ಪಾಪದಿಂದ ಮುಕ್ತಿಯಿಲ್ಲ."

"ನನಗೆ ಇದು ಅರ್ಥವಾಗುವಂತಿಲ್ಲ, ತಂದೆ, ಮನಸ್ಸು ನಿಮ್ಮ ವಾದವನ್ನೊಪ್ಪಲು ಹಿಂಜರಿಯುತ್ತಿದೆ. ಪಾಪ ಮಾಡುವ ಕೆಲಸದಲ್ಲೇ ಹೊಂದಿಕೊಂಡಿರುತ್ತದೆ. ನೋಡುವ ದೃಷ್ಟಿಗೂ ಅದಕ್ಕೂ ಸಂಬಂಧವಿಲ್ಲ."

"ಹುಂ! ಮಗು. ನಿನ್ನ ವ್ಯಾಸಂಗ, ತರ್ಕದ ತೊಡಕಿಗೆ ಸಿಲುಕದ ಹಲವಾರು ವಸ್ತುಗಳಲ್ಲಿ ಇದೂ ಒಂದು. ತರ್ಕ ಯಾರನ್ನೂ ಎಲ್ಲಿಗೂ ಗುರಿ ಮುಟ್ಟಿಸಲಾರದು. ಅದರ ಜೊತೆಗೆ ನಂಬುಗೆಯೂ ಬೇಕು. ಎಲ್ಲಕ್ಕೂ ಹೆಚ್ಚಾಗಿ ಅನುಭವ ಬೇಕು, ಅದನ್ನರಗಿಸಿಕೊಳ್ಳಲು ಕಲ್ಪನೆ ಬೇಕು. ಅನುಭವವಿಲ್ಲದ ಜ್ಞಾನ ಒಂಯು ತರಗು ವೇದಾಂತ, ಕೆಲಸಕ್ಕೆ ಬಾರದ ಕಸ. ಕಲ್ಪನೆಯ ಮೂಸೆಯಲ್ಲಿ ಹಾದು ಆ ಕಸ ರಸವಾಗಬೇಕು."

"ಆದರೆ———"

"ನಿನ್ನ ಸಂದೇಹ ಸರಿ, ಮಗು. ಸನ್ಯಾಸಿ, ಅಖಂಡಬ್ರಹ್ಮಚಾರಿಗೆ ಪಾಪದ ಅನುಭವವಾದರೂ ಎಲ್ಲಿ ಬರಬೇಕು? ಆದರೆ ಅನುಭವವಿಲ್ಲದ ಜ್ಞಾನ ಅಪೂರ್ಣವಾಗಿಯೇ ಉಳಿದುಹೋಗುವುದು. ತರ್ಕದಿಂದ ತಿಳಿಯಲಾಗದ, ಅರಿಯಲಾರದ ಹಲವಾರು ಸಮಸ್ಯೆಗಳೂ ಇವೆ, ಮಗು. ಈಗ ಒಂದು ಸಾಮಾನ್ಯ ವಿಷಯ ತೆಗೆದುಕೊ. ಒಂದು ಸಂಸಾರದಲ್ಲಿ ಗಂಡ, ಹೆಂಡತಿ, ಅವರ ಒಂದೇ ಮಗು. ಒಂದು ರಾತ್ರಿ ಅವರ ಸುಖಸಂಸಾರದ ಮನೆಗೆ ಒಂದು ನಾಗರಹಾವು ಒಂದು ಅವರ ಮುದ್ದುಮಗುವನ್ನು ಕಚ್ಚಿಬಿಡುತ್ತದೆ. ಅವರಿಗಿದ್ದುದು ಅದೊಂದೇ ಕೂಸು, ಆ ಮಗುವಿನ ಕೂಗು ಕೇಳಿ ಗಂಡ ಹೆಂಡತಿ ಎಚ್ಚರಗೊಳ್ಳುತ್ತಾರೆ. ಹಾವಿನ್ನೂ ಹೆಡೆಯಾಡಿಸುತ್ತಾ ಅಲ್ಲಿಯೇ ನಿಂತಿದೆ. ಗಂಡ ಆ ನಿಮಿಷದ ಆವೇಶದಲ್ಲಿ ಪಕ್ಕದಲ್ಲಿದ್ದ ದೊಣ್ಣೆಯಿಂದ ಆ ಹಾವನ್ನು ಹೊಡೆದುಬಿಡುತ್ತಾನೆ."

"ಶಾಂತಂ ಪಾಪಂ, ಶಾಂತಂ ಪಾಪಂ"

"ನೋಡು, ಮಗು. ನಾಗರಹಾವನ್ನು ಅವನು ಕೊಂದನೆಂದೊಡನೆಯೇ ನೀನು ಶಾಂತಂ ಪಾಪಂ ಎಂದು ಕಿವಿ ಮುಚ್ಚಿಕೊಂಡೆ. ಆದರೆ

ಅದೇ ಮಗುವನ್ನು ಹಾವು ಕಚ್ಚಿತೆಂದಾಗ ಆ ಮಾತಾಡಲಿಲ್ಲ. ನಿನ್ನ ದೃಷ್ಟಿಯಲ್ಲಿ ಹಾವಿನ ಕೊಲೆ ಮಹಾಪಾಪ. ಆದರೆ ಮಗುವಿನ ಕೊಲೆ ! ಆ ತಂದೆಯ ದೃಷ್ಟಿಯಲ್ಲಿ ಅದು ಮಹಾಪಾಪ. ಇದರಲ್ಲಿ ಯಾರದು ತಪ್ಪು, ಯಾರದು ಸರಿ ? ''

"ಆದರೆ, ಹಾವಿನ ಕೊಲೆಯಿಂದ ಏನು ಸಾಧಿಸಿದಂತಾಯಿತು, ಗುರುಗಳೇ ? ''

"ಏನು ಸಾಧಿಸಿದಂತಾಯಿತೆನ್ನುವುದು ಮುಖ್ಯವಲ್ಲ, ಮಗು. ಯಾಕೆ ಅವನು ಹಾಗೆ ಮಾಡಿದನೆಂಬುದೇ ಮುಖ್ಯ. ನಿನ್ನ ದೃಷ್ಟಿಯಲ್ಲಿ ಪಾಪವೆಂದು ತೋರಿದುದು ಅವನ ದೃಷ್ಟಿಯಲ್ಲಿ ಅಲ್ಲ. ಅದಕ್ಕೇ ನಾನು ಹೇಳಿದುದು. ಪಾಪ, ಮಾಡುವ ಕೆಲಸದಲ್ಲಿಲ್ಲ. ನೋಡುವ ನೋಟದಲ್ಲಿದೆ.''

" ಸರಿ, ತಂದೆ.''

ಸದಾನಂದ ಮಾತಿನಲ್ಲಿ ಸರಿಯೆಂದರೂ ಮನಸ್ಸಿನಲ್ಲಿನ್ನೂ ಅಸಮಾಧಾನ ತುಂಬಿತ್ತು. ಗುರುಗಳ ಉತ್ತರದಿಂದ ಅವನಿಗೆ ಕೊಂಚವಾದರೂ ತೃಪ್ತಿಯಿರಲಿಲ್ಲ. ಗುರುಗಳು ಹೇಳಿದ ಮಾತು ಕೇಳಲು ಬಹಳ ಚೆನ್ನಾಗಿದ್ದರೂ ಅದರಲ್ಲೇನೋ ಕೊರತೆಯಿದ್ದಂತೆ ತೋರಿತು. ಅವರ ಮಾತಿನಲ್ಲಿ ತರ್ಕ ಕಾಣಲಿಲ್ಲ. ಒಂದಕ್ಕೊಂದಕ್ಕೆ ಸರಿಹೊಂದಿದಂತಿರಲಿಲ್ಲ. ಪಾಪ ಬೇರೆ, ಪುಣ್ಯ ಬೇರೆ ಎಂದು ಇದು ತನಕ ತಾನು ತಿಳಿದಿದ್ದ. ಆದರೆ ಅವುಗಳೆರಡಕ್ಕೂ ವ್ಯತ್ಯಾಸವೇ ಇಲ್ಲ. ಅದು ನೋಡುವ ನೋಟದಲ್ಲಿದೆ ಎಂದು ಗುರುಗಳು ಹೇಳಿಬಿಟ್ಟರಲ್ಲಾ, ಅದು ಹೇಗೆ ತಾನೇ ಸಾಧ್ಯ ಎಂದು ಮನಸ್ಸಿನಲ್ಲಿ ಅನುಮಾನ. ಸಂದೇಹ ಬಂದು ಅವನ ಹೃದಯದಲ್ಲಿ ಲಂಗರು ಹಾಕಿತ್ತು. ಗುರುಗಳ ಮಾತಿನಿಂದೇನೂ ಆ ಲಂಗರು ಕೀಳುವಂತಿರಲಿಲ್ಲ. ಬಾಯಿಗೆ ಮತ್ತೇನೋ ಮಾತು ಬಂತು. ಕೇಳಬೇಕೆಂದು ತಲೆಯೆತ್ತಿದ. ಗುರುಗಳು ಮತ್ತೊಮ್ಮೆ ಕಣ್ಣುಮುಚ್ಚಿ ಧ್ಯಾನಾಸಕ್ತರಾದುದನ್ನು ಕಂಡು ಬಾಯಿಂದ ಮಾತೇ ಹೊರಡಲಿಲ್ಲ. ಮಾತೆಲ್ಲಾ ತುದಿನಾಲಿಗೆಯಲ್ಲೇ ಹೂತು ಹೋದುವು. ಮೆಲ್ಲನೆ ಗುರುಗಳ ಪಾದಗಳಿಗೆ ನಮಸ್ಕಾರಮಾಡಿ ಅಲ್ಲಿಂದೆದ್ದು ನಿಂತ. ಕೈಯಲ್ಲಿ ಕಮಂಡಲು ಹಿಡಿದು, ಸಂಧ್ಯೆಯ ಕರ್ಮಗಳಿಗಾಗಿ

ನೀರು ತರಲು ನದಿಯ ಕಡೆಗೆ ಹೊರಟ. ಮನಸ್ಸಿನ ಅನುಮಾನದ ನೆರಳು ಅವನನ್ನು ಹಿಂಬಾಲಿಸಿತು. ಮುಳುಗುವ ಸೂರ್ಯನ ಕೊನೆಯ ಬೆಳಕಿನಲ್ಲಿ ಅವನ ದೀರ್ಘಕಾಯದ ನೆರಳು ದಡದಮೇಲೆ ನಿಮಿಷನಿಮಿಷಕ್ಕೂ ಬೆಳೆಯುತ್ತಿತ್ತು. ಅಂತೆಯೇ ಜತೆಗೇ ಮನಸ್ಸಿನ ಚಿಂತೆ, ಸಂದೇಹಗಳ ನೆರಳೂ ಬೆಳೆಯುತ್ತಿತ್ತು.

ವಿಶಾಲವಾಗಿ ಹರಿಹಿದ್ದ ಪ್ರವಾಹದ ಶಯ್ಯೆ. ನಡುವೆ ಅಲ್ಲಲ್ಲಿ ಚೆಲ್ಲಿದ್ದ ಹಸುರಿನ ನೆರಳು. ಪ್ರವಾಹವನ್ನೇ ಸೀಳಿಕೊಂಡು, ಎರಡು ಪಕ್ಕಕ್ಕೆ ಬೆಳಕನ್ನೊಸರುವ ಸಂಜೆಗೆಂಪುಗಿರಣ. ಸದಾನಂದ ದಡದ ಮರಳಿನ ಮೇಲೆ ನಿಂತು ಒಂದು ಕ್ಷಣಕಾಲ ನೀರನ್ನೇ ದಿಟ್ಟಿಸುತ್ತಿದ್ದ. ನದಿಯ ಅಲೆಗಳು ಮುಂದೆ ಸರಿದರೂ ಮತ್ತೆ ಹಿಂದಿರುಗಿ ಅಲ್ಲಿಯೇ ನಿಂತುಹೋದಂತೆ ಕಾಣುತ್ತಿತ್ತು. ಅಂತೆಯೇ ಅವನ ಮನಸ್ಸಿನ ಚಿಂತೆಕೂಡ. ಯಾವುದೋ ಒಂದು ಕಾಣಲಾರದ ಚಿಂತೆ ಒಂದಂತಾಗಿ ಮೇಲ್ನೆ ಮುಂದೆ ಸರಿಯುತ್ತಿತ್ತು. ಮತ್ತೆ ಅದೇ ಸ್ಥಾನದಲ್ಲಿ ಹಳೆಯ ಚಿಂತೆ. ಗುರುಗಳ ಮಾತು. ಪಾಪವೆಂದರೇನು ಎಂದು ತಾನು ಕೇಳಿದ ಪ್ರಶ್ನೆಗೆ ಗುರುಗಳು ಎಂತೆಂತಹುದೋ ಉತ್ತರ ಹೇಳಿಬಿಟ್ಟರಲ್ಲ, ತಾನು ಕೇಳಿದುದೊಂದು ಸಾಮಾನ್ಯ ಪ್ರಶ್ನೆ. ನೆಲದಲ್ಲಿ ಗೆಜ್ಜಲು ಕೆದಕಲು ಹೋಗಿ ಹಾವಿನ ಹುತ್ತ ಕಂಡಂತಾಗಿತ್ತು. ಪಾಪವೆಂದರೇನೆಂದು ತಿಳಿಯುವ ಬದಲಿಗೆ ಈಗ ಇನ್ನೂ ಕಠಿನವಾದ, ಜಟಿಲವಾದ ಸಮಸ್ಯೆಗಳನ್ನು ಮನೆಗೆ ಕರೆಸಿಕೊಂಡಂತಾಗಿತ್ತು. ಪಾಪವೂ ಇಲ್ಲ ಪುಣ್ಯವೂ ಇಲ್ಲ ಎನ್ನುವಂತಿದ್ದರೆ ಮನುಷ್ಯನೇಕೆ ಒದ್ದಾಡಬೇಕೆಂಬುದೇ ಅವನಿಗೆ ಅರ್ಥವಾಗದು. ಪಾಪ, ನರಕದ ಹೆಬ್ಬಾಗಿಲು; ಪುಣ್ಯ ಸ್ವರ್ಗದ ಬೀಗದಕ್ಕೈ ಎಂದು ಅವನು ಚಿಕ್ಕಂದಿನಿಂದ ಕೇಳಿದ್ದ, ನಂಬಿದ್ದ. ಈಗ ಗುರುಗಳು ಅವೆರಡೂ ನೋಡುವವನ ದೃಷ್ಟಿಯಲ್ಲಿದೆ ಎಂದುಬಿಟ್ಟರಲ್ಲ, ಎಂಬ ಕಳವಳ. ಗುರುಗಳ ಮಾತು ತಪ್ಪಾಗಿರಲಾರದು. ಆದರೆ ಅವನಿಗೇಕೋ ಅದರಲ್ಲಿ ಸಂಪೂರ್ಣ ನಂಬಿಕೆ ಬರಲೊಲ್ಲದು. ಅವರ ಮಾತಿನಲ್ಲಿ ಮನಸ್ಸು ಕೂಡಲು ಒಪ್ಪದೆ ಕಿತ್ತಾಡುತ್ತಿತ್ತು. ಅದಕ್ಕೆ ಹಗ್ಗ ಹಾಕಿ ಹಿಡಿದಷ್ಟೂ ಹೋರಾಟ ಹೆಚ್ಚಾಯಿತು.

ಸಂಧ್ಯಾಕರ್ಮ ಮಾಡಲು ಕುಳಿತಾಗಲೂ ಮನಸ್ಸು ಈ ಚಿಂತೆಯು ಒಲೆಯಲ್ಲಿಯೇ. ನದಿಯ ಸುಳಿಯಲ್ಲಿ ಸಿಕ್ಕಿದ ಬೆಂಡಿನ ಚೂರೊಂದು ಒಳಗೆ ಮುಳುಗಿ ಮತ್ತೆ ಮೇಲೆ ಒಂದು ಸುರುಳಿಯಲ್ಲಿ ಗಿರಗಿರನೆ ಸುತ್ತು ವಂತೆ ಅವನ ಮನಸ್ಸು ಚಿಂತೆಯ ವಿಷಚಕ್ರದಲ್ಲಿ ಸಿಕ್ಕಿಕೊಂಡಿತ್ತು. ಕರ್ಮ ವನ್ನು ಮಾಡುತ್ತ ಮಂತ್ರ ಹೇಳುತ್ತಿದ್ದವನು ಇದ್ದಕ್ಕಿದ್ದಂತೆ ನಿಲ್ಲಿಸಿದ.

"ಪಾಪೋಽಹಂ, ಪಾಪಕರ್ಮಾಹಂ ಪಾಪಾತ್ಮಾ,
ಪಾಪಸಂಭವ ; ತ್ರಾಹಿಮಾಂ ಕೃಪಯಾದೇವ"——

ಮಂತ್ರ ಬಾಯಲ್ಲಿ ಹಾಗೆಯೇ ನಿಂತಿತು. ಮನುಷ್ಯ ತನ್ನನ್ನು ತಾನೇ ಪಾಪಿಯೆಂದುಕೊಳ್ಳುವುದಿರಲಿ, ಅದಕ್ಕೂ ಒಂದು ಹೆಜ್ಜೆ ಮುಂದು ಹೋಗಿ ತಾನೇ ಪಾಪದ ಮೂರ್ತಿ, ತನ್ನ ಕರ್ಮವೆಲ್ಲ ಪಾಪವೆಂದು ಹೇಳಿ ಕೊಳ್ಳುವನಲ್ಲ. ತಾನು ಹುಟ್ಟಿದುದು ಪಾಪದಿಂದ, ತಾನು ಮಾಡುವುದೆಲ್ಲ ಪಾಪ, ತಾನೆಂದರೆ ಮೈವೆತ್ತ ಪಾಪವೆಂದು ಮಾನವ ಹೇಳಿಕೊಂಡು, ತನ್ನನ್ನೇ ತುಚ್ಛವಾಗಿ ಕಾಣುತ್ತಿಲ್ಲವೇ ? ಎಲ್ಲಕ್ಕೂ ಹೆಚ್ಚಾಗಿ ಆತ್ಮವನ್ನು ಕೂಡ 'ಪಾಪಾತ್ಮಾ' ಎನ್ನುವುದುಂಟೇ ? ಆತ್ಮ ಎಂದಿದ್ದರೂ ನಿರ್ಮಲ ವಲ್ಲವೇ ? ಗುರುಗಳೇ ಹೇಳಿದ್ದರು, ಕಮಲದ ಪತ್ರದಂತೆ ಆತ್ಮ. ನೀರು ಬಿದ್ದರೂ ಕೊಂಚವಾದರೂ ಉರುವೂ ಅದರ ಮೇಲೆ ಉಳಿಯುವುದಿಲ್ಲ. ಹಾಗೆಯೇ ಆತ್ಮವನ್ನು ಯಾವ ಕೆಸುರೂ ಮುಸುಕಲಾರದು.— ಹಾಗಿದ್ದ ಮೇಲೆ ಪಾಪಾತ್ಮಾ ಎನ್ನುವುದೇ ತಪ್ಪಲ್ಲವೇ ? ಜತೆಗೆ ಪಾಪವೆಂಬುದು ಕಾಣುವ ಕಣ್ಣಿಲ್ಲದವನಾದಮೇಲೆ ಮನುಷ್ಯನಿಗೆ ಆ ಚಿಂತೆಯಾದರೂ ಯಾತಕ್ಕೆ ? ದೇವರನ್ನಾದರೂ ಯಾತಕ್ಕೆ ಬೇಡಬೇಕು ?

ಇದೇ ಚಿಂತೆಯಲ್ಲೇ ಸದಾನಂದ ನದಿಯ ತೀರದಲ್ಲಿ ಬಹುಕಾಲ, ತನಗರಿವಿಲ್ಲದೆಯೇ ನಿಂತಿದ್ದ. ಸೂರ್ಯನಾಗಲೇ ಮುಳುಗಿ ಬಹು ಹೊತ್ತಾ ಗಿತ್ತು. ನೆರಳುಗಳು ಒಂದರೊಡನೊಂದು ಸ್ಪರ್ಧೆ ಹೂಡಿ ಬೆಳೆದು ಪ್ರಪಂಚ ವನ್ನೇ ಮುಚ್ಚಿಬಿಟ್ಟಿದ್ದುವು. ಗಾಳಿ ಕೂಡ ಇನ್ನು ಬೀಸಲು ಹೆದರಿಕೆ ಯೆನ್ನುವಂತೆ, ನಾನೂ ನೀನೂ ರಾತ್ರಿಯನ್ನು ಜತೆಯಾಗಿ ಕಳೆಯೋಣ ವೆಂದು ನದಿಯಲೆಗೆ ಪಿಸುಮಾತಾಡಿ ಒಲಿಸಿಕೊಳ್ಳಲು ಯತ್ನಿಸುತ್ತಿತ್ತು.

ನದಿ ತನ್ನಂತೆ ತಾನು ಹರಿಯುತ್ತಿತ್ತು. ಸದಾನಂದನ ಮನಸ್ಸಿನ ಚಿಂತೆಯ ಪ್ರವಾಹವೂ ಹರಿದಿತ್ತು.

ಮರುದಿನ ಬೆಳಗಾಗ ವಿದ್ಯಾರಣ್ಯರು ಸದಾನಂದನ ಮುಖ ನೋಡಿದರು. ಮತ್ತೆ ಅವರ ತುಟಿಗಳ ಮೇಲೆ ಸುಳಿದೂ ಸುಳಿಯದಂತೆ ಹೂನಗೆಯೊಂದು ಹಾದುಹೋಯಿತು. ಶಿಷ್ಯನಿಗಿನ್ನೂ ಪಾಪ-ಪುಣ್ಯಗಳ ಮೋಹ ಹೋಗಿಲ್ಲವೆನಿಸಿತು. ನಿಷ್ಕಾಮಕರ್ಮಿ ಯಾವುದನ್ನೂ ಪಾಪವೆಂದೆಣಿಸಿಯೂ ಮಾಡುವುದಿಲ್ಲ. ಪುಣ್ಯವೆಂದೆಣಿಸಿಯೂ ಮಾಡುವುದಿಲ್ಲ. ಮಾಡುವುದಷ್ಟೇ ತನ್ನ ಕೆಲಸ, ಮಾಡಿಸುವವ ಬೇರೊಬ್ಬನಿದಾನೆ. ಹೊಣೆಯೆಲ್ಲ ಅವನ ಹೆಗಲಿಗೇ ಎಂದು ಸ್ಥಿರವಾಗಿರುತ್ತಾನೆ. ಅವನೇ ನಿಜವಾದ ಯೋಗಿಯೆಂಬುದು ಸದಾನಂದನಿಗೆ ಇನ್ನೂ ತಿಳಿಯದು. ಇನ್ನೂ ಚಿಕ್ಕ ಮಗು, ಅವನು. ಅನುಭವವಿಲ್ಲ, ಕಲ್ಪನೆಯಿಲ್ಲ. ಹೇಗೆ ತಾನೆ ಅದು ತಿಳಿಯಬೇಕು ಎಂದುಕೊಂಡು ಮತ್ತೆ ಅವನ ಕಡೆಗೊಮ್ಮೆ ನೋಡಿ ನಸುನಕ್ಕರು.

"ಮಗು." ವಾತ್ಸಲ್ಯದ ದನಿಯಲ್ಲಿ ಗುರುಗಳು ಕೂಗಿದರು. ಶಿಷ್ಯ ಪಾಪ ಪುಣ್ಯಗಳ ಚಕ್ರತೀರ್ಥದಲ್ಲಿ ಸಿಕ್ಕಿದವನು ಅವರ ಮಾತು ಕೇಳಲಿಲ್ಲ. ಮತ್ತೊಮ್ಮೆ ಗುರುಗಳು ಅದೇ ವಾತ್ಸಲ್ಯದಿಂದ ಕೂಗಿದರು.

"ಮಗು."

"ಗುರುಗಳೇ ?" ತಕ್ಷಣ ಬೆಚ್ಚಿ ಎಚ್ಚತ್ತ ಸದಾನಂದ.

"ಮಗು—ಯಾಕೆ ಸಪ್ಪಗಿರುವೆಯಲ್ಲಾ ?—"

ಗುರುಗಳಿಗೆ ಹೇಳಲೋ ಬೇಡವೋ ಎಂದು ಸದಾನಂದನ ಮನಸ್ಸಿನಲ್ಲಿ ಶಂಕೆ. ಹೇಳಿದರೆ ಹೇಗೋ, ಬಿಟ್ಟರೆ ಹೇಗೋ—ಈ ತುಮುಲದಲ್ಲಿ ಮೌನವಾಗಿಯೇ ತಲೆ ತಗ್ಗಿಸಿ ನಿಂತಿದ್ದ.

"ಮಗು, ಇಂದು ಶುಕ್ರವಾರ. ಶಾರದೆಯ ಪೂಜೆಯಾದ ಒಡನೆಯೇ ಪ್ರಸಾದವನ್ನು ರಾಯನಿಗೆ ಕೊಡಬೇಕು, ನೆನಪಿದೆಯೇ ?" ಎಂದರು.

"ಸರಿ, ಗುರುಗಳೇ"

"ಹಾಗೆಯೇ, ನಗರಕ್ಕೆ ಹೋದಾಗ—"

ಗುರುಗಳು ಅರೆನಿಮಿಷ ತಡೆದರು. ಸದಾನಂದ ತಲೆಯೆತ್ತಿದ.

"—ನಗರಕ್ಕೆ ಹೋದಾಗ ಶಿವದೇವಾಲಯದ ದಕ್ಷಿಣದ ಬೀದಿಯಲ್ಲಿರುವ ನರ್ತಕಿ, ಮೈಥಿಲಿಗೂ ಪ್ರಸಾದ ಕೊಟ್ಟು ಬಾ. ನಮ್ಮ ಆಶೀರ್ವಾದ ತಿಳಿಸಿ ಬಾ."

ಗುರುಗಳ ಮಾತಿನಿಂದ ಶಿಷ್ಯ ಬೆಕ್ಕಸಬೆರಗಾದ. ಎಂತಹ ಆಶ್ಚರ್ಯ! ವಿದ್ಯಾರಣ್ಯರು—ನರ್ತಕಿ ಮೈಥಿಲೀ! ಇದೇನೀ ವಿಲಕ್ಷಣ ಸಂಬಂಧ! ಯಾವುದೂ ಅರ್ಥವೇ ಆಗುವುದಿಲ್ಲ! ಮುಂದಲ್ಲಿ ಆಶ್ಚರ್ಯ ಹೊತ್ತ ಸದಾನಂದನ ದೃಷ್ಟಿ ಗುರುಗಳಲ್ಲೇ ನಟ್ಟಿತ್ತು.

"ಮೈಥಿಲಿಯ ಆತಿಥ್ಯ ಸ್ವೀಕರಿಸಲು ನಮ್ಮದೇನೂ ಅಡ್ಡಿಯಿಲ್ಲವೆಂದೂ ತಿಳಿಸು. ಎಂದು ನಾವು ಬರುವೆನೆಂಬುದನ್ನು ಮುಂದೆ ತಿಳಿಸುವೆವೆಂದೂ ಹೇಳು."

ಈಗಂತೂ ಸದಾನಂದ ನಿಂಬದಾದ. ನರ್ತಕಿ ಮೈಥಿಲಿಯ ಆತಿಥ್ಯ! ವಿದ್ಯಾರಣ್ಯರೇ? ಸ್ವೀಕರಿಸುವರೇ? ಇದು ಹಿಮಾಲಯ ಕರಗಿ ಬೆಟ್ಟವಾಗಿ ಹೋದಂತಲ್ಲವೇ? ನರ್ತಕಿ ಮೈಥಿಲೀ—ಪಾಪದ ನೆಲಗಟ್ಟು! ವಿದ್ಯಾರಣ್ಯರು ಪುಣ್ಯಮೂರ್ತಿ! ಎರಡು ಬೇರೆ ಬೇರೆ ಪ್ರಪಂಚಗಳೇ ಆದುವು! ಅಂತಹುದು ಒಂದಿಗೆ ಬರಲು ಸಾಧ್ಯವೇ?—ಈ ಚಿಂತೆ ಸದಾನಂದನ ಮನಸ್ಸಿನ ಬೆಂಕಿಗೆ ಆಜ್ಯ ಹೊಯ್ದಂತಾಯಿತು.

ಸದಾನಂದ ಗುರುಗಳ ಆಶೀರ್ವಾದವನ್ನೂ, ಅವರು ಕಳುಹಿಸಿದ ಪ್ರಸಾದವನ್ನೂ ತೆಗೆದುಕೊಂಡು ವಿಜಯನಗರಕ್ಕೆ ನಡೆಯುತ್ತಾ, ಮೈಥಿಲಿಯ ವಿಷಯವಾಗಿ ಒಂದೇ ಸಮನಾಗಿ ಯೋಚನೆಮಾಡುತ್ತಿದ್ದ. ಹಿಂದಿನದಿನ ಪಾಪದ ವಿಷಯವಾಗಿ ನಡೆದ ಚರ್ಚೆ ಮೈಥಿಲಿಯಲ್ಲಿ ಕೊನೆಗಂಡಂತಿತ್ತು. ಪಾಪಕ್ಕೆ ಬದಲು ಈಗ ಮೈಥಿಲೀ! ಮೈಥಿಲಿಯೆಂದರೆ ಪಾಪದ ಕಂತೆಯೆಂದು ಸದಾನಂದನ ಹೃದಯದ ಒಳನಂಬಿಕೆ. ಅವನು ಇದು ತನಕ ಆಕೆಯನ್ನು ನೋಡಿರಲಿಲ್ಲ. ಆಕೆಯನ್ನು ನೋಡಲು ಅವನಿಗೆ ಇಷ್ಟವೂ ಇರಲಿಲ್ಲ. ಅಷ್ಟೇಕೆ ಈ ದಿನ ಗುರುಗಳು ಅವಳಲ್ಲಿಗೆ ಅವನನ್ನು ಕಳುಹದಿದ್ದರೆ ಆಕೆಯ ವಿಚಾರ ಯೋಚಿಸುತ್ತಲೂ ಇರಲಿಲ್ಲ. ಆದರೆ ಬೇಕಾದಷ್ಟು ಆಕೆಯ ವಿಷಯ ಮಾತು ಕೇಳಿದ್ದ. ಮೈಥಿಲೀ ವಿಜಯನಗರದ ಆಸ್ಥಾನ

ನರ್ತಕಿ. ಬಹಳ ಹೆಸರಾದ ಕುಣಿಯುವ ಹೆಣ್ಣು. ಅವಳಂತಹ ರೂಪ ವಂತ ಹೆಂಗಸು ವಿಜಯನಗರದಲ್ಲಿ ಮಾತ್ರವೇ ಏಕೆ, ಸಾಮ್ರಾಜ್ಯದಲ್ಲೇ ಇಲ್ಲವೆಂದು ಕೇಳಿಬಲ್ಲ. ಆದರೆ ಹೆಂಗಸಿನ ಸೌಂದರ್ಯ ತನಗೇನು ಗೊತ್ತು? ಸದಾನಂದ ಕಂಡಿದ್ದುದು ತನ್ನ ತಾಯಿಯೊಬ್ಬಳನ್ನು. ಉಳಿದವರನ್ನು ಕಣ್ಣೆತ್ತಿಯೂ ನೋಡದವನು. ದೇವನಲ್ಲದೆ ಮತ್ತಾರ ವಿಷಯವೂ ಆಸಕ್ತಿ, ಅಭಿರುಚಿ ತೋರದವನಿಗೆ ಹೆಣ್ಣಿನ ಸೌಂದರ್ಯ, ರೂಪದ ಆಕರ್ಷಣೆ ಹೇಗೆ ಗೊತ್ತಾಗಬೇಕು? ಆದರೂ ಹೇಳಿ ಕೇಳಿ ಆಕೆ ಅತ್ಯಂತ ರೂಪವತಿ ಯೆಂದು ಕೇಳಿದ್ದ. ಇನ್ನು ನರ್ತಕಿಯೆಂದ ಮೇಲೆ ಕೇಳಬೇಕಾಗಿಲ್ಲ. ವಿಲಾಸಕ್ಕೆ ಆಕೆಯ ನರ್ತನವೊಂದು ಸಾಮಗ್ರಿ. ಆಕೆ ಮತ್ತೊಂದು ಸಾಮಗ್ರಿ. ಪಾಪರೂಪ ಆಕೆ! ಅಂತಹ ಮೈಥಿಲಿಗೆ ಗುರುಗಳು ಪ್ರಸಾದ, ಆಶೀರ್ವಾದ ಕೊಟ್ಟು ಕಳುಹಿಸಿರುವರಲ್ಲಾ, ಇದು ಸರಿಯೇ? ಎಂದು ಸದಾನಂದ ಒಂದೇ ಸಮನಾಗಿ ಬಗೆಹರಿಯದ ಸಮಸ್ಯೆಯ ಗಂಟುಗಳನ್ನು ಬಿಚ್ಚುತ್ತಾ ನಡೆದ. ಗುರುಗಳ ವಿಷಯದಲ್ಲಿ ಸಂದೇಹ ಪಡುವಂತಿಲ್ಲ. ಮತ್ತೆ? ಗುರುಗಳು ಹೀಗೆ ಪ್ರಸಾದ ಕಳುಹಿಸಿದುದರಲ್ಲಿ ಏನೋ ಗೂಢವಿರ ಬೇಕೆಂದೆನಿಸಿತು. ಅದೂ ತನ್ನನ್ನೇ ಕಳುಹಿಸಿದುದಕ್ಕೆ ಏನೋ ಒಳ ಅರ್ಥ ವಿರಲೇಬೇಕು ಎಂದು ಮನಸ್ಸಿನಲ್ಲಿ ಕೊಂಚ ಎಣಿಕೆ ಹಾಕಿದಂತೆ ತೊಡಕು ಬಿಡಿಸಿದಂತಾಯಿತು. ಪಾಪದ ಹಾದಿಯಲ್ಲಿರುವ ಮೈಥಿಲಿಯನ್ನು ಪುಣ್ಯಕ್ಕೆ ಕರೆದೊಯ್ಯುವ ಕಾರ್ಯವನ್ನು ಗುರುಗಳು ತನಗೆ ವಹಿಸಿರುವರು. ಅದಕ್ಕಾಗಿಯೇ ಈ ಸೇವ. ಇದೊಂದು ನಿಮಿತ್ತ ಮಾತ್ರ. ನಿಮಿತ್ತಮಾತ್ರ! ನಿಜ ವಾಗಿಯೂ ಆಕೆಯನ್ನು ಪುಣ್ಯದ ದಾರಿಗೆ ತಂದೇಬಿಡುತ್ತೇನೆ, ಪಾಪದಿಂದ ಆಕೆಗೆ ಮುಕ್ತಿ ಕೊಡಿಸುತ್ತೇನೆಂದು ಸದಾನಂದ ತೀರ್ಮಾನಿಸಿಕೊಂಡ. ಮನಸ್ಸು ಕೊಂಚ ಹಗುರವಾಯಿತು. ಹೆಜ್ಜೆ ಹೆಚ್ಚಾಯಿತು.

ಒಂದು ಗಳಿಗೆ ಮಾತ್ರ! ಎವೆಯಿಕ್ಕುವಷ್ಟುಕಾಲ ಮಾತ್ರ ಒಬ್ಬರ ನೊಬ್ಬರು ದಿಟ್ಟಿಸಿದರು. ಮರುನಿಮಿಷವೇ ಸದಾನಂದನ ಕಾಲುಗಳಿಗೆ ಆಕೆಯ ತಲೆ ಸೋಕಿತು. ದಾರಿಯಲ್ಲಿ ಅವನು ಏನೇನೋ ಎಣಿಕೆ ಹಾಕಿ ಕೊಂಡ. ಆಕೆಯನ್ನು ಹೀಗೆ ಮಾತನಾಡಿಸಬೇಕು. ಈ ರೀತಿಯಲ್ಲಿ

ಬುದ್ಧಿ ಹೇಳಬೇಕು. ಆ ರೀತಿಯಲ್ಲಿ ಬಯ್ಯಬೇಕು ಎಂದು ತೂಕವಿಟ್ಟು ಮಾತುಗಳನ್ನೆಲ್ಲಾ ಪೋಣಿಸಿ ಸಿದ್ಧವಾಗಿಟ್ಟುಕೊಂಡಿದ್ದ. ಆದರೆ ಅವಳನ್ನು ನೋಡಿದ ಗಳಿಗೆಯೇ ಆ ಮಾತೆಲ್ಲಾ ಎಲ್ಲಿಯೋ ಹಾರಿಹೋದುವು. ಬಿರುಗಾಳಿಗೆ ಸಿಕ್ಕಿದ ತರಗೆಲೆಗಳಂತೆ ಎಲ್ಲಿಯೋ ಮಾಯವಾಗಿದ್ದುವು. ಅವಳನ್ನು ನೋಡಿದ ಅರ್ಧಕ್ಷಣ ಎದೆಯನ್ನು ನಡುಗಿಸಿದಂತಾಯಿತು. ಎಲ್ಲವೂ ಮರೆತುಹೋಯಿತು. ಎದುರಿಗೇ ನಿಂತಿದ್ದ ಮೈಥಿಲಿಯೂ ಕಾಣಲಿಲ್ಲ. ತಾನಿದುವರೆಗೂ ಕಾಣದ, ತಿಳಿಯದ ಏನೋ ಒಂದು ಹೇಳಲಾರದ ಬೆಳಕಿನಲ್ಲಿ ಅರೆಕ್ಷಣ ಮಿಂದು ಮುಳುಗಿದ. ಆಗ ಹೊರ ಜಗತ್ತೆಲ್ಲ ಮರೆಯಾಗಿ ಮನಸ್ಸು ಸಚ್ಚಿದಾನಂದವಾಗಿತ್ತು. ಆದರೆ ತಕ್ಷಣವೇ ಮತ್ತೆ ಮೈಯರಿವು. ತಾನು ಸಾಧು ಸದಾನಂದ, ವಿದ್ಯಾರಣ್ಯರ ಶಿಷ್ಯ. ಒಂದಿರುವುದು ನರ್ತಕಿ ಮೈಥಿಲಿಯ ಮನೆಗೆ, ಪ್ರಸಾದ ಕೊಟ್ಟು ಆಶೀರ್ವಾದ ಮಾಡಿ ಹೋಗಲು, ಎಂದು ನೆನಪಾಯಿತು. ತನ್ನ ಪಾದಗಳಿಗೆ ನಮಸ್ಕರಿಸಿದ ಆಕೆಯ ಕಡೆಗೆ ಕೈ ನೀಡಿದ. ಆದರೆ ಏನು ಆಶೀರ್ವಾದ ಮಾಡಬೇಕೆಂಬುದು ಒಡನೆಯೇ ತೋಚದೆ ಕೊಂಚ ಬಾಯಿ ತೊದರಿತು. ಸುಮಂಗಲಿಯಾಗಿ ಬಾಳೆನ್ನುವುದು ಸಾಗದುದು. ಆಕೆ ಎಷ್ಟಿದ್ದರೂ ಭೋಗ ವಿಲಾಸದ ಒಂದು ಸಾಮಗ್ರಿ, ನರ್ತಕಿ. ಮತ್ತಿನ್ನೇನು ಹೇಳಲು ಸಾಧ್ಯ! ಅವನಿಗರಿವಿಲ್ಲದೆಯೇ ಅವನ ಮನಸ್ಸಿನ ಮಾತು ಹೊರಬಿತ್ತು. "ಪಾಪದ ಹಾದಿ ಬಿಟ್ಟು ಪುಣ್ಯದ ಹಾದಿಗೆ ಬಂದು ಸುಖವಾಗಿ ಬಾಳು!" ಎಂದು ಹರಸಿದ. ಆ ಮಾತಿನಲ್ಲಿ ಗಾಂಭೀರ್ಯವಿತ್ತು. ಗಡುಸಿತ್ತು. ಪುಣ್ಯದ ಆವೇಶದ ಜತೆಗೆ ಪಾಪವನ್ನೆದುರಿಸುವ ದಿಟ್ಟತನವೂ ಇತ್ತು.

ಮೈಥಿಲೀ ಎದ್ದುನಿಂತು ಕೈಮುಗಿದಳು. ಸದಾನಂದ ಅವಳ ಕಡೆಗೆ ನೋಡದೆಯೇ ಕೈಯನ್ನು ಅವಳ ಕಡೆಗೆ ನೀಡಿದ. ಮೈಥಿಲೀ ಭಕ್ತಿಯಿಂದ ಕೈ ನೀಡಿದಳು. ನಾಲ್ಕು ಹೂವು, ಬಿಳಿ ಮಲ್ಲಿಗೆ ಹೂವು ಅವಳ ಕೈಗಳಿಗೆ ಬಿದ್ದುವು.

"ಗುರುಗಳು ಕಳುಹಿಸಿದ ಪ್ರಸಾದ. ಗುರುಗಳು ಆಶೀರ್ವಾದ ಕಳುಹಿಸಿದಾರೆ" ಎಂದ ಸದಾನಂದ ನಿರಾಸಕ್ತ ದನಿಯಲ್ಲಿ.

"ಪಾಪಿಯ ಮೇಲೆ ಗುರುಗಳ ಕರುಣೆ ಬಹಳ" ಎಂದಳು ನಮ್ರತೆ ಯಿಂದ ಮೈಥಿಲೀ.

ಸದಾನಂದನಿಗೆ ಆಕೆಯ ಮಾತಿನಿಂದೇನೋ ಒಂದು ಬಗೆಯ ಸಂತೋಷ. 'ಪಾಪಿ' ಯೆಂದು ತನ್ನನ್ನು ತಾನೇ ಕರೆದುಕೊಂಡಳಲ್ಲ. ಪಾಪವೆಂದು ಅವಳಿಗೆ ಗೊತ್ತಿರಬೇಕಾದರೆ ಅವಳನ್ನು ಅಲ್ಲಿಂದ ಬಿಡುಗಡೆ ಮಾಡಿಸುವುದು ಕಠಿನವಲ್ಲವೆನಿಸಿತು.

"ಗುರುಗಳು ಕರುಣಾಮೂರ್ತಿ. ಅವರ ಕರುಣೆಗೆ ಎಲ್ಲರೂ ಪಾತ್ರರೇ. ಆದರೆ ಪಾಪದಿಂದ ದೂರವಾಗಲು ಯತ್ನಿಸಿದರೆ ಅವರ ಕರುಣೆ ಸಾರ್ಥಕ."

ಸದಾನಂದನ ಮಾತು ಕೇಳಿ ಮೈಥಿಲೀ ಚಕಿತಳಾದಳು. ಮೆಲ್ಲನೆ ಕಣ್ಣರಳಿಸಿ ಅವನ ಕಡೆ ನೋಡಿದಳು. ಸನ್ಯಾಸಿ—ಎಂತಹ ಸನ್ಯಾಸಿ! ಮೊದಲು ಅವನನ್ನು ನೋಡಿದಾಗಲೇ ಅವನ ದೀರ್ಘಕಾಯವನ್ನು ಕಂಡು ಬೆರಗಾಗಿದ್ದಳು. ಆಜಾನುಬಾಹು, ಸುಂದರರೂಪಿ. ಸಂಯಮ, ಯೋಗ ಗಳ ಅಭ್ಯಾಸದಿಂದ ಮುಖದಲ್ಲೊಂದು ಅನಿರ್ವಚನೀಯ ವರ್ಚಸ್ಸು. ಕಣ್ಣುಗಳಲ್ಲಿ ಒಂದು ಅಪೂರ್ವ ನಿರ್ಮಲ ಕಾಂತಿ, ಹೊಳಪು. ಆಗಲೇ ಮೈಥಿಲೀ ಸನ್ಯಾಸಿಗೆ ಮನಸೋತಿದ್ದಳು. ಈಗಂತೂ ಅವಳ ಆಶ್ಚರ್ಯಕ್ಕೆ ಮಿತಿಯೇ ಇಲ್ಲ. ಇನ್ನೂ ಇದೇತಾನೆ ಬಂದ ಸನ್ಯಾಸಿ, ತನ್ನನ್ನಾಗಲೇ ಪಾಪದ ಹಾದಿ ತುಳಿಯದಂತೆ ಬೋಧಿಸಲು ಹೊರಟಿದಾನೆ. ಎಂದ ಮೇಲೆ ಆತನ ಶ್ರದ್ಧೆ, ಪುಣ್ಯದಲ್ಲಿ ಆತನ ಆಸಕ್ತಿ ಎಷ್ಟಿರಬೇಕು! ಮೈಥಿಲಿಗೆ ಸದಾ ನಂದನಲ್ಲಿದ್ದ ಗೌರವ ಒಮ್ಮೆಗೇ ಏರಿತು. ಆತನ ಮಾತಿಗೆ ಏನೂ ಉತ್ತರ ಕೊಡದೆ ಮತ್ತೆ ತಲೆ ಬಾಗಿಸಿ ನಿಂತಳು.

ತಲೆ ಬಾಗಿಸಿದಂತೆ ಅವನ ಪಾದಗಳ ಮೇಲೆ ಅವಳ ದೃಷ್ಟಿಬಿತ್ತು. ಎಂತಹ ಸುಂದರವಾದ ಕಾಲುಗಳು. ಎಷ್ಟೊಂದು ಅಚ್ಚುಕಟ್ಟಾಗಿ, ಪರಿ ಪೂರ್ಣವಾಗಿವೆ. ನೃತ್ಯಕ್ಕೆ ಸರಿಯಾದ ಕಾಲುಗಳು, ಆ ಕಾಲುಗಳಿಗೆ ಗೆಜ್ಜೆಕಟ್ಟಿದರೆ, ಬರಿಯ ಝಣಕಾರದಲ್ಲಿಯೇ ಸ್ವರ್ಗವನ್ನು ಭೂಮಿಗಿಳಿಸ ಬಲ್ಲುವು ಎನಿಸಿತು. ಆ ಪಾದಗಳನ್ನು ಸೇವೆ ಮಾಡುವ ಭಾಗ್ಯ ಯಾವ ಹೆಂಗಸಿನದೋ ಎಂದುಕೊಂಡಳು. ತಕ್ಷಣ ಒಂದು ಬಗೆಯಾದ ಅಸೂಯೆ

ಹೃದಯವನ್ನು ಈಟಿತು. ಎಷ್ಟಿದ್ದರೂ ಮೈಥಿಲೀ ಹೆಂಗಸು. ಸುಂದರ ವಸ್ತು ಯಾವುದಾದರೂ ಇದ್ದರೆ ಅದು ಇನ್ನೊಬ್ಬರಿಗಿದೆಯಲ್ಲಾ, ನನಗಿಲ್ಲವಲ್ಲಾ ಎನ್ನುವ ಅಸೂಯೆ ಹೆಣ್ಣಿನ ಮೂಲಭಾವ. ಅಂದ ಮೇಲೆ ಮೈಥಿಲೀ ಆ ಪಾದಗಳನ್ನು ಸೇವಿಸಲು ಬಯಸಿದುದು ಸಹಜವೇ.

"ತಮ್ಮ ಪಾದಧೂಳಿ ಧರಿಸಲು—" ಎಂದಳು ಮೆಲ್ಲನೆ.

"ಛೆ! ಛೆ! ನಾನೂ ನಿನ್ನಂತೆಯೇ ಒಬ್ಬ ಜೀವಿ. ನನ್ನ ಪಾದ ಧೂಳಿಯನ್ನೇಕೆ—"

"ಇಲ್ಲ. ತಾವು ಕೃಪೆಮಾಡಬೇಕು. ಪಾದಪೂಜೆ ಮಾಡುವುದು ಹಿರಿಯರಿಗಲ್ಲದೆ ಮತ್ತಾರಿಗೆ?" ಎಂದು ಮೈಥಿಲೀ ಮುಂದೆ ಬಂದಳು. ದಾಸಿ ಅಗಲವಾದ ಭಂಗಾರದ ತಟ್ಟೆಯನ್ನು ತಂದಿಟ್ಟಳು. ಸದಾನಂದ ಮನಸ್ಸಿಲ್ಲದ ಮನಸ್ಸಿನಿಂದ ಅದರಲ್ಲಿ ನಿಂತ. ಹುಂ! ಗುರುಗಳೇ ಅವಳ ಆತಿಥ್ಯ ಸ್ವೀಕರಿಸಬಹುದಂತೆ, ನಾನು ಕಾಲು ತೊಳೆಸಿಕೊಂಡರೆ ತಪ್ಪಾಗಲಾರದು ಎಂದು ಒಂದು ಮನಸ್ಸು. ಪಾಪಿಯ ಸ್ಪರ್ಶದಿಂದ ಪಾಪದ ಸೋಂಕಾದೀತು ಎಂದು ಎಚ್ಚರಿಸಿತು ಮತ್ತೊಂದು ಮನಸ್ಸು. ಆ ಪಾಪಿಯ ಪಾಪ ತೊಡೆದು ಹಾಕಲು ತಾನು ತನ್ನ ಸರ್ವಶಕ್ತಿಯನ್ನೂ ವಿನಿಯೋಗಿಸಬೇಕೆಂದು ತೀರ್ಮಾನಿಸಿಲ್ಲವೇ? ಮತ್ತೆ ಇದರಿಂದ ತನಗಾವ ಕೆಡುಕೂ ಇಲ್ಲವೆಂದು ಒಂದು ಮನಸ್ಸು. ಅವನ ಈ ಇಬ್ಬಗೆಯ ಚಿಂತನೆಯನ್ನರಿಯದ ಮೈಥಿಲೀ ಮೃದುವಾಗಿ ಮಗುವಿಗೆ ನೀರೆರೆಯುವಂತೆ ಅವನ ಕಾಲುಗಳನ್ನು ತೊಳೆಯುತ್ತಿದ್ದಳು.

"ದೊಡ್ಡ ಮನಸ್ಸು ಮಾಡಿ, ಈ ದೀನೆಯ ಆತಿಥ್ಯ ಸ್ವೀಕರಿಸಬೇಕು" ಎಂದಳು ಮೈಥಿಲೀ. ಮತ್ತೆ ಸದಾನಂದನ ಮನಸ್ಸಿನಲ್ಲಿ ತುಮುಲ ಕೋಲಾಹಲ. ಒಪ್ಪಿದರೆ ಹೇಗೋ, ಬಿಟ್ಟರೆ ಹೇಗೋ! ಆದರೆ ಗುರುಗಳೇ ಅವಳ ಆತಿಥ್ಯ ಸ್ವೀಕರಿಸಿದಮೇಲೆ ಮತ್ತೇನು? ಜತೆಗೆ ಆಕೆಯನ್ನು ಪುಣ್ಯದ ಹಾದಿಯಲ್ಲಿ ತರಲು ಇದೂ ಸಹಕಾರಿಯಾಗುವಂತಿದ್ದರೆ ಯಾಕಾಗಬಾರದು. ತನ್ನ ಮನಸ್ಸಿನ ಕೋಟೆ ಭದ್ರವಾಗಿರುವಾಗ ಯಾವ ಪಾಪ ತಾನೇ ಅಲ್ಲಿ ಮುತ್ತಿಗೆ ಹಾಕಿ ಏನು ಗಳಿಸೀತು?

ಸದಾನಂದ ಒಂದು ಲೋಟ ಹಾಲು ಕುಡಿದ. ಹಾಗೆಯೇ ಕುಳಿತು, ಆ ಕಡೆ ಕುಳಿತ ಮೈಥಿಲಿಯನ್ನು ನೋಡದೆಯೇ ಮಾತನಾಡುತ್ತಿದ್ದ.

"ಪ್ರಪಂಚದಲ್ಲಿ ಯಾರ ಕೃಪೆಯೇ ಆಗಲಿ, ಕರುಣೆಯೇ ಆಗಲಿ, ಆಶೀರ್ವಾದವೇ ಆಗಲಿ ಫಲಿಸಬೇಕಾದರೆ ನಾವು ಅದಕ್ಕೆ ಯೋಗ್ಯರಾಗಿರಬೇಕು. ಅಷ್ಟೇ ಅಲ್ಲದೆ ನಾವೂ ಪ್ರಯತ್ನಪಡಬೇಕು. ಪಾಪದ ಹಾದಿ ತುಳಿಯುತ್ತಲೇ ಇರುವವರಿಗೆ ಆಶೀರ್ವಾದದಿಂದ ಏನೂ ಉಪಯೋಗವಿಲ್ಲ."

"ಪಾಪದ ಹಾದಿಯೆಂದರೇನು, ಸ್ವಾಮಿ?" ಎಂದಳು ಮೈಥಿಲೀ.

"ಪಾಪದ ಹಾದಿಯೆಂದರೆ ನರಕದ ಹೆದ್ದಾರಿ, ಯಾವುದು ದೇವರಿಗೆ ಸಮರ್ಪಿತವಲ್ಲವೋ, ಯಾವುದು ಮಾನವನ ವಿಲಾಸಕ್ಕಾಗಿರುವುದೋ, ಯಾವುದು ಮನುಷ್ಯನನ್ನು ಭೋಗಕ್ಕೊಯ್ದು ನೂಕುವುದೋ ಅದು ಪಾಪ."

ಮೈಥಿಲೀ ಅವನ ಮಾತಿಗೆ ಚಳಿ ಬಂದವಳಂತೆ ನಡುಗಿದಳು. ತನ್ನನ್ನು ನೇರವಾಗಿ ಸನ್ಯಾಸಿ ಮಾತುಗಳಿಂದ ಕತ್ತರಿಸುತ್ತಿರುವನು. ಇನ್ನೇನು ಗತಿಯೆಂದು ತತ್ತರಿಸಿದಳು. ಬಹು ಕಷ್ಟದಿಂದ ತಾನೂ ಬಾಯಿಹಾಕಲು ಯತ್ನಿಸಿದಳು.

"ಆದರೆ—"

ಸದಾನಂದ ಅವಳ ಮಾತಿಗೆ ಅನುವೇ ಕೊಡಲಿಲ್ಲ. ತನ್ನ ಸುತ್ತಿಗೆಯ ಪೆಟ್ಟುಗಳನ್ನು ನಿಲ್ಲಿಸಲಿಲ್ಲ.

"ದೇವರು ಕೊಟ್ಟ ಸೌಂದರ್ಯ ದೇವರ ಸೇವೆಗೇ ಸಲ್ಲಬೇಕು. ಕೆರೆಯ ನೀರು ಮತ್ತೆ ಕರೆಗೇ! ದೇವರು ತನ್ನ ಸೇವೆಗಾಗಿ ಕೊಟ್ಟ ಸೌಂದರ್ಯವನ್ನು ವಿಲಾಸದ ಉಪಶಮನಕ್ಕಾಗಿ, ಮಾನವನ ಭೋಗಕ್ಕಾಗಿ ಉಪಯೋಗಿಸುವುದು ಪಾಪಕಾರ್ಯ. ಹೂವನ್ನು ಕಿತ್ತು ದೇವರಿಗೆ ಪೂಜೆಮಾಡುವ ಬದಲು ಧೂಳಿನಲ್ಲಿ ಎಸೆದಂತೆ. ಅದು ಮಹಾಪಾಪ!"

"ಆದರೆ—ಮನುಷ್ಯ—ವಾತ್ಸಲ್ಯ—"

"ಅವೆಲ್ಲವೂ ಮಾಯೆ. ಮೋಹಗಳನ್ನೆಲ್ಲಾ ಬಿಟ್ಟುಬಿಡಬೇಕು. ದೇವರು ನಮ್ಮನ್ನು ಪರೀಕ್ಷಿಸಬೇಕೆಂದು ದಾರಿಯಲ್ಲಿ ನೂರು ಬಗೆಯ ತೊಡಕು ಸೃಷ್ಟಿಸುತ್ತಾನೆ. ನೂರು ಬಗೆಯ ಆಸೆಗಳನ್ನು ಒಡ್ಡುತ್ತಾನೆ. ಸಾವಿರ ರೀತಿಯ ಅಭಿಲಾಷೆಯ ಬಲೆಗಳನ್ನು ಬೀಸುತ್ತಾನೆ. ಪಾಪ ಯಾವಾಗಲೂ ಆಕರ್ಷಕ. ಅದೂ ದೇವರ ಒಂದು ಸೃಷ್ಟಿಯ ಮಾಯೆ. ಅವುಗಳನ್ನೆಲ್ಲಾ ದಾಟಿ, ಮಾಯೆಯನ್ನು ಹರಿದು, ಆಸೆ, ಅಭಿಲಾಷೆಗಳನ್ನೆಲ್ಲಾ ಹಿಂದೆಸೆದು, ಪಾಪವನ್ನು ಕಿತ್ತೆಸೆದು, ಅಚಲಭಕ್ತಿಯಿಂದ, ಅಚಲ ಶ್ರದ್ಧೆಯಿಂದ ಪುಣ್ಯದ ಹಾದಿ ತುಳಿಯಬೇಕು. ಆಗಲೇ ಜೀವನ ಸಾರ್ಥಕ."

ಮೈಥಿಲೀ ಮಂತ್ರಮುಗ್ಧಳಂತೆ ಅವನನ್ನೇ ಎವೆಯಿಕ್ಕದೆ ನೋಡುತ್ತಿದ್ದಳು. ಸುಂದರರೂಪಿ ಸನ್ಯಾಸಿಯಲ್ಲಿ ಎಂತಹ ಸುಂದರವಾದ ಮಾತುಗಳು. ಅವನ ಮೈಸೊಗಸಿನ ಜತೆಗೆ ವಿಚಾರದ ಸೊಗಸೂ ಸೇರಿಕೊಂಡು ಅವಳಿಗೆ ಮೋಡಿ ಹಾಕಿತ್ತು. ಒಂದೇ ಸಮನಾಗಿ, ಕಣ್ಣು ಕೀಳದೆ ಅವನನ್ನೇ ದೃಷ್ಟಿಸುತ್ತಿದ್ದಳು. ಸದಾನಂದ ಮಾತಾಡುತ್ತಾ ಆಡುತ್ತಾ ಅವಳ ಕಡೆಗೊಮ್ಮೆ ತಿರುಗಿದ. ತಕ್ಷಣವೇ ಮುಳ್ಳು ಚುಚ್ಚಿದ ಕೈ ಹಿಂದೆಳೆದುಕೊಳ್ಳುವಂತೆ ಬೇರೆ ಕಡೆಗೆ ದೃಷ್ಟಿ ತಿರುಗಿಸಿದ. ಎದೆ ಯಾಕೋ ಜಿಲ್ಲೆಂದಿತು. ಅಚಲಸಂಪತೆಯು ಅತಿ ಸಡಿಲವಾದಂತಾಯಿತು. ಹೃದಯದಲ್ಲಿದ್ದ ಶ್ರದ್ಧೆಯು ಬುಡ ನಡುಗಿತು, ಒಂದು ಗಳಿಗೆ ಮಾತ್ರ! ಮತ್ತೆ ಮೊದಲಿನಂತೆಯೇ ಮಾತು.

"ಈ ಪ್ರಪಂಚದ ಮಾಯೆ ಕಳಚಬೇಕು. ಅವಿಚಲವಾದ, ಅನಂತವಾದ ಸುಖ ಸಿಗಲು ಅದೊಂದೇ ಮಾರ್ಗ. ಹೊರರೂಪದ ಮೋಹ, ಹೊಗಳಿಕೆಯ ಪೂಜೆ, ಹಣದ ಆಕರ್ಷಣೆ ಇವುಗಳೆಲ್ಲ ಪಾಪದ ಕೂಪಕ್ಕೆ ಮೆಟ್ಟಿಲುಗಳು ಅವುಗಳನ್ನಷ್ಟನ್ನೂ ಕಳಚಬೇಕು, ಅವುಗಳನ್ನು ಇಲ್ಲವಾಗಿಸಬೇಕು, ಮನಸ್ಸು ಶುದ್ಧವಾಗಬೇಕು, ಮಾಡುವ ಕೆಲಸ ಶುದ್ಧವಾಗಬೇಕು. ಅದು ಪುಣ್ಯದ ಹಾದಿ."

ಮೈಥಿಲೀ ಕೇಳುತ್ತ ಕುಳಿತಿದ್ದಳು. ಈ ಯುವಕ ಸನ್ಯಾಸಿಯ

ಬಾಹುಗಳು ಎಷ್ಟು ಸುಂದರವಾಗಿವೆ, ಈತನ ವಿಶಾಲವಾದ ಎದೆಯಮೇಲೆ ತಲೆಯನ್ನಿಟ್ಟುಕೊಂಡರೆ ಎಷ್ಟೊಂದು ಸುಖವಿರಬೇಕು, ಎಷ್ಟೊಂದು ಆನಂದ! ಈತನ ಕೈಹಿಡಿಯಲು ಎಷ್ಟು ಪುಣ್ಯಬೇಕೋ—ಈತನ ಸಾನ್ನಿಧ್ಯ ಎಷ್ಟು ಸೊಗಸೋ! ಅದಕ್ಕಾಗಿ ಏನುಬೇಕಾದರೂ ಮಾಡಬಹುದಲ್ಲವೇ! ಇದುವರೆಗೂ ತಾನು ಪಟ್ಟ ಸುಖ ನಿಜವಾದ ಸುಖವಲ್ಲ. ಈತನೊಂದಿಗೆ ಮಾತ್ರ ನಿಜವಾದ ಸುಖ ಸಿಗಬಹುದು, ಸಿಗುವುದು. ಅದಕ್ಕಾಗಿ ಏನು ಬೇಕಾದರೂ ಕೊಡಬಹುದು, ಏನಾದರೂ ತ್ಯಾಗಮಾಡಬಹುದು ಎಂದು ಯೋಚಿಸುತ್ತಿದ್ದಳು. ದೃಷ್ಟಿ ಮಾತ್ರ ಅವನ ಮುಖದಲ್ಲಿ ನೆಟ್ಟಿತ್ತು.

"ಈ ಪುಣ್ಯದ ಹಾದಿಯನ್ನು ನೀನೇಕೆ ಹಿಡಿಯಕೂಡದು? ಪಾಪದ ಹಾದಿ ಬಿಟ್ಟುಬಿಡು, ನರ್ತಕಿ, ಪಾಪದ ಹಾದಿ ಬಿಡು. ಇನ್ನಾದರೂ ನಿನ್ನ ಜೀವನವನ್ನು, ನಿನ್ನ ಆತ್ಮವನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡು. ಈಗ ನೀನಿರುವ ಬಚ್ಚಲಿಂದ ಎದ್ದು ನಿಲ್ಲುವ ಪ್ರಯತ್ನ ಮಾಡು, ಪುಣ್ಯದ ಗಂಗಾಸ್ನಾನಮಾಡಿ ಪವಿತ್ರಳಾಗು, ನಿನ್ನ ಬಾಳನ್ನು ಸಾರ್ಥಕಗೊಳಿಸು."

ಮೈಥಿಲೀ ಹಾಗೆಯೇ ಕುಳಿತಿದ್ದಳು. ಈತನನ್ನು ಪಡೆದಂದೇ ತನ್ನ ಬಾಳು ಸಾರ್ಥಕ. ಇದುವರೆಗೆ ತಾನು ಹೃದಯವಿಟ್ಟು, ಪ್ರೇಮನೀಡಿ ಸುಖ ಪಡೆದ ವ್ಯಕ್ತಿಯೊಬ್ಬನೂ ಇಲ್ಲ. ತನ್ನ ವಿಲಾಸಿಗಳೆಲ್ಲ ತನ್ನ ನರ್ತನಕ್ಕೆ, ಹೊರರೂಪಕ್ಕೆ ಮರುಳಾಗಿದ್ದರೇ ಹೊರತು, ಯಾರೂ ತನ್ನ ಪ್ರೇಮಕ್ಕಾಗಿ ಹಾತೊರೆದಿರಲಿಲ್ಲ. ತನ್ನ ಸುಖದ ವಿಚಾರ ಯಾರಿಗೂ ಆಸಕ್ತಿಯಿರಲಿಲ್ಲ. ಅವರೆಲ್ಲ ತಮ್ಮ ಸುಖ, ಭೋಗ, ವಿಲಾಸಗಳಿಗಾಗಿ ಅವಳ ಬಳಿ ಬರುತ್ತಿದ್ದವರು, ಒಬ್ಬರಾದರೂ ಅವಳ ಸುಖದ ವಿಚಾರಕ್ಕೆ ಗಮನವನ್ನೇ ಕೊಟ್ಟಿರಲಿಲ್ಲ. ಆದರೆ ಈ ಸನ್ಯಾಸಿ ಅವರಂತಲ್ಲ; ತನ್ನ ಮೇಲ್ಮೆಗಾಗಿ, ತನ್ನ ಸುಖಕ್ಕಾಗಿ ಬೋಧನೆ ಮಾಡುತ್ತಿದಾನೆ. ತಾನಿದುವರೆಗೂ ಹಿಡಿದ ಹಾದಿಯಲ್ಲಿ ಸುಖವಿಲ್ಲ, ಅದು ತಪ್ಪುಹಾದಿಯೆಂದು ಧೈರ್ಯವಾಗಿ ತನಗೆ ಹೇಳುತ್ತಿದಾನೆ. ಇಷ್ಟಾಗಿ ತನ್ನಲ್ಲಿ ಅವನಿಗೆ ಯಾವ ಆಸಕ್ತಿಯೂ ಇಲ್ಲ, ತನ್ನಿಂದ ಅವನಿಗೆ ಯಾವ ವಿಧವಾದ ಉಪಯೋಗವೂ ಇಲ್ಲ; ಇಂತಹವನೊಂದಿಗೆ

ಬಾಳು ಕಳೆದರೇ ಸಾರ್ಥಕ ಎನಿಸಿತು. ಅವನ ಮುಖವನ್ನೇ ದಿಟ್ಟಿಸಿ ನೋಡುತ್ತಿದ್ದಳು.

ಸದಾನಂದ ಮಾತನ್ನೇನೋ ಆಡುತ್ತಿದ್ದ. ಆದರೆ ಅದೇಕೋ ಏನೋ ಆರಂಭಿಸುವಾಗಿನ ಧೈರ್ಯ ಆಮೇಲಿರಲಿಲ್ಲ. ಏನೋ ಒಂದು ಬಗೆಯ ಒಡಕು ದನಿ ಹೃದಯದಲ್ಲೆದ್ದಂತಾಗಿತ್ತು. ತಾನು ಹೇಳುವ ಮಾತುಗಳೆಲ್ಲ ನಿಜವೇ ಇರಬೇಕು ಎನ್ನುವ ಅಚಲಸಂಬಿಕೆ ಮಾಯವಾಗಿತ್ತು, ಸಿಕ್ಷ್ಣಯ ಕೊಂಚ ಸಡಿಲವಾಗಿತ್ತು. ಎಲ್ಲವೂ ಮಾಯೆಯೆಂದ ಮೇಲೆ ಪಾಪ-ಪುಣ್ಯಗಳೂ ಮಾಯೆಯೇ ಅಲ್ಲವೇ, ಅದಕ್ಕೇಕೆ ಚಿಂತೆಯೆಂದು ಒಂದು ದನಿ ನಡುವೆ ಎದ್ದಿತು. ಅದನ್ನಲ್ಲಿಯೇ ಕತ್ತು ಹಿಸುಕಿದ. ಮುಂದಿನ ಮಾತುಗಳೇನೋ ಜೋರಾಗಿಯೇ ಆಡಿದರೂ ಒಳಗೆ ಅಷ್ಟಾಗಿ ಕಾವು ಕಾಣಲಿಲ್ಲ. ತನ್ನ ಮಾತನ್ನು ತಾನೇ ಅರ್ಥಮಾಡಿಕೊಳ್ಳದವನಂತೆ ಮಾತಾಡಿದ. ಪಾಪ ಪುಣ್ಯಗಳನ್ನು ಅವಳಿಗೆ ವಿವರಿಸಿದ. ಅವಳು ಮಾಡುತ್ತಿರುವುದು ಪಾಪ. ಅದು ತಪ್ಪು, ಪುಣ್ಯದ ಹಾದಿ ಹಿಡಿಯಬೇಕು, ಆಗಲೇ ಅವಳು ಇರುವುದು ಸಾರ್ಥಕ, ಇದ್ದಂತೆ ಲೆಕ್ಕ. ಅದಕ್ಕಾಗಿ ಅವಳು ಎಲ್ಲ ಬಗೆಯ ಮೋಹಗಳಿಂದಲೂ ಬಿಡುಗಡೆ ಹೊಂದಬೇಕು. ಆಗ ಅವಳಿಗೆ ಮುಕ್ತಿ!

ಸದಾನಂದ ಹೊರಟುಹೋದ ಬಹು ಹೊತ್ತಿನವರೆಗೂ ಮೈಥಿಲೀ ಅಲ್ಲಿಯೇ ಕುಳಿತಿದ್ದಳು. ಆವನು ಹೋಗುವಾಗ ಅವನನ್ನು ಬೀಳ್ಕೊಡಲು ಕೂಡ ಅವಳು ಏಳಲಿಲ್ಲ. ಯಾವುದೋ ಗಾರುಡಿಯ ಮಾಯದ ಮೋಡಿಗೆ ಸಿಕ್ಕಿಕೊಂಡವಳಂತೆ ಅವಳು ಅಲುಗಾಡದೆ ಕುಳಿತಿದ್ದಳು. ಅವಳ ಕಣ್ಣಿನಲ್ಲಿನ್ನೂ ಆತನ ತುಂಬುರೂಪ ಕುಣಿಯುತ್ತಿತ್ತು. ಎಂತಹ ಸುಂದರಾಕೃತಿ ಆತನದು. ಅದೇನು ಆ ಮುಖದ ವರ್ಚಸ್ಸು, ತೇಜಸ್ಸನ್ನು ಸುತ್ತಲೂ ಚೆಲ್ಲುವನೋ ಎನ್ನುವಂತೆ ಕಾಂತಿಗೊಂಡ ಆ ಮುಖದ ಮಾಟ ಎಷ್ಟು ಮುದ್ದಾಗಿತ್ತು. ಆ ಕಣ್ಣುಗಳ ಹೊಳಪು ಎಷ್ಟು ತೀವ್ರವಾದರೂ ಎಷ್ಟು ಶೀತಲ, ತಂಪು. ಅವನ ಮೈಕಟ್ಟು ಏನು ಮನೋಹರ! ಮೈಥಿಲಿಯ ಕಣ್ಣಿನಲ್ಲಿ ಸದಾನಂದನ ಆಕರ್ಷಕರೂಪ ಕಟ್ಟಿತ್ತು. ಕಣ್ಣುಮುಚ್ಚಿ ಮೆಲ್ಲನೆ ಅವನೊಂದಿಗೆ ನೂರಾರು ದೃಶ್ಯಗಳಲ್ಲಿ ತಾನೂ ಬೆರೆತುಹೋದಳು. ಮುಚ್ಚಿದ ಕಣ್ಣಿನ

ಕಪ್ಪಿರುಳಿನಲ್ಲಿ ಕೋಟಿ ಬಣ್ಣದ ಕಾಮಧನು ಮೂಡಿತ್ತು. ಆದರೆ ಅಷ್ಟೇ ಅಲ್ಲ. ಅವಳ ಮನಸ್ಸು ಮಾರುಹೋಗಿದ್ದುದು ಬರಿಯ ರೂಪಕ್ಕೆ ಮಾತ್ರವೇ ಅಲ್ಲ, ಅವನ ಮಾತಿನಲ್ಲೂ ಮೈಥಿಲಿಗೆ ಸತ್ಯ ಕಂಡಿತ್ತು, ಸೌಂದರ್ಯ ಕಂಡಿತ್ತು. ಕಿವಿಗಳಲ್ಲಿ ಅವನ ಮಾತಿನ್ನೂ ಮರುದನಿಗೊಳ್ಳುತ್ತಿತ್ತು. ಗಡು ಸಾದರೂ ಗಂಭೀರವಾದ ಅವನ ಮಾತುಗಳಲ್ಲಿ ಎಷ್ಟು ನಿಜ ಹುದುಗಿದೆ ಯೆಂದು ಅವಳಿಗನಿಸಿತ್ತು. ತಾನು ನಡೆಸುತ್ತಿರುವ ಜೀವನದಲ್ಲಿ ತನಗೆ ಸುಖ ವೇನಾದರೂ ಇದೆಯೇ? ಇದುವರೆಗೂ ತನಗೇನಾದರೂ ಸುಖವಿತ್ತೇ? ಎಂದು ತನ್ನನ್ನು ತಾನೇ ಕೇಳಿಕೊಂಡಳು. ತನಗೆ ಬೇಕಾದ ಸುಖ ಇದು ವರೆಗೂ ಸಿಕ್ಕಿರಲಿಲ್ಲ. ಆ ಸುಖವೇನೆಂದು ಕೇಳಿದ್ದರೆ ಅವಳಿಗೆ ಇದುವರೆಗೂ ಗೊತ್ತಿರಲಿಲ್ಲ. ಈಗಲೂ ಸರಿಯಾಗಿ ಹೇಳಲು ಸಾಗುತ್ತಿರಲಿಲ್ಲ. ಆದರೆ ಈಗ ಮಾತ್ರ ಆ ಸುಖದ ಹಾದಿ ತಿಳಿದಂತಾಯಿತು. ಯುವಕ ಸನ್ಯಾಸಿಯ ಮಾತಿನಲ್ಲಿ ನಿಜವಿದೆ. ತಾನು ಇದುವರೆಗೂ ಅನುಸರಿಸಿದ ರೀತಿ ತನಗೆ ಸುಖ ಕೊಡಲಿಲ್ಲ. ಸನ್ಯಾಸಿಯ ಮಾತು ತೋರಿದ ಹಾದಿಯಲ್ಲಿ, ದೇವರ ಸೇವೆಯಲ್ಲಿ ನಡೆದರೆ ಸುಖ ಸಿಗಬಹುದು ಎಂದುಕೊಂಡಳು. ಆದರೆ ಮತ್ತೆ ಮತ್ತೆ ಆ ಮಾತಿನ ಮಧ್ಯೆ ಸನ್ಯಾಸಿಯ ಭವ್ಯ ಆಕೃತಿ ಬಂದು ಕಣ್ಣಿನ ಮುಂದೆ ನಿಲ್ಲುತ್ತಿತ್ತು. ಅವನ ಆ ಸುಂದರ ಆಕೃತಿಯ ಪ್ರಭಾವದಿಂದ ಅವನ ಮಾತುಗಳಿಗೂ ಒಂದು ಅಪೂರ್ವ ಬೆಲೆ ಬಂದು ಮೈಥಿಲೀ ಅವು ಗಳಿಗೆ ಸೋತಿದ್ದಳು. ತಾನೂ ಈ ಹಾಳು ಬಾಳನ್ನು ಬಿಟ್ಟರೆ, ಅವ ನಂತೆಯೇ ಸನ್ಯಾಸಿಯಾಗಿ ಬಿಟ್ಟರೆ, ಅವನ ಸಾನ್ನಿಧ್ಯ ಸಿಗುವುದೆಂದು ಅವಳ ಹೃದಯದಲ್ಲಿ ಆಸೆ ಮಿಣುಕುತ್ತಿತ್ತು. ಹೊತ್ತು ಕಳೆದಂತೆ ಈ ಮಿಣುಕು ಆಸೆ ಮಹಾಜ್ಯೋತಿಯಾಗಿ ಬೆಳೆಯಿತು. ಅದರ ಬೆಳಕಿನಲ್ಲಿದ್ದ ಮೈಥಿಲಿಗೆ ಕತ್ತಲಾದುದೇ ತಿಳಿಯಲಿಲ್ಲ.

ಚೇಟಿ ಬಂದು ಮೈಥಿಲಿಗೆ ನೆನಪು ಮಾಡಿಕೊಟ್ಟಳು. ಆದರೆ ಮೈಥಿಲಿಯ ಮನಸ್ಸಿಗೆ ಈಗ ಅದೊಂದೂ ಬೇಕಾಗಿರಲಿಲ್ಲ. ನಗರದ ಪ್ರಧಾನ ವ್ಯಾಪಾರಿ ರತ್ನಪಡಿಯ ಬೀಜಸೇನನ ಮಗನಿಗೆ ಇಂದು ಹುಟ್ಟು ಹಬ್ಬ. ಅಲ್ಲಿಗೆ ಅರಮನೆಯವರೇ ಮೊದಲಾಗಿ ಎಲ್ಲರೂ ಆಹ್ವಾನಿತರು.

ಅಂದಿನ ಉತ್ಸವದ ಭಾಗವಾಗಿ ಮೈಥಿಲಿಯ ನರ್ತನ. ಬೆಳಿಗ್ಗೆ ಸದಾನಂದ ಬರುವ ಮುನ್ನ ಮೈಥಿಲೀ ತಾನು ಯಾವ ಯಾವ ಒಗೆಯಲ್ಲಿ, ಯಾವ ಯಾವ ನಿಲುವಿನಲ್ಲಿ ಕಾಣಿಸಿಕೊಳ್ಳಬೇಕು. ಯಾವ ಅಲಂಕಾರಮಾಡಿ ಕೊಳ್ಳಬೇಕೆಂದೆಲ್ಲಾ ಯೋಚಿಸಿ ತೀರ್ಮಾನಿಸಿಕೊಂಡಿದ್ದಳು. ತನಗೆ ಅತ್ಯಂತ ಪ್ರಿಯವಾದ ಮಯೂರ ನೃತ್ಯವನ್ನು ಅಂದು ಅದರ ಎಲ್ಲ ವೈಯಾರದಲ್ಲಿಯೂ ತೋರಿಬಿಡಬೇಕೆಂದಿದ್ದಳು. ಜತೆಗೆ ಸೀತಾಪರಿತ್ಯಾಗದ ಸಂದರ್ಭದ ಅಭಿನಯವನ್ನೂ ಪ್ರದರ್ಶಿಸಬೇಕು, ಎಲ್ಲರನ್ನೂ ಬೆರಗುಗೊಳಿಸಿಬಿಡಬೇಕು, ಎಲ್ಲರಿಂದಲೂ ಮೆಚ್ಚುಗೆ ಪಡೆಯಬೇಕೆಂದು ಮನಸ್ಸಿನಲ್ಲೇ ತಾಳ ಹಾಕುತ್ತಿದ್ದಳು. ಎಷ್ಟಿದ್ದರೂ ಮೈಥಿಲೀ ಹೆಂಗಸು. ತನ್ನ ರೂಪದಿಂದ, ತನ್ನ ಒನಪಿನಿಂದ, ತನ್ನ ವೈಯಾರದಿಂದ, ತನ್ನ ನಿಲುವು, ಬೆಡಗುಗಳಿಂದ ಮನುಷ್ಯರನ್ನೋಲಿಸಿಕೊಂಡು, ಆಯಸ್ಕಾಂತದಂತೆ ಅವರನ್ನು ಆಕರ್ಷಿಸಿ, ಮೋಹದ ಜಾಲ ಬೀಸಿ, ಮೋಡಿ ಹಾಕಿ ಮೆಚ್ಚುಗೆ ಹೊಂದುವ ಆಸೆ. ಮೆಚ್ಚುಗೆ, ಹೊಗಳಿಕೆ ಬಂದಷ್ಟೂ ಮತ್ತೂ ಬರಲೆನ್ನುವುದು ಹೆಂಗಸಿನ ಸ್ವಭಾವ. ಅಂತೆಯೇ ಮೈಥಿಲೀ ಇಂದು ವಿಜಯನಗರವನ್ನೇ ತನ್ನ ಕಾಲ್ಕುಣಿತಕ್ಕೆ ಗೆಜ್ಜೆಯಾಗಿಸಿಕೊಳ್ಳುವ ತೀರ್ಮಾನ ಮಾಡಿಕೊಂಡಿದ್ದಳು. ಆದರೆ ಈಗ ಮನಸ್ಸಿಗೇಕೋ ಅದು ಬೇಡವಾಗಿತ್ತು. ಏನೋ ಒಂದು ಬಗೆಯ ಕೊರತೆ, ಅಸಮಾಧಾನ. ಅದರಿಂದ ಬಂದ ಒಂದು ರೀತಿಯ ಅಸಡ್ಡೆ. ತನಗೇನೋ ಬೇಕಾಗಿದೆ, ಅದು ಸಿಗಲಾರದೆನ್ನುವ ಹಲುಬು. ತನಗಿದುವರೆಗೂ ಸಿಕ್ಕಿದುದೆಲ್ಲವೂ ಏನೂ ಉಪಯೋಗವಿಲ್ಲವೆನ್ನುವ ತಿಳಿವು. ಈಗ ಅಲ್ಲಿ ಹೋಗಿ ನೂರು ಮಂದಿಯ ಕಣ್ಮಣಿಯಾಗಿ, ರಾತ್ರಿ ಒಬ್ಬನ ತೋಳಬಂದಿಯಾಗಿ ಇರುವುದರಿಂದೇನು ?—ಈ ಪ್ರಶ್ನೆ ಮೈಥಿಲಿಯ ಮನಸ್ಸಿನಲ್ಲಿ ಇಂದಿನವರೆಗೂ ಬಂದಿರಲಿಲ್ಲ. ಬಂದಿರಲಿಲ್ಲವೆಂದರೆ ಇಣುಕಿಯೂ ಇರಲಿಲ್ಲವೆಂದಲ್ಲ. ಆಗಾಗ ಬಂದೊಂದು ಬಾರಿ ಎಲ್ಲ ಚೆಲ್ಲಾಟ, ನಗೆಯಾಟ ಮುಗಿದ ಮೇಲೆ ಹಾಸಿಗೆಯಮೇಲೆ ಮಲಗಿಕೊಂಡು ಅರೆ ನಿದ್ರಾವಸ್ಥೆಗಿಳಿಯುತ್ತಿರುವಾಗ ಇದರಿಂದೆಲ್ಲ ಏನು ? ಎನ್ನುವ ಪ್ರಶ್ನೆ ಎದ್ದಿತ್ತು. ಆದರೆ ಈ ಪ್ರಶ್ನೆ ಮನಸ್ಸಿನ ಒಳ ಪದರದಲ್ಲೇ ಹುದುಗಿಹೋಗಿತ್ತು. ಇದುವರೆಗೂ

ತಾನೇತಾನಾಗಿ ಪ್ರಬಲವಾಗಿ ಮೇಲೆದ್ದಿರಲಿಲ್ಲ. ಇಂದು ಅದು ಮೆಲ್ಲನೆ ರೂಪ ತಾಳಿ ಮೇಲೆದ್ದಿತ್ತು. ತಿಳಿ ನೀರಿನ ಕೊಳದಲ್ಲಿ ನೆರಳನ್ನು ನೋಡುತ್ತಿರುವಾಗ ನೆರಳಿನೊಳಗಿಂದ ಮಹಾಸರ್ಪವೆದ್ದಂತೆ ಎದ್ದಿತ್ತು. ಅವಳ ಮನಸ್ಸನ್ನೆಲ್ಲಾ ಆವರಿಸಿಕೊಂಡು ಬಿಟ್ಟಿತ್ತು. ಈಗ ಅದರಿಂದ ಬಿಡುಗಡೆ ಹೊಂದುವುದು ಸುಲಭವಾಗಿರಲಿಲ್ಲ. ಆ ಪ್ರಶ್ನೆಗೆ ಉತ್ತರ ಅವಳಿಗೆ ಸಿಗಲಿಲ್ಲ. ಇದುವರೆಗೂ ಉತ್ತರಕೊಡುವ ಗೋಜಿಗೆ ಹೋಗಿರಲಿಲ್ಲ. ಈಗ ಉತ್ತರ ಕೊಡಲು ಸಾಗುವಂತಿಲ್ಲ. ಉತ್ತರವೇನೋ ಇದೆ—ಇರಲೇಬೇಕು ಎನಿಸಿತು. ಈ ತೊಳಲಾಟದ ನಡುವೆ ಇದ್ದಕ್ಕಿದ್ದಂತೆ ಸಂಗೀತದ ನಾದ ಅಲೆಯಲೆಯಾಗಿ, ಸುರುಳಿಸುರುಳಿಯಾಗಿ ಬಳಿ ಸಾರುವಂತೆ, ಒಂದು ಮಸಕು ಆಕೃತಿ ಮನಸ್ಸಿನ ಸುಳಿಯೊಳಗಿಂದ ಹಂತಹಂತವಾಗಿ ಮೇಲೇರಿ ಬರುತ್ತಿತ್ತು. ಯುವಕ ಸನ್ಯಾಸಿಯ ಮುಖ! ಅಂದೆಂತಹ ಸುಂದರ ಆಕೃತಿ. ಅವನಾದರೂ ಇಂದು ಆ ಸಭೆಗೆ ಬರುವಂತಿದ್ದರೆ, ಅವನ ಸಂತೋಷಕ್ಕಾಗಿಯಾದರೂ ತಾನು ನರ್ತಿಸಬಹುದು. ಅವನಿಗಾಗಿ, ಅವನನ್ನು ಸಂತೋಷಗೊಳಿಸುವುದಕ್ಕಾಗಿ, ತಾನೇನುಬೇಕಾದರೂ ಮಾಡಬಲ್ಲೆನೆಂದು ಆ ಕ್ಷಣದಲ್ಲಿ ಅವಳಿಗನ್ನಿಸಿತು. ಆದರೆ ಯುವಕ ಸನ್ಯಾಸಿಯೆಲ್ಲಿ—ಆ ಸಭೆಯೆಲ್ಲಿ! ಅಂದಮೇಲೆ ಯಾತಕ್ಕಾಗಿ ಸಭೆಗೆ ಹೋಗಬೇಕು? ಅಸಡ್ಡೆ ಅನಾಸಕ್ತಿಯಾಯಿತು. ಅನಾಸಕ್ತಿ ಅನಿಷ್ಟವಾಯಿತು. ಸಭೆಗೆ ಬರಲು ಸಾಧ್ಯವಿಲ್ಲವೆಂದು ಹೇಳಿ ಕಳಿಸಿಬಿಟ್ಟಳು.

ಯುವಕ ಸನ್ಯಾಸಿ ಸದಾನಂದನ ಮೂರ್ತಿ ಒಂದೇ ಸಮನೆ ಅವಳ ಮನಸ್ಸನ್ನು ಆಕ್ರಮಿಸಿ ಬಿಟ್ಟಿತು. ಸಾಗರದಲೆಗಳು ಒಂದಾದಮೇಲೊಂದು ಬಂದು ಬಂದು ದಡದಲ್ಲಿ ಸೇರಿಹೋಗುವಂತೆ ನೂರು ಬಗೆಯ ಯೋಚನೆಗಳೂ ಅವನ ಯೋಚನೆಯ ದಡ ಸೇರುತ್ತಿದ್ದುವು. ಯಾವ ಕೆಲಸದಲ್ಲಿಯೂ ಆಸಕ್ತಿಯಿಲ್ಲ. ಯಾವ ವಿಷಯಕ್ಕೂ ಇಚ್ಛೆಯಿಲ್ಲ. ಯಾವುದೇ ಆನಂದದಲ್ಲಿಯೂ ಆಸೆಯಿಲ್ಲ. ಎಲ್ಲ ನದಿಗಳ ನೀರೂ ಸಾಗರಕ್ಕೇ ಸೇರುವಂತೆ ಅವಳ ವ್ಯಕ್ತಿತ್ವದ ಎಲ್ಲ ಸೊಗಸುನೆರಳುಗಳೂ ಸದಾನಂದನ ವ್ಯಕ್ತಿತ್ವಗ ನೆರಳಿನಲ್ಲಿ ಬೆರತುಹೋಗುತ್ತಿದ್ದುವು. ಆತನಿಗಿದು ಒಪ್ಪಿತವೇ? ಆತ

ಇದನ್ನು ಸರಿಯೆನ್ನುವನೇ ? ಆತನ ನೋಟಕ್ಕೆ ಇದು ತಪ್ಪಿತವಾಗದೇ ? ಇದೇ ಯೋಚನೆ ಪ್ರತಿ ಕೆಲಸದಲ್ಲೂ ತೋರುತ್ತಿತ್ತು. ಹೀಗಾಗಿ ಮೂರು ನಾಲ್ಕು ದಿನ ಕಳೆಯುವುದರಲ್ಲಿ ಮೈಥಿಲೀ ತನ್ನನ್ನು ತಾನು ಮರೆತು ಸದಾನಂದನ ನೆರಳಾಗಿ ಹೋಗಿದ್ದಳು. ಮನೆ ಬಿಟ್ಟು ಕದಲುತ್ತಿರಲಿಲ್ಲ. ಮನೆಗೆ ಯಾರಿಗೂ ಪ್ರವೇಶವೂ ಇಲ್ಲ. ಸನ್ಯಾಸಿ ಸದಾನಂದ ಬಂದರೆ ಮಾತ್ರ ಒಳಗೆ ಬಿಡಲು ಅನುಮತಿಯಿತ್ತು. ಆದರೆ ಅವನು ಬರಬೇಕಲ್ಲ ! ಬರುವವರು ಬೇಕಾದವರಲ್ಲ. ಬೇಕಾದವರು ಬರುವುದೇ ಇಲ್ಲ ! ಆದರೆ ಮನುಷ್ಯನ ಹೃದಯದ ಆಸೆಗೆ ಕೊನೆಯೇ ಇಲ್ಲ. ಎಂತಹ ನಿರಾಸೆಯಲ್ಲೂ ಆಸೆ ಮೊಳೆಯುತ್ತದೆ. ದಿನದಿನವೂ, ಇಂದು ಬರಬಹುದು, ನಾಳೆ ಬರಬಹುದು, ಈಗ ಬರಬಹುದು, ಆಗ ಬರಬಹುದು ಎನ್ನುವ ಕಾತರದಲ್ಲಿ, ಅರೆ ಭರವಸೆಯ ಭ್ರಮೆಯಲ್ಲಿ ಕಾದು ನಿರಾಸೆಗೊಳ್ಳುತ್ತಿದ್ದಳು. ಆದರೆ ಕಾಯುವುದು ಮಾತ್ರ ಬಿಡಲಿಲ್ಲ. ಮರುಶುಕ್ರವಾರವಾದರೂ ಮತ್ತೆ ಪ್ರಸಾದ ತರುವಾಗ ಇಲ್ಲಿಗೂ ಬರಬಹುದೆಂದುಕೊಂಡಳು. ಕಾದು ನೋಡಿದಳು. ಆದರೆ ಶುಕ್ರವಾರದ ಸಂಜೆಯಾದರೂ ಆತನ ಸುಳಿವು ಕಾಣಲಿಲ್ಲ. ಪೂಜ್ಯ ವಿದ್ಯಾರಣ್ಯರ ಶಿಷ್ಯ ಆತ. ವಿದ್ಯಾರಣ್ಯರ ಆಶ್ರಮದಲ್ಲಿಯೇ ಇರುತ್ತಾನೆ. ಅಲ್ಲಿಗಾದರೂ ಹೋಗಿ ಬರಲೇ ಎಂದುಕೊಂಡಳು. ಒಮ್ಮೆಯಾದರೂ ಆತನನ್ನು ನೋಡಿದರೆ ಸಾಕು. ನನ್ನ ಜನ್ಮ ಸಾರ್ಥಕವಾಯಿತು. ಆತನೆಂದಂತೆ, ಆತನ ಮಾತಿನಂತೆ ಎಲ್ಲವನ್ನೂ ಬಿಟ್ಟು, ಮಾಯೆ ಕಳಚಿ, ತ್ಯಾಗದ ಹಾದಿ ಹಿಡಿಯುವುದು ಎಂದುಕೊಂಡಳು. ಅವನನ್ನು ತನ್ನ ಗುರುವಾಗಿ ತಾನೊಪ್ಪಿದುದನ್ನು, ಅವನ ಮಾತನ್ನು ತಲೆಯಲ್ಲಿ ಧರಿಸಿ ಅನುಸರಿಸುವುದನ್ನು, ಅವನಿಗೆ ತಾನೇ ತಿಳಿಸಬೇಕು. ಅವನ ಆಶೀರ್ವಾದ ಹೊಂದಬೇಕೆನ್ನುವ ಉತ್ಕಟ ಇಚ್ಛೆ ಬೆಳೆಯಿತು. ಬೆಳೆದು ಬೇರು ಬಿಟ್ಟು ಅಚಲವಾಗಿ ನಿಂತಿತು. ಅಂದೇ ರಾತ್ರಿಗೆ ಆಶ್ರಮಕ್ಕೆ ಹೋಗಿ ತಿಳಿಸಿ ತನ್ನ ಗುರುವಿನಿಂದ, ಪೂಜ್ಯ ವಿದ್ಯಾರಣ್ಯರಿಂದ, ಅನುಗ್ರಹ ಪಡೆಯುವ ಮನಸ್ಸು ಮಾಡಿದಳು. ಸನ್ಯಾಸಿಗೆ ಸೋತ ಮನಸ್ಸು ಮೆಲ್ಲಮೆಲ್ಲನೆ ಸನ್ಯಾಸಕ್ಕೆ ಸೋತುಹೋಗಿತ್ತು !

ವಿಶಾಲವಾಗಿ ಹರಹಿದ ಪ್ರವಾಹದ ಶಯ್ಯೆ. ಅದರ ಮೇಲೆ

ಕೋಮಲವಾದ ಬೆಳುದಿಂಗಳು ತೂಗುತೊಟ್ಟಿಲಾಡುತ್ತಿದೆ. ಸುತ್ತೆಲ್ಲ ಶಾಂತಿ. ಮೌನ. ಆ ಮೌನದಲ್ಲೊಂದು ಮಾಧುರ್ಯ. ಹತ್ತಾರು ವರ್ಷ ಮುಚ್ಚಟೆಯಾಗಿ ಸಂಸಾರ ನಡೆಸಿದ ಗೃಹಿಣಿಯ ಗಾಂಭೀರ್ಯ, ಎಳಹರಯದ ಚೆಲುವೆಯರ ಮುಸಿಮುಸಿ ನಗುವಿನ ಮಾಧುರ್ಯ, ತಾಯ ಮಡಿಲಲ್ಲಿ ಹಾಲೂಡಿ ನಿದ್ರಿಸುತ್ತಿರುವ ಹಸುಗೂಸಿನ ಸೌಂದರ್ಯ, ಮೂರೂ ಕೂಡಿಕೊಂಡಂತಹ ವಾತಾವರಣ. ಸುತ್ತೆಲ್ಲ ನೀರವತೆ. ಆದರೆ ದಡದ ಬಳಿ ನಿಂತು ಕಣ್ಣೆವೆಯಿಕ್ಕದೆ ಪ್ರವಾಹವನ್ನೇ ದಿಟ್ಟಿಸುತ್ತಿರುವ ಸಾಧು, ಯುವಕ ಸನ್ಯಾಸಿ ಸದಾನಂದನ ಮನಸ್ಸಿಗೆ ಮಾತ್ರ ಶಾಂತಿಯಿಲ್ಲ. ಸಮಾಧಾನವಿಲ್ಲ. ಒಂದು ವಾರದಿಂದ ಮನಸ್ಸು ಚಂಚಲವಾಗಿತ್ತು. ಗಾಳಿಯ ಬಡಿತಕ್ಕೆ ಸಿಕ್ಕ ದೀಪದ ಉರಿಯಂತೆ ಮನಸ್ಸು ಚಪಲವಾಗಿತ್ತು. ಅಂದು ಮೈಥಿಲಿಯನ್ನು ಕಂಡಾಗಲೇ ಎದೆ ಜಲ್ಲೆಂದಿತ್ತು. ಬುಡದ ಕಲ್ಲಿಗೇ ಹಾರೆ ಹಾಕಿ ಸಡಿಲಿಸಿದಂತಾಗಿತ್ತು. ಆ ಕ್ಷಣದಲ್ಲಿ ಏನೂ ತಿಳಿಯಲಿಲ್ಲ. ಪಾಪಿಯನ್ನು ಕಂಡುದರಿಂದ ಕ್ಷಣಕಾಲ ಹಾಗಾಗಿರಬೇಕೆಂದುಕೊಂಡಿದ್ದ. ಆದರೆ ಆಕೆಯೊಂದಿಗೆ ಮಾತನಾಡಲು ಪ್ರಯತ್ನಿಸಿದ ಹಾಗೆಲ್ಲ ಬಾಯಿಗೆ ಮಾತು ಬರಲು ಕಠಿಣವಾಗಿತ್ತು. ಹೃದಯದಲ್ಲೇ ಏನೋ ತಡೆ ಹಾಕಿದಂತಾಗಿತ್ತು. ಆದರೆ ಆಗಿನ ಉದ್ವೇಗದಲ್ಲಿ ಮಾತು ನಿಂತಿರಲಿಲ್ಲ. ಆದರೆ ಮೈಥಿಲಿಯ ದೃಷ್ಟಿಯಲ್ಲಿ ದೃಷ್ಟಿಯಿಟ್ಟು ನೋಡುವುದು ಅಸಾಧ್ಯವಾಗಿತ್ತು. ಅದೇಕೋ ಏನೋ ಹೃದಯದಲ್ಲೊಂದು ಹೇಳಲಾರದ ನೋವು. ಕಾಣಲಾರದ ವೇದನೆಯನ್ನು ಹೃದಯದ ಬಾಗಿಲು ತೆರೆದು ಬರಮಾಡಿಕೊಂಡಿದ್ದ. ಆ ವೇದನೆಗೆ ರೂಪುಗೊಡಲು ಆಗಲಿಲ್ಲ. ಆದರೆ ಅದು ಮಾತ್ರ ಒಂದೇ ಸಮನಾಗಿ ಬೆಳೆಯುತ್ತಿತ್ತು. ಮಳೆಗಾಲದಲ್ಲಿ ಕಂಡೂ ಕಾಣದಂತೆ ನದಿಯ ನೀರು ಹೆಚ್ಚುವಂತೆ ಹೆಚ್ಚಿತು. ಆಶ್ರಮದ ಕಾರ್ಯಗಳಲ್ಲಿ ಎಂದಿನ ಆಸಕ್ತಿಯಿರಲಿಲ್ಲ. ಎಲ್ಲದರಲ್ಲಿಯೂ ಒಂದು ಬಗೆಯ ಬೇಸರ ಬಂದುಬಿಟ್ಟಿತು. ಅಂದು ಸಂಜೆ ನದಿಯ ತೀರದಲ್ಲಿ ಕುಳಿತು ಕರ್ಮ ನಡೆಸಲು ಕುಳಿತಂತೆ ಸಂಧ್ಯಾಕರ್ಮ ಬಹಳ ಹೊತ್ತು ಹಿಡಿಯುವಂತೆ ಮನಸ್ಸಿಗೆ ತೋರಿತು. ಇದುವರೆಗೂ ಒಂದು ದಿನವಾದರೂ ಬೇಸರಗೊಳ್ಳದಿದ್ದವನಿಗೆ ಅಂದು

ಆ ಕ್ರಿಯೆ ಬೇಸರಗೊಳಿಸಿತು. ನದಿಯ ತೀರದಲ್ಲಿಯೇ ಕುಳಿತು ಹಲವಾರು ಗಳಿಗೆಗಳನ್ನು ಕಳೆಯಬೇಕೆಂದು ಮನಸ್ಸಿಗೆ ಅನ್ನಿಸಿತು. ಎಂದಿನಂತೆ ಕ್ರಿಯೆ ಮುಗಿದೊಡನೆಯೇ ಆಶ್ರಮಕ್ಕೆ ಹೋಗುವ ಮನಸ್ಸಾಗಲಿಲ್ಲ. ಮನಸ್ಸು ಯಾವುದೋ ಕಲ್ಪನೆಯ ಕನಸು ಕಟ್ಟುತ್ತಿದ್ದಿತು. ಆದರೆ ಕನಸು ಸ್ಪಷ್ಟವಾಗಿರಲಿಲ್ಲ. ಮಂಜಿನ ಮಳೆ ಮನಸ್ಸಿನಲ್ಲಾಗುತ್ತಿರುವಂತೆ ಎಲ್ಲ ಮಸಕು ಮಸಕು. ಅಲ್ಲಲ್ಲಿ ಒಂದೊಂದು ರೇಕು ಹೊಳೆಯುವಂತೆ ಒಂದೊಂದು ಚಿಂತೆ ಹೊರಗೆ ಕಾಣಿಸಿಕೊಳ್ಳುತ್ತಿತ್ತು. ಆದರೆ ಅದು ಬಹಳ ಅಪರೂಪವಾಗಿ. ತಾನೇನು ಚಿಂತಿಸುತ್ತಿರುವೆನೆನ್ನುವ ಅರಿವೇ ಇಲ್ಲ. ತಾನೇಕೆ ಚಿಂತಿಸುತ್ತಿರುವೆನೆನ್ನುವುದೂ ತಿಳಿಯದು. ಆದರೆ ಸುಮ್ಮನೆ ಅಲ್ಲಿ ಕುಳಿತಿರುವುದರಲ್ಲೇ ಒಂದು ಸಮಾಧಾನ. ಅದು ತುಂಬುಸಮಾಧಾನವಲ್ಲ. ಅಸಮಾಧಾನದ ಕೈ ಹಿಡಿದು ಜತೆಗೂಡಿ ಬಂದ ಸಮಾಧಾನ. ಒಂದು ಬಗೆಯ ಕಲಕಾಟ ಒಳಗಿದ್ದು, ಹೊರಗೆ ಶಾಂತವಾದ ಕೊಳದ ನೀರಿನಂತೆ. ಹರಿದೂ ಹರಿಯದಂತಿರುವ ನದಿಯಲೆಗಳಂತೆ ಒಂದು ಮಾದರಿಯ ತುಂಬುಕೊರತೆ. ಈ ತುಂಬುಕೊರತೆಯೇ ಅವನಿಗೆ ಬೇಕಾಗಿತ್ತೇನೋ! ಬಹುಕಾಲ ಹಾಗೆಯೇ ಕುಳಿತಿದ್ದ. ಮೆಲ್ಲನೆ ನದಿಯ ನೀರಿನ ಬಳಿ ಬಂದು ಸೋಪಾನದ ಮೇಲೆ ಕುಳಿತು ಕಾಲುಗಳೆರಡನ್ನೂ ನೀರಿನಲ್ಲಿಳಿಬಿಟ್ಟು ಕುಳಿತ. ಹಲವಾರು ದಿನಗಳು, ಹಲವಾರು ಕ್ಷಣಗಳು, ಮನಸ್ಸಿನ ಹಿನ್ನೆಲೆಯಲ್ಲಿಯೇ ಅಡಗಿದ್ದು ಇದ್ದಕ್ಕಿದ್ದಂತೆ ಯಾವುದೋ ಒಂದು ರಸ ನಿಮಿಷದಲ್ಲಿ ರೂಪುಗೊಳ್ಳುವ ಕವಿತೆಯಂತೆ, ಹಲವಾರು ಬಾರಿ ನೆನೆಸಿಕೊಂಡರೂ ನೆನಪಿಗೆ ಬಾರದೆ ಹೃದಯದ ಯಾವುದೋ ಪದರದಲ್ಲಿ ಗುಂಯ್ಗುಟ್ಟುತ್ತಾ, ಯಾವುದೋ ಒಂದು ಅನಿರೀಕ್ಷಿತ ಗಳಿಗೆಯಲ್ಲಿ ಹೊರಹೊಮ್ಮುವ ಹಾಡಿನಂತೆ, ಇದುವರೆಗೂ ತಾಕಲಾರದಾಗಿದ್ದ ವೇದನೆ ಮೂರ್ತಿಗೊಂಡಿತು. ಕಾಲು ತೊಳೆಯುತ್ತಿದ್ದ ನದಿಯನ್ನು ನೋಡಿದಂತೆ, ಕಾಲಿನಮೇಲೆ ನದಿಯಲೆಗಳ ಕೈಗಳು ವಾತ್ಸಲ್ಯದಿಂದ, ಮಗುವಿಗೆ ನೀರೆರೆಯುವ ತಾಯಿಯ ಮಮತೆಯಿಂದ, ಓಡುವಾಗ ಇದ್ದಕ್ಕಿದಂತೆ ಬೆಳಿಗ್ಗೆ ಮೈಥಿಲಿಯ ಮನೆಯಲ್ಲಿ ಪಾದಪೂಜೆಯಾದುದು ನೆನಪಾಯಿತು. ಮೈಥಿಲಿಯ ನೆನಪಾದೊಡನೆಯೇ ಮನಸ್ಸೇಕೋ ಜುಮ್ಮೆಂ

ದಿತು. ಹೃದಯ ಯಾವುದೋ ದುಗುಡದ ಮುಸುಕು ಹೊದ್ದುಗೊಂಡಿತು. ಕಣ್ಣುಗಳಲ್ಲಿ ಮಿಂಚ ತೇವ ನಿಂತಿತು.

ಅಂದು ರಾತ್ರಿ ಸದಾನಂದ ಎಂದಿನಂತೆಯೇ ಧ್ಯಾನಮಾಡಲು ಕುಳಿತ. ಧ್ಯಾನದಲ್ಲಿ ಮನಸ್ಸು ಕೂತರೆ ಗಂಟೆಗಳಾದರೂ ಸಮಾಧಿ ಭಂಗ ವಾಗದ ಕಠಿನಯೋಗಿ ಸದಾನಂದ ಇಂದು ಅರೆಗಳಿಗೆಯಾದರೂ ಧ್ಯಾನ ಮಗ್ನನಾಗಲಾರದಾದ. ಮನಸ್ಸು ಧ್ಯಾನದಲ್ಲಿ ಕೂರದು. ಕೇಂದ್ರೀಕೃತ ವಾಗದು. ಕಮಂಡಲುವಿನಿಂದ ಚೆಲ್ಲಿದ ನೀರು ಸಿಡಿದು ನೂರು ದಿಕ್ಕು ಪಡೆಯುವಂತೆ ಮನಸ್ಸಿನ ಲಹರಿ ಹೋಳುಹೋಳಾಗುತ್ತಿತ್ತು. ಒಂದೆರಡು ನಿಮಿಷ ಮೈಮರೆತು, ಮತ್ತೆ ಮೈಯರಿವಾದಾಗ—ಛೆ! ಎಂತಹ ಅಧೀರ ಮನಸ್ಸಿದು! ಎಂದು ಬಿಗಿಹಿಡಿಯಲು ಯತ್ನಿಸುತ್ತಿದ್ದ. ಮತ್ತೆ ಅದೇ ಪ್ರಯತ್ನ. ಅದೇ ಪಾಡು. ಅದೇ ಕತೆ. ಎಷ್ಟೇ ಸಾಧನೆಯನ್ನು ಪ ಯೋಗಿಸಿದರೂ ಮನಸ್ಸು ಬಿಗಿಯಾಗದು. ಆಸೆ ಆಕಾಶದಷ್ಟು. ಸಾಧನೆ ಮಾತ್ರ ಸಾಸಿವೆಯಷ್ಟು. ಏನೋ ಒಂದು ಬಗೆಯ ಪರಾಸಕ್ತತೆ. ಬೇರೆಲ್ಲಿಯೋ ಭ್ರಮೆಯಲ್ಲಿ ಹಾರಾಡುವ ಮನಸ್ಸು ಕರೆದೊಡನೆಯೇ ಹಿಂದಕ್ಕೆ ಬಾರದು. ಗುರುಗಳು ಅವನ ಈ ಸ್ಥಿತಿಯನ್ನು ಅರಿತುಕೊಂಡಿದ್ದರೋ ಇಲ್ಲವೋ ಅವನನ್ನಂತೂ ಮಾತನಾಡಿಸಿರಲಿಲ್ಲ.

ರಾತ್ರಿ ಕೃಷ್ಣಾಜಿನದಮೇಲೆ ಮಲಗಿದ. ನಿದ್ರೆ ಬರಲಿಲ್ಲ. ಇದುವರೆಗೂ ಆ ಶಯ್ಯೆಯಲ್ಲಿದ್ದ ಶಾಂತಿ, ಸುಖ ಇಂದಿರಲಿಲ್ಲ. ಮೈಯನ್ನೆಲ್ಲಾ ಒತ್ತುತ್ತಿತ್ತು. ಇದುವರೆಗೂ ನಾನು ಹೇಗೆ ತಾನೆ ಇದರ ಮೇಲೆ ಮಲಗುತ್ತಿದ್ದೆನೋ ಎನ್ನುವಷ್ಟು ಚುಚ್ಚುತ್ತಿತ್ತು. ಕಣ್ಣು ಮುಚ್ಚಿದರೆ ಕನಸಿನ ಬೆಳಕು. ನೂರಾರು ಮಸಕು ಆಕೃತಿಗಳು ಬಂದು ಕುಣಿದು ಹೋಗುತ್ತಿದ್ದುವು. ಅವನಿಗೆ ಆಹ್ವಾನಕೊಡುತ್ತಿದ್ದುವು. ಛೆ! ಇಂತಹ ಕನಸುಗಳು ಬರಬಾರದೆಂದುಕೊಂಡು, ತಲೆ ಕೊಡವಿಕೊಂಡು ಮತ್ತೊಂದು ಪಕ್ಕಕ್ಕೆ ತಿರುಗಿ ಮಲಗಿದರೆ, ಕನಸು ಕೈಬಿಡುವುದೇ? ಕಣ್ಣು ತೆರೆದಾಗ ಮುರಿದ ಕನಸು ಕಣ್ಣು ಮುಚ್ಚಿದ ಕೂಡಲೇ ಮುಂದುವರಿಯುತ್ತಿತ್ತು. ರಾತ್ರಿಯೆಲ್ಲಾ ಈ ಕಿರುಕುಳದಲ್ಲಿ ನಿದ್ರೆಯೇ ಬರಲಿಲ್ಲ.

ಆದಾದಮೇಲೂ ಅವನ ಮನಸ್ಸಿಗೆ ಶಾಂತಿಯಿಲ್ಲ. ಎಂದಿನಂತೆ ಕ್ರಿಯೆ ನಡೆಸಿದರೂ ಎಲ್ಲ ಯಾಂತ್ರಿಕ. ಯಾವುದೋ ಮೋಹದ ಬಂಧನದಲ್ಲಿ ಸಿಕ್ಕು ವಿಧಿಯಿಲ್ಲದೆ ಕಣ್ಣೊರೆಸಲು ಮಾಡುವ ಕೆಲಸ ಅದು. ಅದರಲ್ಲಿ ಕೊಂಚವಾಗಲಿ ಮನಸ್ಸೇ ಒಗ್ಗದು. ಇಷ್ಟಾಗಿ ತಾನು ಏನು ಮಾಡುತ್ತಿರುವೆನೆಂಬುದೇ ತಿಳಿಯುತ್ತಿರಲಿಲ್ಲ. ಗುರುಗಳು ಏನಾದರೂ ಹೇಳಿದರೆ ಏನೋ ಮಾಡಲು ಹೊರಡುವವನು. ಸರಿಯಾದರೆ ಸರಿಯಾಯಿತು. ಇಲ್ಲದಿದ್ದರೆ ಮತ್ತೆ ಮಾಡುವವನು. ಈ ಅನ್ಯಮನಸ್ಕತೆ ಈ ಒಂದು ವಾರದಲ್ಲಿ ಅತಿಯಾಗಿ ಬೆಳೆದುಹೋಗಿತ್ತು. ಯಾವ ಕ್ಷಣದಲ್ಲಿ ನೋಡಿದರೂ ಮುಖದಲ್ಲಿ ಚಿಂತೆ. ಮನಸ್ಸು ಆಳವಾದ ಕಡಲಿನಲ್ಲಿ ಕಳೆದುಹೋದ ಯಾವುದನ್ನೋ ಹುಡುಕುವಂತಿತ್ತು. ನಿಮಿಷ ನಿಮಿಷ ಕಳೆದಂತೆ ಹೊಸಹೊಸ ವ್ಯೂಹಗಳನ್ನು ರಚಿಸಿಕೊಂಡು ವಿಷಮ ಭಾವಗಳು ಬಂದು ಧಾಳಿಯಿಡುತಿದ್ದುವು. ಅವುಗಳೆಲ್ಲದರ ಹಿಂದೆ ಒಂದು ಅವ್ಯಕ್ತ ಚಿಂತೆ—ಮಸಕು ಆಕೃತಿ. ಮೈಥಿಲಿಯ ನೆನಪು!

ಮೈಥಿಲಿಯನ್ನು ಸದಾನಂದ ದಿಟ್ಟಿಸಿದ್ದುದು ಎರಡೇ ಬಾರಿ. ಅವನ ಮನಸ್ಸಿನ ಮೇಲೆ ಅವಳ ಮುಖ ಅಚ್ಚಳಿಯದಂತೆ ಮೂಡಿರಲಿಲ್ಲ. ಅವಳ ಮೂರ್ತಿ ಹೇಗೋ ಹಾಗೆ ತೋರಿಬರುತ್ತಿತ್ತು. ಅವಳ ಮುಖ ಮಾತ್ರ ಸ್ಪಷ್ಟವಾಗಿ ತೋರುತ್ತಲೇ ಇರಲಿಲ್ಲ. ನೂರುಬಾರಿ ಯತ್ನಿಸಿದರೂ ಅವಳ ಆಕೃತಿಯನ್ನು, ಅವಳ ರೂಪವನ್ನು, ಅವಳ ಮುಖದ ಮಾಟವನ್ನು ಚಿತ್ರಿಸಿಕೊಳ್ಳಲು ಅವನಿಂದ ಆಗಲೇ ಇಲ್ಲ. ಆದರೆ ಅವಳ ನೆನಪು ಮಾತ್ರ ಹಿಂಸೆ ಕೊಡುವುದನ್ನು ಬಿಡಲಿಲ್ಲ. ಅವಳನ್ನು ಮನಸ್ಸಿನಲ್ಲಿ ನೂರು ರೀತಿಯಲ್ಲಿ ಚಿತ್ರಿಸಿಕೊಂಡರೂ ಮನಸ್ಸಿಗೆ ಒಪ್ಪದು. ಸಮಾಧಾನವಿಲ್ಲ. ಹೀಗಿಲ್ಲವೆಂದು ಅನ್ನಿಸುತ್ತಿತ್ತು. ಹೀಗಾಗಿ ಮೈಥಿಲಿಯೊಬ್ಬ ಅಸ್ಫುಟ ಕನಸಾಗಿದ್ದಳೇ ಹೊರತು, ಸ್ಪಷ್ಟವಾದ ಚಿತ್ರವಾಗಿರಲಿಲ್ಲ. ಈ ಏಳು ದಿನವೂ ಈ ಅಸ್ಫುಟಸ್ವಪ್ನದೊಂದಿಗೆ ಹೋರಾಡಿ ಸದಾನಂದನ ಹೃದಯ ಸೋತಿತ್ತು. ಹಣ್ಣಾಗಿತ್ತು. ತಲೆಗೆ ಚಿಟ್ಟು ಹಿಡಿದಂತಾಗಿತ್ತು. ಎಲ್ಲೆಲ್ಲಿ ನೋಡಿದರೂ ಅದೇ ಆಕೃತಿ—ಮಸಕು ಆಕೃತಿ, ಮಂಜಿನ ತೆರೆಯಿಂದಹೋ

ಬಳೆಯ ಅಂಶಃಪಟದಿಂದಲೋ ಮುಚ್ಚಿದ ಚಿಟ್ಟದಂತೆ. ಆದರೆ ಆ ಆಕೃತಿಗೆ
ಸರುತಿಸುವಂತಹ ಗುಣಗಳಿದ್ದುವು. ನಾಸಿಲ್ಲದ ಜಾಗವೇ ಇಲ್ಲ. ನಾನಿಲ್ಲದ
ರೂಪವೇ ಇಲ್ಲ. ನನ್ನ ಶಕ್ತಿಗೆ ಹೊರತಾದುದು ಯಾವುದೂ ಇಲ್ಲ. ನನ್ನ
ಮಾಯೆಗೆ ಸಿಕ್ಕದುದಿಲ್ಲ. ಎಲ್ಲವೂ ನನ್ನ ಆಕರ್ಷಣೆಯೇ ಎಂದು ಹೆಣ್ತ್ನ
ನಸವೇ ಬಂದು ಹೇಳುವಂತಿತ್ತು. ನೀನೆಲ್ಲಿ ನೋಡಿದರೂ ನಾನೇ ಎಂದು
ಎಲ್ಲೆಡೆಯಲ್ಲಿಯೂ ಆ ಸ್ವಪ್ನ ಕಾಣಿಸಿಕೊಳ್ಳುತ್ತಿತ್ತು. ನಿನ್ನ ಸಾಧನೆ
ಕೂಡ ನನ್ನ ಶಕ್ತಿಗೆ ಹೊರತಾದುದಲ್ಲ. ಇಗೋ, ನಿನ್ನ ಇಷ್ಟು ವರ್ಷದ
ಯೋಗವನ್ನು ಪುಡಿಪುಡಿಮಾಡಿ ಹೊಸಕಿ ಹಾಕಿದೇನೆ ಎಂದು ಅವನನ್ನು
ಕಂಗಿಸುತ್ತಿತ್ತು. ನಿನ್ನಂತಹ ಸನ್ಯಾಸಿಯೂ ನನ್ನ ಮೋಹದ ಬಲೆಗೆ
ಬೀಳಲೇಬೇಕೆಂದು ಅಧಿಕಾರ ತೋರಿ ಠೀವಿ ಬೀರುತ್ತಿತ್ತು. ಇದುವರೆಗೂ
ತನ್ನ ಸುತ್ತಲಿದ್ದ ನಿಸರ್ಗದ ಸೌಂದರ್ಯದಲ್ಲೆಲ್ಲಾ ತಾನೇ ತಾನಾಗಿ ಉಕ್ಕಿ
ಬರುತ್ತಿತ್ತು. ಹೀಗಾಗಿ ಸದಾನಂದನ ತಲೆಯ ತುಂಬ ಬರಿಯ ಸ್ವಪ್ನ.
ಮೈಥಿಲಿಯ ಅಸ್ಪಷ್ಟರೂಪ. ಹೆಣ್ತನದ ಅಸ್ಫುಟ ಆಕರ್ಷಕ ಮೂರ್ತಿ!

ಅಂದು ಶುಕ್ರವಾರ. ಮೈಥಿಲಿಯ ಮನೆಗೆ ಹೋಗಿ ಬಂದು ಒಂದು
ವಾರವಾಗಿತ್ತು. ಅವಳನ್ನು ಹೇಗಾದರೂ ಸರಿ ಮತ್ತೊಮ್ಮೆ ನೋಡಿ
ಬಿಡಬೇಕೆನ್ನುವ ಆಸೆ ಹೃದಯ ಹೊಕ್ಕಿತ್ತು. ಗುರುಗಳು ಇಂದು ಕೂಡ
ತನ್ನೊಂದಿಗೇ ನಗರಕ್ಕೆ ಪ್ರಸಾದ ಕಳುಹಿಸುವರೆಂದು ಎಣಿಸಿದ್ದ. ತನ್ನ
ಆಸೆ ತಾನಾಗಿಯೇ ಈಡೇರುವುದೆಂದು ಭರವಸೆ. ಗುರುಗಳಲ್ಲಿ ಹೇಳಲು
ನಾಚಿಕೆ. ಅವಮಾನ. ಇದು ಸಣ್ಣಮಾತು. ಈ ಸಣ್ಣತನವನ್ನು ಗುರುಗ
ಳಿಂದ ಮರೆಮಾಡುವುದೇ ವಾಸಿಯೆಂದುಕೊಂಡ. ಹಾಗೂ, ಗುರುಗಳೇ
ಏನು ಯೋಚನೆಯೆಂದಾಗ ಏನೂ ಇಲ್ಲವೆಂದು ಹೇಳಿ ಸುಳ್ಳು ನುಡಿದ.
ಎಂದೂ ಗುರುವಿನ ಬಳಿ ಮುಚ್ಚುಮರೆಯಿರದವನು ಇಂದು ಕಪಟಿಯಾದ.
ಮನಸ್ಸಿನಲ್ಲಿದ್ದುದನ್ನು ಹೇಳದಾದ. ಆದರೆ ಅದರ ವಿಷಯವಾಗಿ ಅವನಿಗೆ
ಸ್ಪಷ್ಟಾಗಿ ಯೋಚನೆಯೇ ಬರಲಿಲ್ಲ. ಹೇಳುವಾಗ ಕೊಂಚ ಅಳುಕಿದ್ದರೂ
ಹೇಳಿಯಾದಮೇಲೆ ಅದು ಉಳಿಯಲಿಲ್ಲ. ಅಂತೂ ಒಳಆಸೆಯಿತ್ತು—ಗುರು
ಗಳು ಪ್ರಸಾದ ಕೊಟ್ಟು ಕಳುಹುವರೆಂದು. ಆದರೆ ಗುರುಗಳು ಸಮಾಧಿಯಲ್ಲಿ

ಮಗ್ನರಾದವರು ಎಚ್ಚರಗೊಳ್ಳಲೇ ಇಲ್ಲ. ಮಧ್ಯಾಹ್ನವೆಲ್ಲ ಈಗ ಕರೆದಾರು, ಆಗ ಕರೆದಾರೆಂದು ಕಾದು ಕುಳಿತ. ಆದರೆ ಗುರುಗಳು ಮಾತ್ರ ಕರೆಯಲೇ ಇಲ್ಲ. ನಾನೇ, ಹಾಗೆಯೇ ಹೋಗಿ ಕೊಟ್ಟು ಬಂದು ಆಮೇಲೆ ಹೇಳಿ ಬಿಡಲೇ ಎಂದೂ ಒಂದು ಯೋಚನೆ ಬಂತು. ಆದರೆ ಆ ಯೋಚನೆ ಮರು ಕ್ಷಣವೇ ಮಾಯವಾಯಿತು. ತಾನಿಲ್ಲದಿರುವಾಗ ಗುರುಗಳು ಕಣ್ಣು ಬಿಟ್ಟರೆ! ಅದು ಸರಿಹೋಗದೆಂದುಕೊಂಡ. ಕೊನೆಗೂ ಅವನಿಗೆ ಸಿಕ್ಕಿದುದು ನಿರಾಸೆಯೇ!

ವಿದ್ಯಾರಣ್ಯರು ಒಳಗೆ ಸಮಾಧಿಮಗ್ನರಾದಹಾಗೆಯೇ ಸದಾನಂದ ಮೈಥಿಲಿಯ ಚಿಂತೆಯಲ್ಲಿ ಮಗ್ನನಾಗಿದ್ದ. ಮೈಥಿಲೀ ಈಗೇನು ಮಾಡು ತ್ತಿರಬಹುದು? ಈಗೆಲ್ಲಿರಬಹುದು? ಸುಖವಾಗಿ ಹೂವಿನ ಹಾಸಿಗೆಯ ಮೇಲೆ ನಿದ್ರಿಸುತ್ತಿರಬಹುದು. ತನ್ನ ಕಾಲಿನ ಗೆಜ್ಜೆಯನ್ನು ಕೈಯಲ್ಲಿಟ್ಟು ಕೊಂಡು ಅದರ ರವದಲ್ಲಿ ಮೈಮರೆತಿರಬಹುದು. ಶೃಂಗಾರದಲ್ಲಿ ತೊಡಗಿರ ಬಹುದು. ಹೀಗೆಯೇ ನೂರು ಬಗೆಯ ಕಲ್ಪನೆಗಳನ್ನು ಮಾಡಿಕೊಳ್ಳುತ್ತಲೇ ಸದಾನಂದ ಅಂದನ್ನೆಲ್ಲಾ ಕಳೆದ.

ರಾತ್ರಿಯಾದರೂ ವಿದ್ಯಾರಣ್ಯರು ಸಮಾಧಿಯಿಂದ ಏಳಲಿಲ್ಲ. ಸದಾನಂದನಿಗೆ ತಡೆಯಲಾಗಲಿಲ್ಲ. ಆಶ್ರಮದಿಂದ ಎದ್ದು ಹೊರಗೆ ನಡೆದ. ಪಕ್ಕದಲ್ಲೇ ಹರಿಯುತ್ತಿದ್ದ ನದಿಯ ಸಪ್ಪುಳ ಕಾಲಂದುಗೆಯ ದನಿಯಂತೆ, ಕಾಲ್ಕಡಗ, ಗೆಜ್ಜೆಗಳ ಘಲಿರುಘಲಿರಿನ ಮಧುರ ರವದಂತೆ ಕೇಳಿತು. ನದಿಯ ಬಳಿ ಬೆಳೆದ ಕಾಡು ಹೂವುಗಳ ವಾಸನೆ ಬಹಳ ಮೃದುವಾಗಿ ಸೆಳೆಯು ತ್ತಿತ್ತು. ಎಲ್ಲಕ್ಕೂ ಮಿಗಿಲಾಗಿ ಆಷಾಢದ ಆಕಾಶದಲ್ಲಿ ತುಂಬಿದ ಬೆಳು ದಿಂಗಳು ಹಾಲಿನ ಮಳೆ ಕರೆಯುತ್ತಿತ್ತು. ಸದಾನಂದನ ಮನಸ್ಸು ಅವನ ಬಳಿ ಉಳಿಯಲಿಲ್ಲ. ಬೆಳುದಿಂಗಳಿನಲ್ಲಿ ಕಲ್ಪನೆಯ ನಾವೆಯಲ್ಲಿ ವಿಹಾರ ಹೊರಟುಬಿಟ್ಟಿತು. ತನಗರಿವಿಲ್ಲದೆಯೇ ಸದಾನಂದ ನದಿಯ ತೀರಕ್ಕೆ ಬಂದು ನಿಂತಿದ್ದ. ಒಂದೇ ಸಮನಾಗಿ ನೀರಿನೊಳಗೆ ದಿಟ್ಟಿಸುತ್ತಿದ್ದ.

ನೀರಲೆಗಳಮೇಲೆ ಕುಣಿಕುಣಿಯುವ ಬೆಳ್ಳಿಯ ರೇಕುಗಳೆಲ್ಲ ಮೆಲ್ಲನೆ ಒಂದಾಗಿ ಮತ್ತೆ ಮೈಥಿಲಿಯ ರೂಪ ತಾಳಿದುವು. ಹಲವಾರು ಬಗೆಗಳಲ್ಲಿ

ಕುಣಿದುವು. ಕರೆದುವು. ಸದಾನಂದ ಮೈಮರೆತ. ಹೃದಯಾಂತರಾಳ ದಿಂದ ಒಂದೇ ಸಮನಾಗಿ "ಮೈಥಿಲೀ, ಮೈಥಿಲೀ "ಯೆನ್ನುವ ಕೂಗು ಬರುತ್ತಿತ್ತು. ಒಂದು ವಾರದ ಹಿಂದೆ "ಓಂ "ಕಾರದಲ್ಲಿದ್ದ ಸಚ್ಚಿದಾನಂದತೆ ಇಂದು "ಮೈಥಿಲೀ " ಪದಕ್ಕೆ ಬಂದುಹೋಗಿತ್ತು!

ಮೋಡದ ತೆಳುಪರೆಯೊಂದು ಒಂದು ಚಂದ್ರನನ್ನು ಮುಚ್ಚಲು ಬೆಳಕು ತುಸು ಕಂದಿತು. ಕೂಡಲೇ ಸದಾನಂದ ಆಕಾಶದ ಕಡೆ ನೋಡಿದ. ಕಪ್ಪು ಮೋಡದ ಒಂದು ಬದಿಯಿಂದ ಚಂದ್ರ ಹೊರಗಿಣುಕುತ್ತಿದ್ದ. ಇದ್ದ ಕ್ಕಿದ್ದಂತೆ ಸದಾನಂದನ ಕಣ್ಣು ಕೋರೈಸಿದಂತಾಯಿತು. ಮೈಥಿಲಿಯ ಆಕೃತಿ ಸ್ಪಷ್ಟವಾಗಿ ಕಣ್ಣಮುಂದೆ ಬಂದು ನಿಂತಿತು. ಸೌಂದರ್ಯದ ಖನಿ ಆಕೆಯ ಆಕೃತಿ. ತಾನು ಮೊತ್ತಮೊದಲು ಕಂಡಾಗಿನ ನಿಲುವು! ಅಬ್ಬಾ! ಅದೆಷ್ಟು ಆಕರ್ಷಕ! ಹಾಲುಗೆನ್ನೆಯಮೇಲೆ ಕೊಂಚ ಕೆಂಪು— ಸೆಕೆಗಿರಬೇಕು. ತುಸು ತೆರೆದ ಗುಲಾಬಿಯಂತಹ ಬಾಯಿ. ನುಣುಪು ಗಲ್ಲ. ದಂತದ ಮೇಲಿನಿತು ಭಂಗಾರದ ನೀರು ಚೆಲ್ಲಿದ ಬಣ್ಣದ ಮೂಗು. ಎರಡು ಕಡೆಗೂ ಕಮಲದ ಕಣ್ಣುಗಳು. ವಿಶಾಲವಾದರೂ ಮಾಟವಾದ ಹಣೆ. ರಾತ್ರಿಗೂ ಕೊಂಚ ಕಪ್ಪನ್ನು ಸಾಲ ಕೊಡುವಂತಹ ಕಪ್ಪು ತಲೆಗೂದಲು. ಆದರೆ ಎಲ್ಲಕ್ಕೂ ಹೆಚ್ಚಾಗಿ ಆ ನಿಲುವು. ನಾಟ್ಯದ ಅಭ್ಯಾಸ ಮಾಡು ತ್ತಿದ್ದಳೋ ಏನೋ! ಬಿಗಿಯಾಗಿ, ತೋಳಿಗೆ ಬಿಗಿಯಾದ ಬೆಳ್ಳಿಯ ಮೆರು ಗಿನ ಕಂಚುಕ ತೊಟ್ಟಿದ್ದಳು. ಉಟ್ಟಿದ್ದುದು ಕರಿಯ ರೇಶಿಮೆಯ ಸೀರೆ. ಸೆರಗನ್ನು ಭುಜದಮೇಲೆ ಕೊಂಚ ಸರಿಸಿ, ಸೊಂಟವನ್ನು ಸುತ್ತಿ ಆಲಂಗಿಸಿದ್ದ ಭಂಗಾರದ ಡಾಬಿಗೆ ಸಿಕ್ಕಿಸಿದ್ದಳು. ಆಗ—ಮೋಡದ ಮರೆಯಿಂದ ಚಂದ್ರ ನಿಣುಕುವಂತೆ, ಸೀರೆಯ ಸರಿದ ಸೆರಗಿನ ಕರಿಯಂಚಿನಿಂದ ತುಂಬಿದ ಕಂಚುಕ ಹೊರಗಿಣುಕುತ್ತಿತ್ತು. ಉಸಿರಾಟದಲ್ಲಿ ಏರಿಳಿಯುತ್ತಿತ್ತು. ಚಂದ್ರನನ್ನು ನೋಡುತ್ತಾ ನೋಡುತ್ತಾ ಸದಾನಂದ ನಿಟ್ಟುಸಿರಿಟ್ಟ. ಕಣ್ಣಿನಲ್ಲಿ ನೀರು ಹನಿಯಿಟ್ಟಿತು. ಕಂಠದಲ್ಲೇ ದುಃಖ ಸಿಕ್ಕಿಕೊಂಡಿತು. ತುಟಿ ಮಾತ್ರ ಮೈಥಿಲೀಯೆನ್ನುವಂತೆ ಅಲುಗಾಡಿತು. ವಿರಹದ ಕಾವಿನಲ್ಲಿ ಮೈ ಹುಚ್ಚು ಹುಚ್ಚಾಗಿ ಬೆಚ್ಚಗಾಗಿತ್ತು.

ತಾನೇ ಮೈಥಿಲಿಯನ್ನು ಪಾಪದಿಂದ ಪುಣ್ಯದ ಹಾದಿಗೆ ತರಲು ಯತ್ನಿಸಿದುದು ಸದಾನಂದನಿಗೆ ಮರೆತುಹೋಗಿತ್ತು. ಪಾಪ ಪುಣ್ಯಗಳೊಂದೂ ಈಗ ಅವನಿಗೆ ಗೊತ್ತಿರಲಿಲ್ಲ. ಬೇಕಾಗಿಯೂ ಇರಲಿಲ್ಲ. ಈಗ ಅವನಿಗೆ ಗೊತ್ತಿದ್ದುದು ಒಂದೇ-ಬೇಕಾಗಿದ್ದುದೂ ಒಂದೇ. ಅದು ಮೈಥಿಲೀ. ಮನಸ್ಸಿನ ಒಂದೊಂದು ಹನಿ ಕೂಡ ಮೈಥಿಲಿಗಾಗಿ ಕಾತರಿಸುತ್ತಿತ್ತು. ಈ ಅಸಾಧಾರಣ ಆಸೆ. ಹಿಂದೆಂದೂ ಕಾಣದ ಈ ಕಾಮದ ಹುಚ್ಚುಹೊಳೆಯಲ್ಲಿ ಸದಾನಂದನ ವಿಚಾರಶಕ್ತಿ ಕೊಚ್ಚಿಕೊಂಡು ಹೋಗಿತ್ತು. ಬಯಕೆಯ ಮಹಾಪ್ರವಾಹದಲ್ಲಿ ಅವನೊಂದು ಕಿರಿಯ ನಾವೆ. ಅದು ಒಯ್ದಲ್ಲಿಗೆ ಅವನ ಪ್ರಯಾಣ! ಗುರುಗಳು, ಆಶ್ರಮ, ಪಾಪ—ಪುಣ್ಯ ಯಾವುದೂ ಈಗ ಅವನಿಗೆ ನಿಜವಲ್ಲ. ಅವನ ಕಣ್ಣಿನ ಧ್ರುವತಾರೆ, ದಾರಿ ತೋರುತ್ತಿದ್ದುದು ಮೈಥಿಲಿಯ ರೂಪ. ದಾರಿಗೆಳೆಯುತ್ತಿದ್ದುದು ಮೈಥಿಲಿಯ ಬಯಕೆ. ಒಂದೆರಡು ಕ್ಷಣ ಮನಸ್ಸಿನಲ್ಲಿ ಮೋಡ ಮುಸುಕಿತ್ತು. ತಾನು ಆಶ್ರಮ ಬಿಟ್ಟು ಹೋಗುವುದು ಸರಿಯೇ? ಆಮೇಲೆ ಗುರುಗಳಾದರೂ ಏನೆಂದುಕೊಂಡಾರು! ಎನ್ನುವ ಯೋಚನೆ ಬಂತು. ಕೊಂಚ ಹೊತ್ತು ಉತ್ತರ ಕಾಣದೆ ಮನಸ್ಸು ತಬ್ಬಿಬ್ಬಾಯಿತು. ಆದರೆ ಮರುಗಳಿಗೆಯೇ ಹೊಸ ಯೋಚನೆ. ಗುರುಗಳಿಗೆ ತಿಳಿಯದಂತೆಯೇ ಮೈಥಿಲಿಯ ಮನೆಗೆ ಹೋಗಿ ಗೋಪ್ಯವಾಗಿ ಬಂದು ಬಿಟ್ಟರೆ! ಇಷ್ಟಾಗಿ ಮೈಥಿಲಿಯೊಬ್ಬ ನರ್ತಕಿ. ವಿಲಾಸದ ವಸ್ತು. ಭೋಗಸಾಮಗ್ರಿ. ಅಂದಮೇಲೆ ಅದರಲ್ಲೇನು ತಪ್ಪು? ಹಾಗೆ ಮಾಡಿದರೂ ಪರವಾಗಿಲ್ಲ ಎನಿಸಿತು. ಆದರೆ ಈ ರೂಪದಲ್ಲಿ ಮೈಥಿಲಿಯ ಬಳಿಗೆ ಹೋಗುವುದೇ? ರಾಜಧಾನಿಯ ಪ್ರಸಿದ್ಧ ನರ್ತಕಿ. ಯಾವಳೊಬ್ಬಳ ಕಡೆಗಣ್ಣಿನ ಕುಡಿನೋಟಕ್ಕೋಂದಕ್ಕಾಗಿ ಕೋಟ್ಯಾಧೀಶ್ವರರೇ ಕಾದು ನಿಂತಿರುವರೋ, ಅಂತಹವಳ ಬಳಿಗೆ ಭಿಕಾರಿಯಂತೆ ಹೋಗುವುದೇ! ಛೆ! ಅದು ಸಾಗದು! ಈ ಸನ್ಯಾಸವನ್ನು ನಾನೇಕೆ ಕೈಗೊಂಡೆನೋ ಎಂದು ತನ್ನ ಮೇಲೆಯೇ ಸದಾನಂದನಿಗೆ ಕೋಪ ಬಂದಿತು. ತನ್ನನ್ನು ತನ್ನ ಮೂರ್ಖತನಕ್ಕಾಗಿ ಹಳಿದುಕೊಂಡ. ಸನ್ಯಾಸವನ್ನು ಮನಸಾರ ಶಪಿಸಿದ. ಸನ್ಯಾಸ ಮನುಷ್ಯನಿಗೆ ಮಗ್ಗುಲಮುಳ್ಳು.

ಅದನ್ನು ತೊಡೆದುಹಾಕಿದರೇ ಮನುಷ್ಯನಿಗೆ ಕಲ್ಯಾಣ ಎನ್ನುವ ತುತ್ತ ತುದಿವರೆಗೂ ಅವನ ಈ ವಿಚಾರ ಏರಿತು. ವಿದ್ಯಾರಣ್ಯರ ಶಿಷ್ಯ, ಯುವಕ ಸನ್ಯಾಸಿ, ಅಖಂಡಬ್ರಹ್ಮಚಾರಿ ಸದಾನಂದ, ಆ ಕ್ಷಣದಲ್ಲಿ, ಬೆಳುದಿಂಗಳ ರಾತ್ರಿಯಲ್ಲಿ, ನದಿಯ ದಡದಲ್ಲಿ ನಿಂತು, ಮೈಥಿಲಿಯ ವಿರಹದಲ್ಲಿ ಒದ್ದಾಡುತ್ತಾ, ತನಗೆ ಸಹಜವಲ್ಲದ ಹೊಸ ವಿಚಾರದ ವಿಷಚಕ್ರವ್ಯೂಹಾಂತರದಲ್ಲಿ ಸಿಕ್ಕು ಸುರುಳಿ ಸುತ್ತುತ್ತಿದ್ದ. ತನ್ನನ್ನು ತಾನು ಮರೆತಿದ್ದ. ತಾನೆಲ್ಲಿರುವೆನೆಂಬುದನ್ನು ಯಾವಾಗಲೋ ನೆನಪಿನಿಂದ ಅಳಿಸಿಬಿಟ್ಟಿದ್ದ.

ಇದ್ದಕ್ಕಿದ್ದಂತೆ ಆಶ್ರಮದಿಂದ ಪೂಜ್ಯ ವಿದ್ಯಾರಣ್ಯರ ಧ್ವನಿ. ಗಂಭೀರವಾದ ಧ್ವನಿ. ಶಂಖನಿನಾದ ಗಾಳಿಯಲ್ಲಿ ತೂರಿ ಬಂದು ಕಿವಿಗಳಲ್ಲಿ ತುಂಬಿ ಒಂದು ಬಗೆಯ ಕಟುಮಾಧುರ್ಯದಿಂದ ಮೈ ಜುಮ್ಮೆನಿಸುವಂತೆ ಅವರ ಧ್ವನಿ. "ಸದಾನಂದ, ಮಗು, ಸದಾನಂದ" ಎಂದು ಕೂಗಿದರು. ತಾಯಿ ತನ್ನ ಮಗು ದಾರಿ ತಪ್ಪಿಸಿಕೊಂಡೆಲ್ಲಿಯೋ ಹೋಗಿಬಿಟ್ಟಿದೆಯೆನ್ನುವ ಕಳವಳದಲ್ಲಿ ಕೂಗುವಂತಿತ್ತು ಅವರ ಮಾತಿನ ಬಗೆ, ಅದರಲ್ಲಿನ ಮಮತೆ. ಕೊಟ್ಟಿಗೆಯಲ್ಲಿ ಕಟ್ಟಿಹಾಕಿರುವ ಹಸು, ತನ್ನ ಎಳಗರು ಹುಚ್ಚುಹುಚ್ಚಾಗಿ ಕುಣಿದು ಭಾವಿಯ ಬಳಿ ಬಂದಾಗ ಕೂಗುವಾಗಿನ ಕಾತರ ಭರಿತ ವಾತ್ಸಲ್ಯದ ಪ್ರತೀಕವಾಗಿತ್ತು. ಕೂಗಿದುದು ಮೊದಲೊಮ್ಮೆ ಸದಾನಂದನಿಗೆ ಕೇಳಲಿಲ್ಲ. ಎರಡನೆಯ ಬಾರಿಯ ಕೂಗು ಕೇಳಿ ಸದಾನಂದ ಎದ್ದುನಿಂತ. ಹೋಗಲೇ ಬೇಡವೇ ಎಂದು ಅರೆಗಳಿಗೆ ಚಿಂತಿಸಿ ಒಲ್ಲದ ಹೆಜ್ಜೆಗಳನ್ನು ಆಶ್ರಮದ ಕಡೆಗೆ ಸರಿಸಿದ.

ವಿದ್ಯಾರಣ್ಯರ ಆಶ್ರಮದ ಬಳಿಗೆ ಬಂದು ಒಳಗೆ ಕಾಲಿಡುತ್ತಿದ್ದಂತೆಯೇ ಅವನ ಕಣ್ಣಿಗೆ ಮೊದಲು ಬಿದ್ದುದು ಮೈಥಿಲೀ. ಈ ಮೈಥಿಲೀ ನಗರದಲ್ಲಿ ಕಂಡ ನರ್ತಕಿ ಮೈಥಿಲಿಯಲ್ಲ. ನಗರದ ಶೃಂಗಾರ, ಅಲಂಕಾರಗಳಾವುವೂ ಇಲ್ಲದ ನಿರಾಭರಣ ಸುಂದರಿ. ನಿಸರ್ಗದ ಸಹಜ ಸೌಂದರ್ಯ ಅವಳಲ್ಲಿ ಪರಿಪೂರ್ಣವಾಗಿತ್ತು. ಸಾಮಾನ್ಯವಾದ ಒಂದು ವಸ್ತ್ರ ತೊಟ್ಟ ಅವಳ ದೇಹದ ಆಕರ್ಷಣೆ ಮೊದಲಿಗೆ ನೂರುಮಡಿಯಾಗಿತ್ತು. ಮುಖದಲ್ಲಿ ಧರಿಸಿದ್ದ ಕುಂಕುಮದ ಬೊಟ್ಟು ಆಹ್ವಾನಕೊಡುತ್ತಿತ್ತು. ಸದಾನಂದ ತನ್ನ

ವಾತಾವರಣ, ತಾನಿರುವ ಸ್ಥಳ ಮರೆತು, ಉದ್ರೇಕದಿಂದ "ಮೈಥಿಲೀ" ಎನ್ನುತ್ತಾ ಮುನ್ನುಗ್ಗಿದ. ಮೈಥಿಲೀ ಕಾಲಿಗೆರಗಿದಳು.

"ಪಾಪಿಯ ಪಾಪ ತೊಳೆಯಲು ಬಂದ ಪುಣ್ಯಮೂರ್ತಿ. ಪುಣ್ಯದ ಹಾದಿ ತೋರಿ ಕಾಪಾಡಬೇಕು" ಎಂದು ದೈನ್ಯವಾಗಿ ಬೇಡಿಕೊಂಡು ಮೈಥಿಲೀ ಕಾಲಿಗೆ ತಲೆ ಮುಟ್ಟಿಸಿದಳು.

ಸದಾನಂದನಿಗೆ ನದಿಯ ಪ್ರವಾಹವೆಲ್ಲ ತನ್ನ ಮೇಲೊಮ್ಮೆಗೇ ನುಗ್ಗಿದಂತಾಯಿತು ಏನೂ ಕಾಣಿಸದು. ಎಲ್ಲ ಕಗ್ಗತ್ತಲು. ಮನಸ್ಸು ದಾರಿಗಾಣದೆ, ಕಣ್ಣು ಕಾಣದೆ ಧಿಟ್ಟನೆ ನಿಂತಂತಾಯಿತು!

"ಮಾಯೆ ಕಳಚಿ ಬಂದಿದೇನೆ. ನನ್ನ ಎಲ್ಲವೂ ಬೇರೆಯವರದು. ನನ್ನ ಆತ್ಮ ಮಾತ್ರ ನನ್ನದು. ಅದನ್ನುಳಿಸಿಕೊಳ್ಳಲು ಬಂದಿದೇನೆ. ಅನುಗ್ರಹಿಸಿ ಪಾಪಿಯನ್ನು ಉದ್ಧಾರಮಾಡಬೇಕು." ಎಂದು ಅಂಗಲಾಚಿಕೊಂಡಳು ಮೈಥಿಲೀ.

ಸದಾನಂದ ಕಲ್ಲಿನ ಮೂರ್ತಿಯಂತೆ ನಿಂತಿದ್ದ. ತನ್ನನ್ನು ತಾನೇ "ಪಾಪಿ"ಯೆಂದು ಅವಳು ಕರೆದುಕೊಂಡುದರಿಂದ ಅವನಿಗೆ ಈಗ ಯಾವ ಒಳ ಆನಂದವೂ ಆಗಲಿಲ್ಲ. ಅದಕ್ಕೆ ಬದಲಿಗೆ ಚೇಳು ಕುಟುಕಿದಂತೆ ಹೃದಯದಲ್ಲೊಂದು ವೇದನೆ. ಅವಳನ್ನು ಆಶೀರ್ವದಿಸಲು ಕೈ ಮುಂದೆ ಬರಲಿಲ್ಲ. ಮನಸ್ಸಿನಲ್ಲಿ ಯಾವ ವಿಚಾರವೂ ಹೊಳೆಯಲಿಲ್ಲ. ಬಾಯಲ್ಲಿ ಮಾತು ಹೊರಡಲಿಲ್ಲ. ಉಸಿರು ಕೂಡ ನಿಂತುಹೋದಂತೆ, ಕಲ್ಲಿನಲ್ಲಿ ಕಡೆದ ಮಾನುಷ ವಿಗ್ರಹದಂತೆ ಸದಾನಂದ ನಿಂತಿದ್ದ.

"ಮಗು, ಯಾಕೆ ಹಾಗೆಯೇ ನಿಂತೆ. ಪಾಪಿಯನ್ನು ಅನುಗ್ರಹಿಸಬಾರದೇ?" ಎಂದರು ವಿದ್ಯಾರಣ್ಯರು. ಅಂಬಿನೇಟು ಬಂದೆದೆ ಹೊಕ್ಕಂತೆ ಸದಾನಂದನ ಹೃದಯ ತಲ್ಲಣಿಸಿತು. ಸಾಗರದ ಘರ್ಜನೆಯಂತೆ ರಕ್ತ ಮೊರೆಯುತ್ತಿತ್ತು. ದುಃಖದ ಮಹದಾಕಾಶ ಮೇಲ್ಮುಸುಕಿದಾಗ, ಸುತ್ತೆಲ್ಲ ಬರಿಯ ಕಡಲೋ ಕಡಲಾದಾಗ ಹುಲ್ಲುಕಡ್ಡಿಯೊಂದರಮೇಲೆ ನಿಂತ ಒಂದು ಇರುವೆಯಂತಾಗಿತ್ತು ಅವನ ಹೃದಯ. ತನಗಿನ್ನುಳಿವಿಲ್ಲ. ಪಥಾತವೊಂದೇ ಎಂದು ನಿರಾಶೆಯಲ್ಲಿ ಮುಳುಗಿತು. ಇದುವರೆಗೂ

ಅಚೇತನವಾಗಿದ್ದ ಮೈ ಸಡಿಲವಾದಂತಾಗಿ ಗುರುಗಳ ಕಡೆಗೆ ತಿರುಗಿದ. ಆಶ್ರಮದೊಳಕ್ಕೆ ಕಾಲಿಟ್ಟಾಗಿನಿಂದಲೂ ಅವರು ಅಲ್ಲಿಯೇ ಕುಳಿತುದನ್ನು ಅವನು ನೋಡಿಯೇ ಇರಲಿಲ್ಲ. ಅದೇ ನಗು. ತೇಜಃಪುಂಜ ಮುಖ. ಸದಾನಂದನ ಹೃದಯ ಬಿಚ್ಚಿತು. ಕಚ್ಚಿಕೊಂಡಿದ್ದ ಕಂಠ ದಾರಿ ಕೊಟ್ಟಿತು. ಕಣ್ಣಿನಲ್ಲಿ ಒಮ್ಮೆಗೇ ನೀರಾಡಿತು. ಉಮ್ಮಳದಲ್ಲಿ ಬಿಕ್ಕಿಬಿಕ್ಕಿ ಅಳುತ್ತಾ ಗುರುಗಳ ಕಾಲಿಗೆ ಬಿದ್ದ.

"ನಾನು ಮಹಾಪಾಪಿ, ತಂದೆ, ನನ್ನನ್ನು ಕ್ಷಮಿಸಿ. ಅನುಗ್ರಹಿಸಿ."

ವಿದ್ಯಾರಣ್ಯರು ತಿಳಿನೀರಿನ ಕೊಳದಲೆಯ ಕುಳಿಸಗೆ ನಕ್ಕು ಮೆಲ್ಲನೆ ಅವನ ತಲೆ ನೇವರಿಸಿದರು. ಸದಾನಂದನ ಮನಸ್ಸಿಗೇನೋ ಒಂದು ಬಗೆಯ ಶಾಂತಿ, ಸಮಾಧಾನ ಬಂದಂತಾಯಿತು. ಇದುವರೆಗೂ ಮನಸ್ಸಿನಲ್ಲಿದ್ದ ಬಿರುಗಾಳಿ ಇದ್ದಕ್ಕಿದ್ದಂತೆ ಇಲ್ಲವಾಗಿ ಚೇತನದ ಕುಡಿದೀಪ ನೇರವಾಗಿ ಉರಿಯಲಾರಂಭಿಸಿತು. ವಿದ್ಯಾರಣ್ಯರು ಎರಡೂ ಕೈಗಳಿಂದ ಅವನನ್ನು ಮೆಲ್ಲನೆ ಹಿಡಿದು ಮೇಲೆಬ್ಬಿಸಿದರು. ಸದಾನಂದ ಕೈಮುಗಿದು ಕೊಂಡು ಗುರುಗಳ ಎಡಪಕ್ಕಕ್ಕೆ ನಿಂತ. ಮೈಥಿಲೀ ಬಂದು ವಿದ್ಯಾರಣ್ಯರಿಗೆ ನಮಸ್ಕರಿಸಿ ಬಲಗಡೆಗೆ ನಿಂತಳು.

"ಮಗು, ಕ್ಷಮೆ ನೀಡಲು ನಾನಾರು? ಸರ್ವಕ್ರಿಯೆಗಳಿಗೂ ಹೊಣೆಯಾದವನೊಬ್ಬನು ಮಾತ್ರ ಕ್ಷಮೆ ನೀಡಬಲ್ಲವನು. ನಾವು ಪಾಪಿಗಳಿರಬಹುದು. ಪುಣ್ಯವಂತರಿರಬಹುದು. ಅದನ್ನು ನಿರ್ಣಯಿಸುವುದು ನಮ್ಮಿಂದ ಸಾಧ್ಯವಿಲ್ಲ. ಪರಿಪೂರ್ಣತೆ ಪಡೆದವನೊಬ್ಬನೇ ಎಲ್ಲವನ್ನೂ ತಿಳಿಯಬಲ್ಲ. ಮಾನವನ ದೃಷ್ಟಿ ಬಹಳ ಸಂಕುಚಿತ. ಬಹಳ ಸಣ್ಣದು. ಸಹಜವಾಗಿಯೇ ಅದು ತಪ್ಪು ನೋಟದಿಂದ ನೋಡುತ್ತದೆ. ನಮಗೆ ಒಂದು ಪಾಪವಾಗಿ ಕಾಣಬಹುದು. ಅದೇ ಮತ್ತೊಬ್ಬರಿಗೆ ಪುಣ್ಯವಾಗಿ ತೋರಬಹುದು. ಇವೆರಡರ ಒಕ್ಕೂಟವೇ ಜೀವನ. ಹಗಲು ರಾತ್ರಿಗಳ ಕೂಡಿಕೆಯಿಂದಲೇ ದಿನ. ಕೃಷ್ಣಪಕ್ಷ, ಶುಕ್ಲಪಕ್ಷಗಳ ಸೇರುವಿಕೆಯಿಂದಲೇ ಮಾಸ. ಅಂತೆಯೇ ಪಾಪ-ಪುಣ್ಯಗಳ ಮಿಶ್ರಣ ನಮ್ಮ ಬಾಳು. ನಮ್ಮ ನೋಟ ಹಿರಿದಾದಷ್ಟೂ, ನಮ್ಮ ಬಾಳು ಬೆಳೆದಷ್ಟೂ, ನಮ್ಮ ಹೃದಯ

ವಿಸ್ತಾರವಾದಷ್ಟೂ ಅವುಗಳೆರಡರ ಐಕ್ಯ ನಮಗೆ ತೋರುತ್ತದೆ. ಆ ಭಾವನೆ, ಆ ಅನುಭವ, ಆ ಕಲ್ಪನೆ ಬಂದಾಗ ಮಾತ್ರ ಸಾಧನೆ ಸಾಧ್ಯ. ಸಾಧನೆ ಸಾರ್ಥಕ!"

ವಿದ್ಯಾರಣ್ಯರು ಮಾತು ಮುಗಿಸಿ ಮುಗುಳು ನಕ್ಕರು. ವೈಥಿಲೀ, ಸದಾನಂದರ ಹೃದಯಗಳಲ್ಲಿ ಹೂ ಚೆಲ್ಲಿದಂತಾಯಿತು. ಇಬ್ಬರೂ ನಿಂತಲ್ಲಿಂದಲೇ ಗುರುಗಳಿಗೆ ತಲೆಬಾಗಿದರು. ವಿದ್ಯಾರಣ್ಯರು ಕಣ್ಣು ಮುಚ್ಚಿ ಸಮಾಧಿಯಲ್ಲಿ ಹೊಕ್ಕರು. ಬೆಳುದಿಂಗಳು ಹೊರಗೆ ಪ್ರಪಂಚವನ್ನೆಲ್ಲಾ ತನ್ನ ವಿಶಾಲಹೃದಯದಲ್ಲಿ, ಹಾಲುನಗೆಯಲ್ಲಿ ತೇಲಿಸುತ್ತಿತ್ತು.

# ಕಲಾವಿದ

"ನನಗದು ಬೇಕಿಲ್ಲ. ಬೇಕಿಲ್ಲ! ಸುಮ್ಮನೆ ಯಾಕೆ ಗೋಳು ಹುಯ್ಯುತ್ತೀಯಮ್ಮಾ ?"

"ಹೀಗೇ ಎಷ್ಟು ದಿನ ಮನೆಯಲ್ಲೇ ಕುಳಿತಿರುವೆ, ಮಗು ?"

"ಇಷ್ಟು ದಿನವಿರಲಿಲ್ಲವೇನಮ್ಮ—ಇನ್ನು ಮೇಲೆಯೂ ಹಾಗೆಯೇ. ಹೊರಗಿನ ಪ್ರಪಂಚಕ್ಕಿಂತ ನನ್ನ ಈ ಪ್ರಪಂಚವೇ ವಾಸಿ. ನನ್ನನ್ನು ನೋಡಿ ತಿರಸ್ಕರಿಸುವವರು ಇಲ್ಲಿಲ್ಲ."

"ನಿನ್ನನ್ನು ತಿರಸ್ಕರಿಸುವರೇ, ಮಗು? ಇಷ್ಟು ಚೆನ್ನಾಗಿ ಚಿತ್ರ ಬರೆಯುವೆ. ಈಗಾಗಲೇ ನಿನ್ನ ಹೆಸರು ಎಲ್ಲೆಲ್ಲೂ ಕೇಳುತ್ತಿದೆ. ಉತ್ತಮ ಕಲಾವಿದನೆಂದು ಜನ ನಿನ್ನನ್ನು ಹೊಗಳುತ್ತಿದಾರೆ. ಪತ್ರಿಕೆಗಳಲ್ಲಿ ನಿನ್ನನ್ನು ಹೊಗಳಿ ಬರೆದುದನ್ನು ನೀನೇ ನನಗೆ ತೋರಿಸಿದೆ. ಮತ್ತೆ, ತಿರಸ್ಕಾರ ವೆಲ್ಲಿಯದು, ಮಗು ?"

"ಅಮ್ಮ, ನೀನು ನನ್ನನ್ನು ನೋಡುತ್ತಿರುವುದು ನಿನ್ನ ದೃಷ್ಟಿ ಯಿಂದ. ಪ್ರಪಂಚದ ಕಣ್ಣಿನಿಂದಲ್ಲ. ತಾಯಿಯ ಕಣ್ಣಿಗೆ ಮಗ ಹೇಗಿ ದ್ದರೂ ಚೆನ್ನೇ! ಆದರೆ ಪ್ರಪಂಚದ ಕಣ್ಣಿಗೆ!—ನಾನು ಬೀದಿಯಲ್ಲಿ ಹೋಗುತ್ತಿದ್ದರೆ ನನ್ನನ್ನು ನೋಡಿ ನಗುವವರೆಷ್ಟು ಮಂದಿ ಗೊತ್ತೇ ? ಎದೆ ಕಿವಿಚಿ ಹೋಗುತ್ತದಮ್ಮ, ಅವರ ನಗು ಕೇಳಿ. ಮಕ್ಕಳು ದೂರದಿಂದ ನನ್ನನ್ನು ಕಂಡೇ ಕಿರಿಚಿ ಓಡಿಹೋಗುತ್ತವೆ. ಹೂವನ್ನು ಮುಟ್ಟಿದರೆ ಹೂವು ಕೂಡ ಸೆಟೆದುಕೊಂಡು ಮುಳ್ಳಾಗುವುದೋ ಏನೋ! ಅಮ್ಮ—"

"ಇಲ್ಲ, ಮಗು. ನೀನು ಹಾಗೆಲ್ಲ ಅನ್ನಬಾರದು. ನಿನಗೆ ಇವತ್ತಾಗಿ ಏನಾಗಿರುವುದು—?"

"ಅಮ್ಮ, ಈ ಸುಟ್ಟ ಮುಖವನ್ನು ಹೇಗೆ ತೋರಿಸಲಮ್ಮ ? ಯಾರಿಗೂ ತೋರಿಸಲು ನಾಚಿಕೆಯಾಗುವುದಮ್ಮ. ನೀನು ಚಿತ್ರಕಾರನು.

ನಿನ್ನ ಮುಂದೆ ಬರಲೂ ಒಂದೊಂದು ಬಾರಿ ಮನಸ್ಸು ಅಳುಕುತ್ತದೆ. ನಾನೇಕೆ ಹೀಗೆ ಹುಟ್ಟಿದೆನೋ ಎನಿಸುತ್ತದೆ."

"ಹಾಗನ್ನಬೇಡ. ಮಗು—"

"ಅಮ್ಮ, ನಾನು ಸತ್ತರೇ ವಾಸಿಯಲ್ಲವೇನಮ್ಮ ?"

"ಛೆ! ಕೆಟ್ಟಮಾತಾಡಬೇಡ—"

ತಾಯಿ ಕಣ್ಣೊರೆಸಿಕೊಂಡರು. ಎದುರಿಗೆ ಮಗ. ವಿಖ್ಯಾತ ಕಲಾವಿದ. ಚಿಕ್ಕತನದಲ್ಲಿಯೇ ಚಿತ್ರ ತೆಗೆಯುವುದರಲ್ಲಿ ಹೆಸರು ಪಡೆದವನು. ಎಲ್ಲರ ಬಾಯಲ್ಲೂ ಅವನ ಹೆಸರೇ. ಸಾವಿರ ಮಂದಿ ಅವನಿಂದ ಚಿತ್ರ ಬರೆಯಿಸಿಕೊಳ್ಳಲು ಇಚ್ಛೆಪಡುವರು. ಆದರೆ ಅವನಿಗೆ ಮನಸ್ಸಿನಲ್ಲಿ ಶಾಂತಿಯಿಲ್ಲ. ಹೃದಯದಲ್ಲಿ ಬೆಂಕಿ—ಜ್ವಾಲಾಮುಖಿ ಹುದುಗಿದೆ. ಇಷ್ಟೆಲ್ಲ ಕಾರಣ, ಅವನ ಮುಖ. ಆಳೇನೂ ಸಣ್ಣವನಲ್ಲ. ಹೃಷ್ಟಪುಷ್ಟವಾಗಿಯೇ ಬೆಳೆದವನು. ಕಟ್ಟುಮಸ್ತಾದ ದೇಹ. ಹಿಂಭಾಗದಿಂದ ನೋಡಿದರೆ ಸುಂದರನಾಗಿಯೇ ತೋರುವನು. ಒಂದೊಂದು ಅಂಗವೂ ಅಚ್ಚಿಗೆ ಹಾಕಿ, ಮಾಡಿ, ಕೂಡಿಸಿದಂತಿತ್ತು. ಸಮರೂಪ. ಆದರೆ ಮುಖ ಮಾತ್ರ ವಿಕಾರ. ಅಗಲವಾಗಿ ಕಾಂತಿಯುತವಾದ ಕಣ್ಣುಗಳು ತೀಕ್ಷ್ಣತೆಯಿಂದ ಹೊಳೆಯುತ್ತಿದ್ದುವು. ಆದರೆ ಹಣೆಯಮೇಲೆ—ಕೆನ್ನೆಯಮೇಲೆ, ನೋಡಲಾಗದಂತೆ ವಿಕಾರ ಗೆರೆಗಳು. ಸುಕ್ಕುಸುಕ್ಕು. ಚರ್ಮವನ್ನು ಕಿತ್ತು ದಿಣ್ಣೆ ಕಟ್ಟಿ ನಡುವೆ ಕೆತ್ತಿದಂತೆ, ಉತ್ತಂತೆ, ತೋರುತ್ತಿತ್ತು. ಈ ಮುಖದ ಒಗೆಯಿಂದಲೇ ಅವನಿಗೆ ಚಿಕ್ಕಂದಿನಿಂದಲೂ ದುಃಖ. ಎಳತನದಿಂದಲೂ ಸರಿಯವರಿಂದ ಬೈಗಳು, ಕುಹಕ, ವ್ಯಂಗ್ಯಹಾಸ್ಯ. ಅದು ಇಂದಿನವರೆಗೂ ನಿಂತಿರಲಿಲ್ಲ. ಒಮ್ಮೆಯೇನಾದರೂ ಅಪ್ಪಿತಪ್ಪಿ ಹೊರಗೆ ಹೊರಟನೆಂದರೆ ಸರಿ. ಎಲ್ಲರ ಕಣ್ಣೂ ಅವನ ಮೇಲೆಯೇ! ಎಲ್ಲರೂ ತನ್ನನ್ನೇ ನೋಡುತ್ತಿರುವರು. ತನ್ನನ್ನು ತಿರಸ್ಕಾರದಿಂದ ನೋಡುವರೆನ್ನುವ ವಿಚಾರ ಅವನ ಸೂಕ್ಷ್ಮ ಹೃದಯಕ್ಕೆ ನಾಟಿತ್ತು. ಅದರಿಂದ ಮುಳ್ಳು ಹತ್ತಿದ ಕೈ ಹಿಂದಕ್ಕೆಳೆದುಕೊಳ್ಳುವಂತೆ ಮತ್ತೆ ಮನೆಗೆ ಓಡಿಬರುತ್ತಿದ್ದ. ಮತ್ತೆ ತನ್ನ ಕೋಣೆಯಾಯಿತು. ಚಿತ್ರದ ರಚನೆಯಾಯಿತು. ಯಾರನ್ನೂ ಕರೆಯುತ್ತಿರಲಿಲ್ಲ

ಯಾರ ಮನೆಗೂ ಹೋಗುತ್ತಿರಲಿಲ್ಲ. ದೂರದ ಹಳ್ಳಿಯ ಸ್ನೇಹಿತನೊಬ್ಬ ಮನೆಗೆ ಬಂದು ಚಿತ್ರಗಳನ್ನು ತೆಗೆದುಕೊಂಡು ಹೋಗಿ ಮಾರುತ್ತಿದ್ದ. ಬಂದ ಹಣ ದಲ್ಲಿ ಜೀವನ ಹೇಗೋ ಹಾಗೆ ಸಾಗುತ್ತಿತ್ತು. ಅವನಿಗೆ ಮನಸ್ಸು ಸಮಾ ಧಾನವಿಲ್ಲ. ತಾಯಿಗೂ ಸಮಾಧಾನವಿಲ್ಲ. ಅವನಿಗೆ ತನ್ನ ವಿರೂಪದಿಂದ ಕುಗ್ಗಿದ ಹೃದಯ. ತಾಯಿಗೆ ಅವನ ನೋವಿನಿಂದಾದ ನೋವು. ಜತೆಗೆ ಅವನನ್ನು ಸುಖಗೊಳಿಸಲು ಸೊಸೆ ತರುವ ಆಸೆಯ ಹೃದಯ!

"ಹಾಗನ್ನಬಾರದು, ಮಗು. ಆಗಲೇ ಅವರಿಗೆ ಹೇಳಿ ಕಳಿಸಿದೆ. ನಾಳೆ ಬರುವರು."

"ಯಾರು? ಅಯ್ಯೋ! ಬೇಡಮ್ಮ. ಅವರೂ ನನ್ನ ಮುಖ ಕಂಡು ಉಗಿಯಲಿ ಎಂದೇನಮ್ಮ?"

"ಇಲ್ಲ, ಮಗು. ಅವರು ಅಂತಹವರಲ್ಲ. ಹುಡುಗಿಯನ್ನು ನೀನು ನೋಡು. ಒಪ್ಪಿದರೆ—"

"ಅಮ್ಮ—ನಾನು—ಹುಡುಗಿಯ ಮುಂದೆ ಬಂದು—ಇಲ್ಲ! ಇಲ್ಲ! ಸಾಧ್ಯವಿಲ್ಲ!"

"ಬೇಡ, ಮಗು. ನೀನು ನಿನ್ನ ಕೋಣೆಯೊಳಗಿಂದಲೇ ನೋಡು."

"ಕಳ್ಳತನದಲ್ಲಿ ನೋಡುವುದು ಬೇಡಮ್ಮ. ಇಷ್ಟಾಗಿ ಹುಡುಗಿ ಯನ್ನು ನಾನು ಒಪ್ಪಿದರೂ ಹುಡುಗಿಗೆ ನಾನೊಪ್ಪಿಗೆಯಾಗಬೇಡವೇ? ನೀನೇ ಹೇಳಮ್ಮ—ಈ ಮುಖ ಕಂಡು ಯಾವ ಹುಡುಗಿಯಾದರೂ ಒಪ್ಪು ವಳೇ? ನಿಜ. ನನಗೇನೋ ಬೇಕಾಗಿದೆ. ನನ್ನ ಹೃದಯಕ್ಕೆ ಶಾಂತಿ ನೀಡುವ ಹೃದಯ ಬೇಕಾಗಿದೆ. ಸುಖದ ಅಮೃತದ ಹೊಳೆಯನ್ನು ನನ್ನ ಜೀವನದಲ್ಲಿ ಹರಿಸುವವರೂ ಬೇಕಾಗಿದೆ. ನನ್ನ ಕತ್ತಲೆಯಲ್ಲಿ ಬೆಳಕು ನೀಡುವವರೂ ಬೇಕಾಗಿದೆ. ಆದರೆ ಅಮೃತ ಕೊಟ್ಟು ವಿಷ ಕುಡಿಯು ವವರು ಯಾರಿದ್ದಾರಮ್ಮ?"

ಮೋಹನ ತಾಯಿಯಿಂದ ಆ ಕಡೆಗೆ ಸರಿದು ನಿಂತ. ತಾನೇ ಚಿತ್ರಿಸಿದ ಪರಶಿವನ ಮೂರ್ತಿ. ಉಳಿದೆಲ್ಲ ಚಿತ್ರಗಳ ಶಿವನಲ್ಲ ಆ ಚಿತ್ರದ ಶಿವ. ಮುಖದಲ್ಲಿ ಭಾವನೆಯೇ ಕಾಣದ ಶಿವನಲ್ಲ. ಬರಿಯ ಜಟಾಜೂಟ

ಧಾರಿಯಲ್ಲ. ಇದು ಪರಮಮಾನವ ಶಿವನ ಮೂರ್ತಿ. ಮುಖದಲ್ಲಿ ತ್ಯಾಗದ ಮುಗುಳು ನಗೆ. ಕಣ್ಣಿನಲ್ಲಿ ಪ್ರೇಮದ ಕಾಂತಿ. ಬಲಗೈಯಲ್ಲಿ ವಿಷ—ಹಾಲಾಹಲ. ಆ ಕೈ ಬಾಯಿಯ ಕಡೆಗೆ ಕೊಂಚ ಓಲಿದೆ. ಎಡಗೈಯಲ್ಲಿ ಅಮೃತದ ಬಟ್ಟಲು. ಆ ಕೈ ಮುಂದೆ ನೀಡಿದೆ ದಾನ ಕೊಡುವಂತೆ. ಸಾವಿಗೆ ಸಿದ್ಧನಾದ ಪರಮತ್ಯಾಗಿ ಶಿವ ಸಂತೋಷದಿಂದ ಹಾಲಾಹಲ ಧರಿಸಲು ಹೊರಟಿದಾನೆ.

"ಹಾಲಾಹಲ ಕುಡಿಯುವ ಸಾಹಸ, ತ್ಯಾಗ, ಆ ಪರಶಿವನೊಬ್ಬನಿಗೆ ಮಾತ್ರ!" ಎಂದುಕೊಂಡ ಮೋಹನ.

"ಹಾಗನ್ನಬೇಡ ಮಗು. ಹೆಂಗಸಿಗೆ ರೂಪ ಬೇಕಿಲ್ಲ. ಗುಣ ಬೇಕು. ಒಪ್ಪಬೇಕಾದುದು ನಿನ್ನ ಮುಖವನ್ನಲ್ಲ. ನಿನ್ನ ಕಲೆಯನ್ನು—"

"ಕಲೆ! ಕಲೆ ಯಾರಿಗೆ ಬೇಕು? ಹೆಣ್ಣಿಗೆ ಕಲೆಯಲ್ಲಿ ಆಸಕ್ತಿಯಿಲ್ಲ; ಕಲಾವಿದನಲ್ಲಿ. ತಾನೊಬ್ಬ ಕಲಾವಿದನ ಹೆಂಡತಿಯಾಗುವೆನೆನ್ನುವ ಹೆಮ್ಮೆ ಇರುವುದೇ ಹೊರತು, ಆ ಕಲೆಯ ಹಿರಿಮೆಯಲ್ಲಿ ವಿಶ್ವಾಸವಿರುವುದಿಲ್ಲ. ರೂಪ ಯಾರಿಗೆ ತಾನೇ ಬೇಡ ಹೇಳಮ್ಮ?—ನೀನೂ ರೂಪವತಿಯಾದ ಸೊಸೆಯನ್ನೇ ಬಯಸುವುದಿಲ್ಲವೇ?"

"ಹೂಂ—"

"ಅತ್ತೆಗೆ ರೂಪವತಿಯಾದ ಸೊಸೆಯ ಬಯಕೆ. ಹೆಣ್ಣಿಗೆ ರೂಪವಂತ ಗಂಡನ ಬಯಕೆ. ಗಂಡಿಗೆ ರೂಪವತಿಯಾದ ಹೆಣ್ಣಿನ ಬಯಕೆ. ಅದು ಸಹಜ. ನನ್ನನ್ನು ಒಪ್ಪುವವರು ಯಾರಮ್ಮ?"

ಮೋಹನನ ಕಣ್ಣಿನ ತುಂಬ ನೀರು ತುಂಬಿಕೊಂಡಿತು. ಮಾತು ಕಂಠದಲ್ಲೇ ಮುಕ್ಕಾಯಿತು. ಹೃದಯದ ನೂರು ಆಸೆ ಹೊಗೆಯಾಡುತ್ತಿದ್ದುದು ಎಚ್ಚತ್ತು ಉರಿಯುತ್ತಿತ್ತು. ಅವನಿಗೇನೂ ಆಸೆಯಿಲ್ಲದಿಲ್ಲ. ಅವನು ಕಲಾವಿದ. ಸೌಂದರ್ಯಪ್ರೇಮಿ. ಸೌಂದರ್ಯವನ್ನು ಎಲ್ಲಿ ಕಂಡರೂ ಸವಿಯುವ ರಸಿಕ ಮನಸ್ಸಿನವನು. ಆದರೆ ತನ್ನ ವಿಕಾರತೆಯಿಂದ ಅವನ ಮನಸ್ಸು ಕುಗ್ಗಿಹೋಗಿತ್ತು. ಹೃದಯ ಬಹಳ ಸೂಕ್ಷ್ಮವಾಗಿ ಹೋಗಿತ್ತು. ಆಸೆಗಳು, ಆಕಾಂಕ್ಷೆಗಳನ್ನೆಲ್ಲಾ ಹೃದಯದಲ್ಲೇ ಗೋರಿಮಾಡಿಡಲು ಯತ್ನಿ

ಸಿದ್ಧ. ಆದರೆ ಅಷ್ಟು ಸುಲಭವಾಗಿ ಅದು ಸಾಧ್ಯವಾಗುವಂತಿದ್ದರೆ ಇನ್ನೇನು?

ಹಿಂದೆ ಒಂದು ಬಾರಿ ಅವನು ಕಾಲೇಜಿನಲ್ಲಿ ಓದುತ್ತಿದ್ದಾಗ, ಅವನು ಚರಿತ್ರೆಯ ಸಂಘಕ್ಕೆ ಒಂದು ತೈಲಚಿತ್ರ ಬರೆದು ಕೊಟ್ಟಿದ್ದ. ಸಂಘದ ಉತ್ಸವದಂದು ಚಿತ್ರದ ಅನಾವರಣೋತ್ಸವವಿತ್ತು. ಅವನು ಚಿತ್ರ ಬರೆಯುವನೆಂದು ಯಾರಿಗೂ ಗೊತ್ತಿರಲಿಲ್ಲ. ಕಾಲೇಜಿನ ಬಳಿ ಕಾಲಿಟ್ಟರೆ ಎಲ್ಲರೂ ಅವನ ಕಡೆಗೆ ನೋಡಿ ಕಣ್ಣು ಹೊರಳಿಸುವವರೇ— ಇಲ್ಲ ನಗುವವರೇ! ಅವನ ಮನಸ್ಸಿನ ಕುದಿ ಯಾರಿಗೂ ತಿಳಿಯದು. ಆ ದಿನ ಸಂಜೆ ಚಿತ್ರ ಅನಾವರಣವಾದಮೇಲೆ ಚಿತ್ರ ಬರೆದವರು ಇವರೇ ಎಂದು ಅಧ್ಯಕ್ಷರು ಅವನನ್ನು ವೇದಿಕೆಯ ಮೇಲಕ್ಕೆ ಕೂಗಿದರು. ಆಗ, ಕೆಳಗಿನಿಂದ ತೀವ್ರ ಬೆಳಕು ಅವನ ಮೇಲೆ ಬೀಳುತ್ತಿರುವಾಗ, ವೇದಿಕೆಯ ಮೇಲೆ ಒಂದು ನಿಂತಿದ್ದ. ಹೊಗಳಿಕೆ, ಮೆಚ್ಚುಗೆ ಪಡೆದ ಹಿಗ್ಗಿನಲ್ಲಿ ಒಂದು ಅರೆನಿಮಿಷ ತನ್ನನ್ನು ತಾನೇ ಮರೆತ. ಬಣ್ಣದ ಪ್ರಪಂಚದಲ್ಲಿ ತೇಲಿದ. ಆದರೆ ಮರುನಿಮಿಷವೇ ನಗೆಯೊಂದು ಕಿವಿ ಹೊಕ್ಕು ಎದೆ ಕುದಿತ ಹೆಚ್ಚಿತು. ನನ್ನ ವಿಕಾರತೆಯನ್ನು ನೋಡಲು ಈ ವೇದಿಕೆ, ಈ ಬೆಳಕು, ಎಂದು ಹೃದಯ ಅಂದಿತು. ಮನಸ್ಸು ಹೂಂಗುಟ್ಟಿತು. ಸರಿ, ಮೊದಲಿನ ದ್ವೇಷ ಉಕ್ಕಿತು. ಅಲ್ಲಿಂದ ಒಂದೇ ಹಾರಿಗೆ ಹಾರಿದ ಪಕ್ಕದಲ್ಲಿದ್ದ ಕೋಣೆಗೆ—ಅಲ್ಲಿಂದ ಮನೆಗೆ ಓಡಿದ. ಆದರೆ ವೇದಿಕೆ ಬಿಡುವ ಮೊದಲು ಒಂದು ಸುಂದರ ಮುಖ—ಹೆಣ್ಣಿನ ಮುಖ ಕಂಡಿದ್ದ. ಮುಂದಿನ ಸಾಲಿನಲ್ಲಿ ಕುಳಿತಿದ್ದ ಹೆಣ್ಣುಮಕ್ಕಳಲ್ಲೊಬ್ಬಳ ಮುಖ ಮುದ್ದಾಗಿತ್ತು. ಸುಂದರವಾಗಿತ್ತು. ಅವನು ಬಣ್ಣದ ಜಗತ್ತಿನಲ್ಲಿ ಯಾವುದನ್ನು ಆರಾಧಿಸುತ್ತಿದ್ದನೋ ಆ ಮೂರ್ತಿಗೆ ಜೀವಕಳೆ ಕೊಟ್ಟಂತಿದ್ದಳು ಆಕೆ. ಆ ಹುಡುಗಿ ಯಾರೆಂಬುದು ಅವನಿಗೆ ತಿಳಿಯದು. ಆಕೆಯ ಹೆಸರೇನೆಂಬುದೂ ತಿಳಿಯದು. ತಿಳಿದುದಿಷ್ಟೇ—ಅವಳ ಮುಖದ ಸೌಂದರ್ಯ. ಆ ಸೌಂದರ್ಯ ಅವನ ಮನಸ್ಸನ್ನು ಆಕ್ರಮಿಸಿಬಿಟ್ಟಿತು. ಏನೇ ಮಾಡಿದರೂ ಆ ಸೌಂದರ್ಯವನ್ನು, ಆ ಮುಖವನ್ನು ಮರೆಯಲಾಗಲಿಲ್ಲ. ಹೂವಿನ ಸುಗಂಧದ

ನೆನಪಿನಂತೆ ಒಂದೇ ಸಮನಾಗಿ ಅವನ ಮನಸ್ಸಿನ ಹಿನ್ನೆಲೆಯಲ್ಲಿ ಹಿಂಸೆ ಪಡಿಸುತ್ತಿತ್ತು. ಕೊನೆಗೊಮ್ಮೆ ಆ ಮುಖದ ಚಿತ್ರ ಬರೆದ—ಅದೂ ಹದಿನೈದು ದಿನಗಳ ತಾಕಲಾಟದ ಅನಂತರ. ಬಂಗಾರದ ನೂಲಿನಿಂದ ನೇದ ಒಂದು ಜೇಡನ ಬಲೆ. ಜೇಡನ ಬಲೆಯ ಬಂಗಾರದ ಎಳೆಗಳ ಮಧ್ಯದಲ್ಲಿ, ನಡುಮಧ್ಯದಲ್ಲಿ, ಆಕೆಯ ಮುಖ. ಕೆಂಪು ನೀಲಿಮೊಗಳು, ಬೆಳ್ಳಿ ಬಿಳುಪುಗಳಿಂದ ರಚಿಸಿದ ಆ ಮುಖ ಬಂಗಾರದ ಹಿನ್ನೆಲೆಗೆ ಹೊಳೆಯುತ್ತಿತ್ತು. ಆದರೆ ಆ ಮುಖದಲ್ಲಿ ಶಾಂತಿಯಿರಲಿಲ್ಲ. ಕಾತರವೂ ಇರಲಿಲ್ಲ. ಗೆಲುವೂ ಇಲ್ಲ. ಮುಖದಲ್ಲಿ ಸೌಂದರ್ಯವೇ ಇರಲಿಲ್ಲ. ರೂಪವೆಲ್ಲಾ ಹೊರಗಿನ ಆಕರ್ಷಕ ರೂಪ. ಆದರೆ ಏನೋ ಕೊರತೆ ಚಿತ್ರದಲ್ಲಿ. ಅದು ಅವನ ಮನಸ್ಸಿನ ಕೊರತೆ. ಆ ಸೌಂದರ್ಯ ತನಗೆ ಬೇಕೆನ್ನುವ ಆಸೆ. ಆದರೆ ಅದು ಅಸಾಧ್ಯವೆನ್ನುವ ನಿರಾಸೆ. ಹೀಗಾಗಿ ಸೌಂದರ್ಯದ ಒಳ ಆತ್ಮ ಕೈ ಮೀರಿ ಹೋಗಿತ್ತು. ಅಂದಿನಿಂದಲೂ ಆ ಮುಖಕ್ಕಾಗಿ, ಆ ಸೌಂದರ್ಯಕ್ಕಾಗಿ ಕಾತರಿಸುತ್ತಿದ್ದ. ಬಯಸುತ್ತಿದ್ದ. ಆದರೆ, ಅವನನ್ನು—ಅವನ ಸುಟ್ಟ ಮೋರೆಯನ್ನು ಕಂಡು ಮೆಚ್ಚುವವರಾದರೂ ಯಾರು? ಈ ಕೊರತೆಯಿಂದ ಅವನ ಚಿತ್ರಕ್ಕೂ ಒಂದು ಕೊರತೆ ಬಂದಿತ್ತು.

ಆ ಚಿತ್ರದ ನೆನಪಾಗಿ ಮೋಹನ ತಾಯಿ ನಿಂತಿದ್ದ ಕಡೆಗೆ ತಿರುಗಿದ. ಅಲ್ಲಿಯೇ ಎದುರಿಗೇ ಆ ಚಿತ್ರ. ಇನ್ನೂ ಮೊದಲಿನಂತೆಯೇ ಉಳಿದಿತ್ತು. ಆ ಚಿತ್ರದ ಕುಂದು ಕಲಾವಿದನ ಕಣ್ಣಿಗೆ ಚೆನ್ನಾಗಿ ಕಾಣುತ್ತಿತ್ತು. ಮಾಂಸದ ಮುದ್ದೆಯೊಂದರ ಮುಖ ಇದು. ಇದರಲ್ಲಿ ಜೀವಕಳೆಯಿಲ್ಲ ಎಂದು ಅವನ ಹೃದಯ ಹೇಳಿತು. ಹೌದು, ಕಲಾವಿದನಲ್ಲಿ ಕೊರತೆಯಿರಬೇಕಾದರೆ ಕಲೆ ತಾನೆ ಹೇಗೆ ಪೂರ್ಣವಾದೀತು ಎಂದುಕೊಂಡ. ಮತ್ತೆ ಆ ಮಾತು—ಆ ದಿನದ ಮಾತು ನೆನಪಾಯಿತು—ಚಿತ್ರ ಬರೆಯುತ್ತಿರುವಾಗ ಒಂದು ದಿನ ಕಾಲೇಜಿನ ಕಡೆಗೆ ಹೋಗುತ್ತಿದ್ದ. ಅಂದು ಎಂದಿನಂತೆ ತಲೆತಗ್ಗಿಸಿ, ಕರವಸ್ತ್ರದಿಂದ ಮುಖ ಮುಚ್ಚಿಕೊಂಡು ತಲೆ ತಗ್ಗಿಸಿಕೊಂಡು ಹೋಗುತ್ತಿದ್ದಾಗ ಹಲವಾರು ಕಂಠಗಳು ಕೇಳಿದುವು. ಅವನ ಹೃದಯ ಅಳುಕು ಹೃದಯ. ತನ್ನ ವಿಚಾರವಾಗಿ ಏನಾದರೂ ಮಾತಾಡಿ

ಕೊಳ್ಳುತ್ತಿರುವರೋ ಏನೋ ಎಂದು ಸಂದೇಹ. ಏನೆನ್ನುವರೋ ಎಂಬ ಕಾತರ. ಗೊತ್ತೇ ಇದೆ, ನನ್ನನ್ನು ತಿರಸ್ಕರಿಸುವರೆನ್ನುವ ಕಳವಳ. ಇಲ್ಲ, ಹಾಗಿರಲಾರದು, ಅವರು ಬಯ್ಯಲಾರರು, ಎನ್ನುವ ಭ್ರಮೆ; ಆಸೆ. ಅದ ರಲ್ಲಿ ಅವನಿಗೇ ಸಾಕಷ್ಟು ನಂಬಿಕೆಯಿರಲಿಲ್ಲ. ಹೀಗಾಗಿ ಮನಸ್ಸು ಕುದಿ ಯುತ್ತಿತ್ತು. ಮೈಯೆಲ್ಲಾ ಕಿವಿಯಾಗಿ ಕೇಳಿದ. ಮಾತು ಅರ್ಧ ಅರ್ಧ ಕೇಳಿಸಿತು.

"ಅಯ್ಯೋ—ಹೆಸರು ಹೇಗಿದ್ದರೇನೆ?"

"ಸರಿ, ಸರಿ, ಕಣಿಗಲೆಗೆ ಗುಲಾಬಿ ಎಂದು ಹೆಸರಿಟ್ಟರಾಯಿತೇನೆ?"

ಮೋಹನನ ಎದೆ ಕಿವಿಚಿದಂತಾಯಿತು. ಗುಲಾಬಿ-ಕಣಿಗಲೆ-ತಾನು!

"ಮುಳ್ಳುಮುಳ್ಳು ಮುಖದ ಆ ಮೆಳ್ಳೆಗಣ್ಣಿ ಇಲ್ಲವೇ—ಅವಳ ಹೆಸರು ಮೀನಾಕ್ಷಿ!"

"ಅದಕ್ಕೇನು ಮಾಡಲಾಗುತ್ತೆ, ಕೊಕ್ಕರೆ ಕೊರಳಿನವರೂ ಹಂಸ ರಾಗುವುದಿಲ್ಲವೇ?"

ಮೋಹನನ ಎದೆ ಹೊಡೆದುಕೊಳ್ಳುತ್ತಿತ್ತು. ಮನಸ್ಸು ವಿಹ್ವಲ ವಾಯಿತು. ಸಾಗರದ ಮಹಾ ಅಲೆಗಳ ನಡುವೆ ಸಿಕ್ಕಿಕೊಂಡು ಹೆಣಗಾ ಡುವ ಮರದ ತುಣುಕಿನಂತೆ ಒದ್ದಾಡುತ್ತಿತ್ತು. ತನ್ನ ರೂಪ! ತನ್ನ ಹೆಸರು! ಎಂತಹ ಕೂಡಿಕೆ! ಎರಡು ಧ್ರುವಗಳ ಕೂಡಿಕೆ ಅದು! ಆ ಹೆಸ ರನ್ನು ಯಾರಿಟ್ಟರೋ ತನ್ನ ವಿಕಾರಾಕೃತಿಗೆ ಎಂದು ಮರಮುರ ಮಿಡುಕಿದ. ಕಣ್ಣಿನಲ್ಲಿ ನೀರು ಬಂತು. ಉಕ್ಕಿ ಹರಿಯಿತು. ಅಂದು ಮತ್ತೆ ಕಾಲೇಜಿಗೆ ಹೋಗುವ ಮನಸ್ಸಾಗಲಿಲ್ಲ. ನೇರವಾಗಿ ಮನೆಗೆ ಹಿಂತಿರುಗಿದ. ಮನೆಗೆ ಬಂದು ಒಂದೇ ಸಮನೆ ಮಿಸುಕಾಡಿದ. ಪರೆ ಬಿಡುವ ಹಾವಿನಂತೆ ಒದ್ದಾ ಡಿದ. ಅಯ್ಯೋ ಹಾಳು ಮುಖ! ಹಾಳು ಹೆಸರು! ನಾನೇಕೆ ಹುಟ್ಟಿದೆನೋ ಎಂದು ತನ್ನನ್ನು ತಾನೇ ಹಳಿದುಕೊಂಡ. ತನಗೆ ಜೀವ ಕೊಟ್ಟ ತಾಯಿ ಯನ್ನು ಶಪಿಸಿದ. ಆತ್ಮಹತ್ಯೆ ಮಾಡಿಕೊಂಡುಬಿಡಲೇ ಎಂದು ಎದ್ದು ನಿಂತ. ಎದುರಿಗೇ ಕಲೆಯ ಅಧಿದೇವತೆ. ತಾನೇ ಚಿತ್ರಿಸಿದ ಮಹಾಶಕ್ತಿ—ಸರಸ್ವತಿ ಶಾರದೆ. ಅವನು ಚಿತ್ರಿಸಿದ ಶಾರದೆ ಎಂದಿನ ವೀಣಾಪಾಣಿ ಶಾರದೆಯಲ್ಲ.

ಬಿಳಿಯ ದುಕೂಲದ ಚಂದ್ರಮುಖಿಯಲ್ಲ. ನೀಲು ಬೆಳಕಿನ ಕಲೆಯ ದೇವತೆ ಶಾರದೆ. ಎರಡು ಪಕ್ಕಕ್ಕೂ ಮೋಡಗಳು. ಬಿಳಿಯದೊಂದು, ಕರಿಯ ದೊಂದು. ಅವುಗಳ ತೆಳು ಪರದೆಯೊಳಗಿನಿಂದ ಒಳಗಿನ ಮನೋಹರ ಮೂರ್ತಿ ಕಾಣುತ್ತಿತ್ತು. ಮುಖದ ಒಂದು ಪಕ್ಕಕ್ಕೆ ಹೆಚ್ಚು ನೀಲು ಬಿದ್ದು ಕೊಂಚ ಕಪ್ಪುಛಾಯೆ ಮೂಡಿತ್ತು. ಅದರಿಂದ ಕಲೆಯ ಅಧಿದೇವತೆಯ ಕಣ್ಣಿನ ಅಲಿ ಹೊಳೆಯುತ್ತಿತ್ತು, ಆದರೆ ಕಣ್ಣೀರಿನ ಮೂಲಕ. ಮತ್ತೊಂದು ಪಕ್ಕ ಪೂರ್ಣ ಬೆಳಕಿನಲ್ಲಿ ಶುಭ್ರವಾಗಿತ್ತು. ಕಣ್ಣು ನಗೆಯ ಕಾಂತಿ ಸೂಸು ತ್ತಿತ್ತು. ಶಾರದೆಯ ಎರಡು ಕೈಗಳಲ್ಲಿ ಒಂದರಲ್ಲಿ ಒಂದು ಅರಳುತ್ತಿರುವ ಹೂಮೊಗ್ಗು. ಮತ್ತೊಂದರಲ್ಲಿ ಮುಳ್ಳಿನ ಮಾಲೆ! ತನ್ನ ಕಲಾದೇವಿಯ ಚಿತ್ರ ಕಂಡು, ಎದ್ದು ನಿಂತವನು ಮತ್ತೆ ಕುಳಿತ. ತಲೆ ತಗ್ಗಿಸಿದ. ತಾಯೆ! ನನಗೇಕೆ ಈ ಕಲೆಯನ್ನು ಕೊಟ್ಟೆ? ಸೌಂದರ್ಯದ ಸವಿಯನ್ನೇಕೆ ತೋರಿ ಸಿದೆ. ನನ್ನನ್ನು ಸಾಮಾನ್ಯನಾಗಿಸಬಾರದಾಗಿತ್ತೇ? ಕಲ್ಪನೆಯ ಬಿಸಿ ಮುಳ್ಳಿನ ಮಾಲೆಯೇ ನನ್ನ ಹಣೆಗೆ! ಹೂವಿಲ್ಲವೇ? ಎಂದೆಂದಿಗೂ ಹೀಗೆಯೇ ನಾನು ದುಃಖ ಅನುಭವಿಸಬೇಕೇ? ಸೌಂದರ್ಯ ಕಾಣುವ ಬಯಕೆ ಕೊಟ್ಟೆ. ಶಕ್ತಿ ಕೊಟ್ಟೆ. ಆದರೆ ಅದನ್ನು ಪಡೆಯುವ ಶಕ್ತಿ ಕೊಡ ಲಿಲ್ಲ. ಈ ಕಲೆ, ಈ ಶಕ್ತಿ, ಈ ಯಶಸ್ಸು, ಈ ಕಲ್ಪನೆ ಯಾರಿಗೆ ಬೇಕು! ಮನಸ್ಸಿಗೆ ಶಾಂತಿ ಕೊಡಲಾರೆಯಾ? ಎಂದು ಮೂಕ ವೇದನೆಯಿಂದ ಶಾರ ದೆಯ ಚಿತ್ರದ ಮುಂದೆ ಬೇಡಿಕೊಂಡ. ಪಕ್ಕದಲ್ಲೇ ವಸಂತಋತುವಿನ ಆಗಮನದ ಚಿತ್ರ. ಮೂಕರಿಗೂ ಬಾಯಿ ಬರುವಂತೆ ಹೂಬಿರಿಯುವ ಋತು ವಸಂತದ ಚಿತ್ರ. ಬಳುಕುವ ಬಿಳಿ ಮೋಡದ ಮೇಲೆ ನಾಚಿಕೆಯ ಕೆಂಪು ರಂಗು ಚೆಲ್ಲುವ ವಸಂತರಾಜನ ಆಗಮನ ಚಿತ್ರ. ಅದನ್ನು ಹರಿದು ಚೂರು ಚೂರು ಮಾಡಿಬಿಡಲೇ ಎನುವಷ್ಟು ಕೋಪ ಬಂದಿತು ಮೋಹನನಿಗೆ. ಆದರೆ ಅದೇಕೋ ಏನೋ ಆ ದಿನ ಕೈ ತಡೆದಿತ್ತು. ತಲೆ ಹಾಗೆಯೇ ಎಷ್ಟೋ ಹೊತ್ತು ಚಿತ್ರದ ಮುಂದೆ ಬಾಗಿತ್ತು. ಅಂದು ರಾತ್ರಿ ಬಹಳ ಹೊತ್ತಿನವರೆಗೂ ಕುಂಚ ಹಿಡಿದು ಯಾವುದೋ ಚಿತ್ರ ಬಿಡಿಸಿದ್ದ. ಅದು ತನ್ನ ಚಿತ್ರ—ತನ್ನೆಲ್ಲ ಆಸೆ ಆಕಾಂಕ್ಷೆಗಳನ್ನು ಹುದುಗಿಸಿದ್ದ ಮುಖದ ಚಿತ್ರ!

ಅದನ್ನು ಚಿತ್ರಿಸುವಷ್ಟು ದಿನ ಮನಸ್ಸಿನ ನೋವಿನಲ್ಲೂ ಒಂದು ಸುಖ. ಅದನ್ನು ಮುಗಿಸಿದ ಮೇಲಿನ ಸಮಾಧಾನದಲ್ಲೂ ಒಂದು ಅಶಾಂತಿ!

ಇದೆಲ್ಲಾ ನೆನಪಾಯಿತು ಮೋಹನನಿಗೆ. ಕಣ್ಣೀರ ಮಳೆಯಿಂದ ತೊಯ್ದು ಹೂವಿನೆಸಳಿನಂತೆ ತೇವವಾಗಿತ್ತು. ಮುಳ್ಳಿನ ತುದಿಯ ಮಂಜಿನ ಹನಿಯಂತೆ, ಕೆನ್ನೆಯ ಚರ್ಮದ ದಿಣ್ಣೆಯ ಮೇಲೆ ಒಂದು ಹನಿ ನೀರು ನಿಂತು ಕೆಳಗಿಣುಕುತ್ತಿತ್ತು.

ತಾಯಿ ಅವನನ್ನು ಅಷ್ಟಕ್ಕೇ ಬಿಡಲಿಲ್ಲ. ಒಂದೇ ಸಮನಾಗಿ ಒತ್ತಾಯಮಾಡಲಾರಂಭಿಸಿದರು.

"ಮೊದಲು ನೀನು ನೋಡು. ನಿನಗೊಪ್ಪಿಗೆಯಾದರೆ ಸರಿ. ಆಮೇಲೆ ಮುಂದಿನ ಮಾತು. ಸುಮ್ಮನೆ ಯಾಕೆ ಒದ್ದಾಡುತ್ತೀ? ನೀನೇ ನನಗೆ ನೂರು ಸಾರಿ ಹೇಳಿಲ್ಲವೇ? ಒಳಗಿನ ಸೌಂದರ್ಯವೇ ನಿಜವಾದ ಸೌಂದರ್ಯವೆಂದು ಸಾರಿಸಾರಿಗೂ ಹೇಳುತ್ತಿರುವೆಯಲ್ಲಾ!" ಎಂದರು.

ಮೋಹನ ಮಾತಾಡಲಿಲ್ಲ. ಹೃದಯದಲ್ಲಿ ದ್ವೇಷ, ದುಃಖಗಳು ತುಂಬಿ ಬರುತ್ತಿದ್ದುವು.

"ನಾಳೆಯದಿನ ಮಧ್ಯಾಹ್ನ ಮನೆಯಲ್ಲೇ ಇರು. ನಾನು ಏನು ಹೇಳಿದೇನೆ ನೋಡುತ್ತಿರು. ಹುಡುಗಿ ನಿನ್ನ ಕಲೆಯನ್ನು ಮೆಚ್ಚುತ್ತಾಳೆ. ಖಂಡಿತ ನಿನ್ನನ್ನು ಮದುವೆಯಾಗಲು ಒಪ್ಪುತ್ತಾಳೆ."

ತಾಯಿ ಹೊರಟುಹೋದರು. ಮೋಹನ ಹಾಗೆಯೇ ನಿಂತಿದ್ದ. ಮನಸ್ಸಿನಲ್ಲಿನ್ನೂ ಬಿರುಗಾಳಿ. ಹೀಗೋ ಹಾಗೋ ತಿಳಿಯದೆ ಒದ್ದಾಡುತ್ತಿದ್ದ. ನೂರು ಬಗೆಯ ಮಿಣುಕು ಚಿಂತೆಗಳು ಮಿಂಚಿ ಮಾಯವಾಗುತ್ತಿದ್ದುವು. ಒಂದು ನಿಮಿಷ ಆಸೆ. ಸುಖದ ಕನಸು. ವಸಂತದ ಮಧುವಿನಲ್ಲಿ ಮಿಂದು ತಾನೂ ತನ್ನ ಗೆಳತಿಯೂ ಬಣ್ಣಬಣ್ಣದ ಜಗತ್ತನ್ನು ಕಟ್ಟಿ ಅಲ್ಲಿ ಕುಣಿದಂತೆ. ಮೋಡಗಳ ಮರೆಯಿಂದ ಇಣುಕುವ ಬಣ್ಣಕ್ಕೆ ಮಾರುವೋದಂತೆ. ಆದರೆ ಮರುನಿಮಿಷವೇ ಏಕಾಕಿತನದ ಭೀಕರ ದುಸ್ವಪ್ನ! ಮತ್ತೆ ಕುದುರುವ ಆಸೆ. ಹುಡುಗಿಗೆ ನಿಜವಾಗಿಯೂ ಕಲೆಯಲ್ಲಿ ಆಸಕ್ತಿಯಿದ್ದರೆ ಖಂಡಿತವಾಗಿ ತನ್ನ ಕಲೆಗಾಗಿಯಾದರೂ ತನ್ನವಳಾಗುವಳು ಎಂಬುವ

ಆಸೆ ನಿರಾಸೆಯ ಮಡಿಲಿನಿಂದ ಇಣುಕುತ್ತಿತ್ತು. ಮನಸ್ಸಿಗೆ ಅದೂ ಒಗ್ಗದು. ಎಲ್ಲಿ, ಹೇಗೆ ಸಾಧ್ಯ ಅದು? ಹೆಣ್ಣು ಅಷ್ಟು ಸುಲಭವಾಗಿ ಹೊರ ರೂಪದ ಆಸೆಯನ್ನು ಬಿಟ್ಟು ಬಿಡುವಳೇ ಎಂದು ಹೃದಯ ಆಸೆಯ ಕನ್ನಡಿಯನ್ನು ಒಡೆಯುತ್ತಿತ್ತು. ಮೋಹನ ಮೆಲ್ಲನೆ ಶಾರದೆಯ ಚಿತ್ರದ ಬಳಿ ಬಂದು ಮತ್ತೆ ತಲೆ ತಗ್ಗಿಸಿದ. ತಾಯಿ, ಕಲೆಯನ್ನು ಕೊಟ್ಟೆ. ಸೌಂದರ್ಯ ತಿಳಿಯುವ ಶಕ್ತಿ ಕೊಟ್ಟೆ. ಈಗ ಮನಸ್ಸಿನ ಶಕ್ತಿ ಕೊಡು. ಮನಸ್ಸಿನ ಸ್ಥೈರ್ಯ ನೀಡು. ಕಾಪಾಡು ಎಂದು ಕಣ್ಣೀನಿಂದ ಮೊರೆಯಿಟ್ಟ.

ಮಾರನೆಯ ದಿನ ತಾಯಿಗೆಷ್ಟೋ ಹೇಳಿದ. ನನ್ನ ಮದುವೆಯ ಯೋಚನೆ ಬಿಟ್ಟುಬಿಡು, ಬೇಡ. ಎಂದೆಷ್ಟೋ ಕೇಳಿಕೊಂಡ. ಆದರೆ ತಾಯಿಯನ್ನು ಒಪ್ಪಿಸಲಾಗಲಿಲ್ಲ. ರಾತ್ರಿಯೆಲ್ಲಾ ಇಬ್ಬರೂ ನಿದ್ರೆಯಿಲ್ಲದೆ ಕಳೆದಿದ್ದರು. ಮೋಹನ ತನ್ನ ಚಿತ್ರಗಳ ಮುಂದೆ. ಹೃದಯದ ಯಾವುದೋ ಮೂಲೆಯಲ್ಲಿ ಎದ್ದ ಕೊರಗನ್ನು, ನೋವನ್ನು ತಣಿಸುವ ಶಕ್ತಿ ಬೇಡುತ್ತ ಶಾರದೆಯ ಚಿತ್ರದ ಮುಂದೆ. ಬೃಂದಾವನವಿಹಾರಿ, ಗೀತಾಚಾರ್ಯ, ಶಾಂತಿಪ್ರಿಯ, ಮೋಹನಕೃಷ್ಣನ ಮುಂದೆ. ಕೊನೆಯದಾಗಿ ಜಗತ್ತನ್ನು ಬಿಟ್ಟು ಹೊರಟು, ಬುದ್ಧನಾಗುವ ನಿಶ್ಚಿತ ಮನಸ್ಸಿನ ಯುವಕ ಗೌತಮನ ಚಿತ್ರದ ಮುಂದೆ. ಆದರೆ ಯಾವುದರಿಂದಲೂ ಮನಸ್ಸಿಗೆ ಸಮಾಧಾನ ಸಿಕ್ಕಿರಲಿಲ್ಲ. ಮನಸ್ಸು ಪುತ್ತೆ ಮತ್ತೆ ವಸಂತಾಗಮನದ ಚಿತ್ರಕ್ಕೆ ಸುಯ್ಯುತ್ತಿತ್ತು. ಅದರ ಎದುರಿಗಿದ್ದ ಜೇಡನ ಬಲೆಯ ಹೆಣ್ಣಿನ ಮುಖದ ಕಡೆಗೆ ಕಣ್ಣು ಓಡುತ್ತಿತ್ತು.

ತಾಯಿ ರಾತ್ರಿಯೆಲ್ಲ ದೇವರನ್ನು ಬೇಡಿಕೊಳ್ಳುತ್ತಿದ್ದರು. ಈ ಅಗ್ನಿ ಪರೀಕ್ಷೆಯನ್ನು ಪಾರುಗೊಳಿಸಿಬಿಡೆಂದು ಶ್ರೀರಾಮನನ್ನು ಬೇಡಿಕೊಂಡರು. ಹೇಗಾದರೂ ಸರಿ, ಮನೆಗೆ ರೂಪವತಿಯಾದ ಸೊಸೆಯೊಬ್ಬಳು ಬಂದರೆ ಸಾಕು ಎಂದು ಮೊರೆಯಿಡುತ್ತಿದ್ದರು. ದೇವರ ಮುಂದೆ ನೂರು ಹರಕೆ ಹೊತ್ತರು. ಹುಡುಗಿಯನ್ನು ಹೇಗಾದರೂ ಮೋಹನ ಒಪ್ಪುವಂತೆ ಮಾಡಿ ರೆಂದು ಕೇಳಿಕೊಂಡರು. ಮೋಹನ ನನ್ನ ಮಗು. ಅವನ ಮನಸ್ಸೇ

ವಿಚಿತ್ರ. ಯಾವಾಗ ನೋಡಿದರೂ ತನ್ನನ್ನು ತಾನೇ ಹಳಿದುಕೊಳ್ಳುತ್ತಾನೆ. ಮದುವೆಯ ಮಾತೆತ್ತಿದರೇ ನೊಂದುಕೊಳ್ಳುತ್ತಾನೆ. ಈಗಲಾದರೂ ಹೇಗಾದರೂ ಅವನು ಮದುವೆಗೆ ಒಪ್ಪುವಂತಾಗಲಿ ದೇವರೇ ಎಂದು ಹಂಬಲಿಸುತ್ತಿದ್ದರು. ಆದರೆ ಅವರ ಮನಸ್ಸಿನ ವಿಚಾರ ಮೋಹನನ ವಿಚಾರದ ರೀತಿಗೆ ಹರಿಯಲೇ ಇಲ್ಲ. ಹುಡುಗಿ ತನ್ನನ್ನೊಪ್ಪುವುದಿಲ್ಲವೆಂದು ಮೋಹನನ ಯೋಚನೆಯಾದರೆ ಹುಡುಗಿಯನ್ನು ಮೋಹನನೊಪ್ಪುವುದಿಲ್ಲವೆಂದು ಅವರ ಕಳವಳ. ಆದರೆ ಇಬ್ಬರೂ ಯೋಚಿಸುತ್ತಿದ್ದುದು ಒಂದೇ ವಿಷಯ!

ಮಧ್ಯಾಹ್ನದ ಹೊತ್ತಿಗೆ ಚಿಂತೆಯಿಂದ ಮೋಹನನ ಮನಸ್ಸು ದಿಕ್ಕುಗಾಣದಾಗಿತ್ತು. ಮೀನು ಸಿಕ್ಕಿಕೊಂಡ ಗಾಳದ ದಾರದಂತೆ ಒಂದೇ ಸಮನಾಗಿ ಕುಣಿದಾಡುತ್ತಿತ್ತು. ಹೊರಗೆ ಯಾವ ಸಮಯಕ್ಕೆ ಆ ಹುಡುಗಿ ಬಂದು ಬಿಡುವಳೋ, ಹೇಗಿರುವಳೋ, ತನ್ನನ್ನೆಲ್ಲಿ ನೋಡಿ ಬಿಡುವಳೋ ಎಂಬ ಹೆದರಿಕೆ. ಕಾತರ. ಜತೆಗೆ ಅವಳನ್ನು ನೋಡಿಬಿಡಬೇಕೆನ್ನುವ ಆಸೆ. ಮನಸ್ಸಿನಲ್ಲಿ ಈ ಆಸೆ ರಾತ್ರಿಯೆಲ್ಲಾ ಬೇರೂರಿ ಬೆಳೆದಿತ್ತು. ಭವಿಷ್ಯವನ್ನು ಸುಖಮಯವನ್ನಾಗಿಸುವ ಆಸೆ ಯಾರಿಗೆ ತಾನೇ ಇರುವುದಿಲ್ಲ? ಮೋಹನ ಸಾಧ್ಯವಾದಷ್ಟೂ ಚೆನ್ನಾಗಿ ಬಟ್ಟೆ ಹಾಕಿಕೊಂಡ. ತಲೆ ಬಾಚಿಕೊಳ್ಳಲು ಕನ್ನಡಿಯ ಮುಂದೆ ನಿಲ್ಲುವವರೆಗೆ ಅರೆ ಭರವಸೆ. ಆದರೆ ಕನ್ನಡಿಯಲ್ಲಿ ತನ್ನ ಮುಖ ಕಂಡೊಡನೆಯೇ ಹೃದಯಕ್ಕೆ ಈಟಿ ಇಟ್ಟಂತಾಯಿತು. ಎಷ್ಟೇ ಕಷ್ಟಪಟ್ಟರೂ ಅಷ್ಟೇ ತನ್ನ ಬಾಳು ಎನಿಸಿತು. ಆದರೂ ತಾಯಿಯ ಮಾತಿನಿಂದ ಒಂದು ಬಗೆಯ ಆಶ್ವಾಸನೆ. ಸರಿಹೋದರೂ ಹೋಗಬಹುದು. ಆ ಹುಡುಗಿ ಒಪ್ಪಿದರೂ ಒಪ್ಪಬಹುದು. ತನ್ನನ್ನು ತನಗಾಗಿಯಲ್ಲದಿದ್ದರೂ, ತನ್ನ ಕಲೆಗಾಗಿ ಒಪ್ಪಬಹುದು. ಕೊಂಚ ಆದರ್ಶವಾದಿಯಿದ್ದರೆ ಖಂಡಿತವಾಗಿಯೂ ಒಪ್ಪಬಹುದು ಎಂದು ಮನಸ್ಸಿಗೆ ಸಮಾಧಾನ ಹೇಳಿಕೊಳ್ಳಲಾರಂಭಿಸಿದ. ಮನಸ್ಸಿನ ಸಂದೇಹ, ತಾಕಲಾಟಗಳ ಬಾಯಿಗೆ ಬಟ್ಟೆ ತುರುಕಿ, ತನ್ನ ಈ ಅಭಿಪ್ರಾಯವನ್ನು ಮನಸ್ಸಿನ ಮೇಲೆ ಒತ್ತಿ ಒತ್ತಿ ಮನಸ್ಸು ಅದನ್ನು ನಂಬುವಂತೆ ಮಾಡಿದ. ಹೀಗಾಗಿ ಹುಡುಗಿ ಅವನ ಮನೆಯ ನಡುಕೋಣೆಯಲ್ಲಿ ಮೋಹನನ ತಾಯಿಯೊಂದಿಗೆ

ಕುಳಿತುಕೊಂಡು ಮಾತಾಡಲು ಆರಂಭಿಸುವ ವೇಳೆಗೆ ಮೋಹನನ ಮನಸ್ಸಿನಲ್ಲಿ ಒಂದು ಒಗೆಯ ನಂಬುಗೆ, ಭರವಸೆ ಮೂಡಿತ್ತು.

ಹುಡುಗಿ ನಿಜವಾಗಿಯೂ ರೂಪವತಿ. ಮೋಹನ ಚಿತ್ರಿಸಿದ್ದ ಕಲಾಧಿದೇವತೆಯ ಪ್ರತಿರೂಪ ಆ ಹುಡುಗಿ ಎನುವಂತಿತ್ತು. ಆ ನೆಳಲು ಬೆಳಕಿನ ವೈಖರಿಯಿಲ್ಲದಿದ್ದರೂ ತುಸು ಕಂದುಬಿಳುಪು ಮುಖದಲ್ಲಿ ಅಗಲವಾದ ಕಣ್ಣುಗಳು. ಅಗಲವಾದ ಹಣೆಯಲ್ಲಿ ಹೊಳೆಯುವ ಚಮಕಿಯಿಟ್ಟ ಕುಂಕುಮದ ಬೊಟ್ಟು. ಎಡಕ್ಕೆ ತೆಗೆದ ಬೈತಲೆ. ಬೈತಲೆಯ ಮೇಲೆ ಬಂಗಾಲಿ ಹೆಣ್ಣುಮಕ್ಕಳಂತೆ ಒಂದು ಕೊಂಚ ಚಂದ್ರ ಸೋಕಿಸಿದ್ದಳು. ಮುಖಕ್ಕೊಪ್ಪುವ ಮೂಗು. ಮೂಗಿಗೊಪ್ಪುವಂತಹ ನತ್ತು. ಕಿವಿಗಳೆರಡಕ್ಕೂ ವಜ್ರದ ಓಲೆಗಳು. ತೂಗುಬಿಟ್ಟ ಎರಡು ಬಿಲ್ಲಿನಾಕಾರದ ಲೋಲಕ್ಕುಗಳು. ಬೈತಲೆಯ ಹಿಡಿಯಿಂದ ಕಿತ್ತುಬಂದ ಒಂದೆರಡು ಎಳೆ ಕೂದಲು ಕಿವಿಯ ಮೇಲುಭಾಗದ ಮೇಲೆ ಹಾದಿದ್ದುವು. ಸಮರೂಪ, ಸಮಸ್ಥಷ್ಟಿಯ ಕಲೆ ಆ ಹುಡುಗಿಯ ಮುಖದಲ್ಲಿತ್ತು. ಮೋಹನ ತನ್ನ ಕೋಣೆಯಿಂದ ಕದ್ದು ನೋಡಿದ. ಎದೆ ಡವಗುಟ್ಟುತ್ತಿತ್ತು ನೋಡಲು ಆರಂಭಿಸಿದಾಗ. ಆದರೆ ಎಷ್ಟು ಹೊತ್ತಾದರೂ ಅಲ್ಲಿಂದ ಕಣ್ಕಿರೆಯಲಾಗಲೇ ಇಲ್ಲ. ಕಲಾವಿದನ ದೃಷ್ಟಿ ಕಲೆಯ ಸುಂದರ ಮೂರ್ತಿಯಲ್ಲಿ ಐಕ್ಯವಾಗಿ ಹೋಗಿತ್ತು. ಮದುವೆಗಾಗಿ ಒಂದಿರುವಳು ಈ ಹುಡುಗಿ. ತಾನು ಆ ಹುಡುಗಿಯನ್ನು ನೋಡಿ ಒಪ್ಪಬೇಕು. ತಾಯಿ ಆ ಹುಡುಗಿಯನ್ನು ಮಾತಾಡಿಸಲು ಯತ್ನಿಸುತ್ತಿದಾಳೆ. ಆ ಹುಡುಗಿ ತನ್ನನ್ನೊಪ್ಪಬೇಕು. ತನ್ನ ಕಲೆಯನ್ನೊಪ್ಪಿ ತನ್ನವಳಾಗಲೊಪ್ಪಬೇಕು. ಅದು ಸಾಧ್ಯವೋ ಇಲ್ಲವೋ, ಈ ಯೋಚನೆಗಳೊಂದೂ ಅವನ ಮನಸ್ಸಿನಲ್ಲಿ ಸುಳಿಯಲಿಲ್ಲ. ತಾನಿದುವರೆಗೂ ಯಾವ ಆದರ್ಶವನ್ನು ಚಿತ್ರಿಸಲು ಯತ್ನಿಸಿದ್ದನೋ ಆ ಚಿತ್ರಕ್ಕೆ ಈ ಹುಡುಗಿ ಸ್ಫೂರ್ತಿಯಾಗಿರುವಳೆಂದು ಮಾತ್ರ ಅವನಿಗೆ ಗೊತ್ತು. ಅವಳು ಹುಡುಗಿಯೆನ್ನುವಷ್ಟೂ ವ್ಯೆಯರಿವಿರಲಿಲ್ಲ. ಅದೊಂದು ಮುಖ ಮಾತ್ರ. ಆ ಮುಖದ ಸೌಂದರ್ಯ ಮಾತ್ರ ಅವನಿಗೆ ಗೊತ್ತು. ಶಾಂತಿ ಬಂದಿತ್ತು. ಸಮಾಧಾನ ನೀಡಿತ್ತು.

ಈ ರಸಸೃಷ್ಟಿಯ ಕಲ್ಪಿತ ಪ್ರಪಂಚದ ಮೈಮರೆಪಿನಿಂದ ಮೋಹನನ ಮನಸ್ಸು ಎಚ್ಚರಗೊಂಡು ಮತ್ತೆ ಭೂಮಿಗಿಳಿದಾಗ, ಮತ್ತೊಮ್ಮೆ ಅವರು ಕುಳಿತ ಕಡೆ ನೋಡಿದ. ಅಲ್ಲಿ ಅವರಾರೂ ಇರಲಿಲ್ಲ. ತಕ್ಷಣವೇ ಮೊದಲಿನ ಅಸಮಾಧಾನ, ಅಶಾಂತಿ, ಕಳವಳ, ಕಾತರಗಳು ನೂರುಮಡಿಯಾಗಿ ಹಿಂತಿರುಗಿದುವು. ತನ್ನ ತಾಯಿ ಆ ಹುಡುಗಿಯನ್ನು ತನ್ನ ಕಲೆಯ, ತನ್ನ ಚಿತ್ರಗಳ ಪರೀಕ್ಷೆಗೆ ಕರೆದೊಯ್ದಿದ್ದಾರೆ. ತನ್ನ ಸತ್ವಪರೀಕ್ಷೆಯಾಗುತ್ತಿದೆಯೆಂದು ತಕ್ಷಣ ಮನವರಿಕೆಯಾಯಿತು. ಮನಸ್ಸು ಚಿತ್ರಶಾಲೆಗೆ ಓಡಿತು. ಕಾಲು ಅವನಿಗರಿವಿಲ್ಲದೆಯೇ ಒಂದರೆನಿಮಿಷದಲ್ಲಿ ಅವನನ್ನು ಚಿತ್ರಶಾಲೆಯ ಪಕ್ಕದ ಕೋಣೆಗೆ ಒಯ್ದಿತು.

ಅಲ್ಲಿಂದ ಅವನಿಗೆ ಅವರು ಕಾಣುತ್ತಿರಲಿಲ್ಲ. ಅವರಿಗೆ ಅವನಲ್ಲಿರುವುದೂ ಕಾಣುತ್ತಿರಲಿಲ್ಲ. ಆದರೆ ಅವನ ಮೈಯೆಲ್ಲಾ ಒಂದು ಬಗೆಯ ಉತ್ಸುಕತೆಯಿಂದ ಪುಲಕಗೊಂಡಿತ್ತು. ಅವರ ಮಾತೆಲ್ಲಾ ಅವನಿಗೆ ಕೇಳಿಸುತ್ತಿತ್ತು. ತನ್ನ ನಾಳಿನ ಸೊಸೆಯಾಗುವ ಹುಡುಗಿಗೆ ತಾಯಿ ತನ್ನ ಮಗನ ಚಿತ್ರಗಳನ್ನು ಒಂದೊಂದನ್ನಾಗಿ ತೋರಿಸುತ್ತಿರುವರೆಂದು ಗೊತ್ತಾಯಿತು. ಒಂದೊಂದು ಚಿತ್ರದ ಹತ್ತಿರ ಬಂದು ತಾಯಿ ನಿಂತು ತೋರುವುದನ್ನು ಮನಸ್ಸಿನಲ್ಲೇ ಚಿತ್ರಿಸಿಕೊಳ್ಳುತ್ತಿದ್ದ.

"ನೋಡಮ್ಮ, ಇದು ಸಂಜೆಯ ದೃಶ್ಯ." ಎಂದು ತಾಯಿ ಹೇಳಿದುದು ಕೇಳಿತು. ತಾನು ಚಿತ್ರಿಸಿದ ಸಂಜೆಯ ಚಿತ್ರ ಅವನ ಮುಂದೆ ಬಂದು ನಿಂತಿತು. ದೂರದಲ್ಲಿ ತಿಳುನೀಲಿಯಾಗಿ ಬೆಟ್ಟದ ಹಿನ್ನೆಲೆ. ಅದರಿಂದೀಚೆಗೆ ವಿಶಾಲವಾದ ಬಯಲು. ಬಯಲಿನ ನಡುವೆ ಒಂದು ಸಣ್ಣ ಕಾಲು ಹಾದಿ. ಆ ಸಣ್ಣ ಕಾಲು ಹಾದಿಯಲ್ಲಿ ಒಬ್ಬ ಕಾವಿಧಾರಿ ಹೋಗುತ್ತಿದ್ದಾನೆ. ಆಕಾಶದ ವಿಶಾಲವಾದ ನೀಲಿಮೆಯಲ್ಲಿ ಕಾಣದಾಗಲು, ಐಕ್ಯವಾಗಲು ಹೋಗುತ್ತಿದ್ದಾನೆ. ಅವನ ಮೂರ್ತಿಯಷ್ಟೇ ನೆರಳಿನಂತೆ ಕಾಣುತ್ತದೆ. ಆ ಪಕ್ಕಕ್ಕೆ ಕರಿಯೆಳ್ಳಿನಂತಹ ಮೋಡದ ಮರೆಯಿಂದ ಕೊಂಚ ಬಣ್ಣ ಕಾಣಿಸಿಕೊಳ್ಳುತ್ತಿದೆ. ಹುಂ! ಆ ಚಿತ್ರ ಅವನು ಬಹಳ ಮೊದಲು ಬರೆದುದು. ಅದು ಚಿತ್ರಕಲೆಯನ್ನಾರಂಭಿಸಿದ ಮೊದಲಿನಲ್ಲಿ

ಬರೆದುದು. ಅವನಿಗೇ ಅದು ಅಷ್ಟೊಂದು ಚೆನ್ನಾಗಿ ಒಪ್ಪಿರಲಿಲ್ಲ. ಆ ಹುಡುಗಿ ಏನೆಂದುಕೊಳ್ಳುವಳೋ ಎಂದುಕೊಂಡ.

"ಬಹಳ ಸೊಗಸಾಗಿದೆ" ಎಂದು ಒಂದು ಮಧುರ ದನಿ ಕೊಟ್ಟ ಉತ್ತರ ಕೇಳಿಸಿತು. ಮೋಹನನ ಮೈಯೆಲ್ಲಾ ಶ್ರುತಿಯಿಟ್ಟ ವೀಣೆಯ ತಂತಿಯಂತಾಯಿತು!

"ಇದೋ, ಈ ಕಡೆ ನೋಡವ್ಮ—ಇದು ಒಬ್ಬ ಮುದುಕ ಕೂಲಿಗಾರನ ಚಿತ್ರ" ಎಂದರು ತಾಯಿ. ಮೋಹನನಿಗೆ ತಾನು ಆ ಚಿತ್ರಕ್ಕೆ ಎರಕ ಹುಯ್ದ ಭಾವನಾ ಪರಂಪರೆಯೆಲ್ಲ ನೆನಪಾಯಿತು. ಆ ಮುದುಕ ಕೂಲಿಗಾರನಲ್ಲಿ ತೋರಿಸಬೇಕಾದ ದೇಹಶಕ್ತಿ, ಮನಸ್ಸಿನ ಶಕ್ತಿಯ ಜತೆಗೆ ಬಾಳನ್ನು ಎದುರಿಸುವ ಕೆಚ್ಚು, ಅನುಭವದ ಸಹನೆಗಳನ್ನೆಲ್ಲ ಕುಸುರು ಕುಸುರಾಗಿ ಬಿಡಿಸಲು ತಾನು ಪಟ್ಟ ಕಷ್ಟವೆಲ್ಲ ನೆನಪಾಯಿತು. ಅವನ ಮನಸ್ಸಿನ ನೋವನ್ನು ಅವನು ಊರೆಗೋಲಿನ ಆಸರೆಯಲ್ಲಿ ನಿಂತ ನಿಲುವಿನಲ್ಲಿ ಚಿತ್ರಿಸಿದ್ದ. ಇಷ್ಟಾದರೂ ಅವನಿಗೇ ಅದು ಸಮಾಧಾನಕರವಾಗಿರಲಿಲ್ಲ. ಆ ಚಿತ್ರದಲ್ಲಿ ಕಣ್ಣಿನಲ್ಲಿ ತೋರಿಸಬೇಕಾಗಿದ್ದ ಹಸಿವು ಕಂಡಿರಲಿಲ್ಲ. ಅದು ತನ್ನ ಅನುಭವಕ್ಕೆ ಬಂದಿರಲಿಲ್ಲ. ತಾನು ಚಿತ್ರಿಸಲಾಗಿರಲಿಲ್ಲ.

"ಇದು—"

ಹೀಗೆಯೇ ತಾಯಿ ಒಂದಾದ ಮೇಲೊಂದು ಚಿತ್ರ ತೋರಿಸಿಕೊಂಡು ನಡೆದಂತೆ ಮೋಹನನ ಮನಸ್ಸಿನಲ್ಲೂ ಆ ಚಿತ್ರಗಳು ಸುಳಿದುವು. ಅಷ್ಟರಲ್ಲಿ ಹೊರಗೆ ಯಾರೋ ಕೂಗಿದ ದನಿಯಾಯಿತು.

"ಯಾರೋ ಕೂಗುತ್ತಿದಾರೆ, ನೋಡಿಬರುತ್ತೇನೆ. ಒಂದೇ ಕ್ಷಣ" ಎನ್ನುತ್ತಾ ತಾಯಿ ಹೊರಟುಹೋದರು. ಮೋಹನನ ಹೃದಯದ ಆವೇಗ ಹೆಚ್ಚಾಯಿತು. ಎಲ್ಲಿ ತಾನಿರುವುದು ಅವರಿಗೆ ಗೊತ್ತಾಗಿ ಹೋಗುವುದೋ ಎಂದು ಒದ್ದಾಡಿದ. ಆದರೆ ಆ ಜಾಗ ಬಿಟ್ಟು ಕದಲಲೂ ಇಷ್ಟವಿಲ್ಲ. ಅಲ್ಲಿ ಆ ಹುಡುಗಿ, ಅವಳ ಜತೆಗೆ ಬಂದಿದ್ದ ಅವಳ ಅಕ್ಕ ಇಬ್ಬರೂ ಮಾತನಾಡುವುದು ಅವನಿಗೆ ಕೇಳಿಸುತ್ತಿತ್ತು.

"ಅಕ್ಕ ಈ ಚಿತ್ರ ನೋಡು. ಎಷ್ಟು ಚೆನ್ನಾಗಿದೆ. ಆ ಭಂಗಾರದ

ಚಿಟ್ಟೆ ಬಂದು ಹೂವನ್ನು ಮುತ್ತಿಡಲು ಹೋಗುತ್ತಿದೆ. ಹೂವು ತೊಟ್ಟು ಕಳಚಿ ಬೀಳುತ್ತಿದೆ. ಆ ಚಿಟ್ಟೆಯ ರೆಕ್ಕೆಗಳು ನೋಡು, ಎಷ್ಟು ಚೆನ್ನಾಗಿ ಬಣ್ಣವಾಗಿ, ವೈಖರಿಯಿಂದಿವೆ." ಎಂದಳು ಹುಡುಗಿ.

"ಆ ಚಿತ್ರಕ್ಕೇನೋ ಹೆಸರು ಬರೆದಂತಿದೆ ನೋಡು"

"ಪ್ರೇಮದ ಬಗೆ ಅಂತ. ಚಿಟ್ಟೆ ಕೊನೆಗೆ ಬಂದಿದೆ, ಹೂವು ತೊಟ್ಟು ಕಳಚಿ ಬೀಳುವ ವೇಳೆಗೆ! ಎಷ್ಟು ಚೆನ್ನಾಗಿದೆ. ಅಕ್ಕ"

"ನಿಜವಾಗಿಯೂ ಇಂತಹ ಕಲಾವಿದನ ಕೈಹಿಡಿಯಲು ಪುಣ್ಯ ಮಾಡಿರಬೇಕು, ಕಣೆ"

"ಇಷ್ಟೊಂದು ಸುಂದರವಾಗಿ ಚಿತ್ರ ಬರೆಯುವರಲ್ಲ, ಅವರು ಇನ್ನೆಷ್ಟು—"

ಮೋಹನನ ಎದೆ ಹೊಡೆತ ಒಮ್ಮೆಗೇ ನಿಂತು ಹೋದಂತಾಯಿತು. ಆ ಹುಡುಗಿಯ ಮಾತನ್ನು ಪೂರ್ತಿ ಕೇಳಲೂ ಇಲ್ಲ. ಕೊನೆಗೆ ಅಲ್ಲಿಗೇ ಬಂತೆ? ತಾನೆಣಿಸಿದಂತೆಯೇ! ಕಲೆಯ ಸೌಂದರ್ಯವಲ್ಲ. ಕಲಾವಿದನ ಸೌಂದರ್ಯದ ಬಯಕೆ!

"ಆಗಲೇ ಅವರ ಯೋಚನೆ ಬಂದು ಬಿಟ್ಟಿತೇನೇ?" ಎಂದು ಅಕ್ಕ ಹಾಸ್ಯ ಮಾಡಿದುದೂ ಕೇಳಿತು.

ಅಕ್ಕ-ತಂಗಿಯರ ಕಿಲಕಿಲ ನಗು ಕೇಳಿತು ಮೋಹನನಿಗೆ. ಆದರೆ ಈಗ ಅವನ ಕಿವಿಗೆ ಅದರ ಮಾಧುರ್ಯ ಮಾಧುರ್ಯವಾಗಿರಲಿಲ್ಲ. ಅದು ತನ್ನನ್ನು ಹಾಸ್ಯಮಾಡಲು ಅವರು ಹೂಡಿದ ಸಂಚು ಎಂದು ಅವನ ಮನಸ್ಸು ಚುಚ್ಚುತ್ತಿತ್ತು. ಅವರು ಬರದಿದ್ದರೇ ಎಷ್ಟೋ ಚೆನ್ನಾಗಿತ್ತು. ಅವರಿಗೆ ನನ್ನ ಚಿತ್ರಗಳನ್ನು ತೋರಿಸದಿದ್ದರೇ ಚೆನ್ನಾಗಿತ್ತು ಎಂದುಕೊಂಡ. ಆದರೆ ಆಗಲೇ ಕೆಲಸ ಮಿಂಚಿಹೋಗಿತ್ತು. ಅಲ್ಲಿಂದಲೇ ತನ್ನ ಕಲಾಧಿದೇವತೆ ಶಾರದೆಯನ್ನು ಮನಸ್ಸಿನ ಶಕ್ತಿಗಾಗಿ ಬೇಡಿಕೊಂಡ. ಕಣ್ಣಿನಲ್ಲಿ ಮತ್ತೊಮ್ಮೆ ದ್ವೇಷದ ಕೆಂಪು ಕಾಣಿಸಿಕೊಂಡಿತು.

"ಅಬ್ಬಾ ಈ ಚಿತ್ರ ನೋಡಿದರೇ ಹೆದರಿಕೆಯಾಗುತ್ತೆ" ಎಂದು ಹುಡುಗಿ ಹೆದರಿದ ದನಿಯಲ್ಲಿಂದುದು ಕೇಳಿಸಿತು.

"ಎಷ್ಟು ಭೀಕರವಾಗಿದೆ ಆ ಮುಖ—ರಾಹುವನ್ನು ಕತ್ತಲಿನ ಭೂತ ಮಾಡಿರುವರಲ್ಲವೇ ?" ಎಂದಳು ಅಕ್ಕ.

ಅದು ರಾಹು ಚಂದ್ರನನ್ನು ನುಂಗುವ ಚಿತ್ರ. ರಾಹು ವಿಕಾರ ಭೂತ. ಹುಂ! ಹೀಗಿದ್ದರೇನು ಎಂದುಕೊಂಡ ಮೋಹನ.

"ಈ ಚಿತ್ರ ನೋಡಿದೆಯೇನಮ್ಮ" ಎಂದು ತಾಯಿ ಅಂದುದು ಕೇಳಿಸಿತು.

ಯಾಕೆ ನೋಡಬೇಕು ಆ ಹುಡುಗಿ? ಯಾವ ಚಿತ್ರವನ್ನಾದರೂ ಯಾಕೆ ನೋಡಬೇಕು. ಮೊದಲು ಇಲ್ಲಿಂದ ಅವರನ್ನು ಓಡಿಸಬೇಕು ಎಂದು ಉದ್ರೇಕದಿಂದ ಬಾಗಿಲಿಗೆ ಕೈಯಿಕ್ಕಿದ. ಮರುನಿಮಿಷವೇ ಅನ್ನಿಸಿತು. ನಾನು ಹೋಗಬಾರದು. ನಾನು ಹೋದರೂ ಏನೂ ಉಪಯೋಗವಿಲ್ಲ. ಎರಡು ಕ್ಷಣ ನೋಡುವರು. ಹೊರಟುಹೋಗುವರು ಎಂದು ಸಮಾಧಾನ ತಂದುಕೊಂಡ. ಆ ಕ್ಷಣದಲ್ಲಿ ಮನಸ್ಸಿನ ಆಸೆ ಮತ್ತೆ ಎಲೆಯೊಡೆಯುತ್ತಿತ್ತು. ಹೇಗೋ ಆದರೂ ಆಗಬಹುದೆಂಬ ಮಿಣುಕು ಆಸೆ ಹೃದಯದಲ್ಲಿ ಇನ್ನೂ ಆಗಾಗ ಬೆಳಕುಗೊಳ್ಳುತ್ತಿತ್ತು.

"ಈ ಚಿತ್ರದ ಹೆಸರು ಕಲೆಯ ಕಣ್ಣು ಎಂದು" ಎಂದರು ತಾಯಿ.

ಮೋಹನನಿಗೆ ತಕ್ಷಣ ನೆನಪಾಯಿತು. ಅದೇ ಅವನ ಚಿತ್ರ ಅವನ ವಿಕಾರಾಕೃತಿಯ ಚಿತ್ರ. ಮುಂದೆ ತೆಳುವಾಗಿ ಸಿಡಿಮಿಡಿಗೊಂಡ ಮುಖದ ನೀಲಿಮೆಯ ಚಿತ್ರ. ಅಲ್ಲಿಯೇ ಕಿಡಿ ಕಾರುವ ಕಣ್ಣು. ಅದರಲ್ಲಿ ಸೇರಿಕೊಂಡಂತೆ ಒಂದು ಬಂಗಾರದ ಬಣ್ಣದ ಹೃದಯ. ಆ ಹೃದಯದ ಮೂಲೆಯಲ್ಲಿ ಒಂದು ಕಡೆ ಹೂಗೊಂಚಲು. ಅಡಿಯಲ್ಲಿ ಹೆಡೆಯೆತ್ತಿದ ಹಾವು. ಮತ್ತೊಂದು ಮೂಲೆಯಲ್ಲಿ ಮುಳ್ಳಿನ ಮಾಲೆಯ ನಡುವೆ ಒಂದು ಹೊಳೆಯುವ ಮಣಿ. ಅದು ಅವನ ಆದರ್ಶದ ಚಿತ್ರ. ತನ್ನ ಎಲ್ಲ ನೋವನ್ನೂ ಎರಕ ಹೊಯ್ದ ಚಿತ್ರ.

"ನೋಡು ಮಗು. ಕಲೆಯ ಕಣ್ಣು ಎಲ್ಲವನ್ನೂ ಕಾಣುತ್ತದೆ. ಹಾವು, ಹೂವು, ಮುಳ್ಳು, ಮಣಿ ಎಲ್ಲವನ್ನು ಒಂದೇ ಸಮನಾಗಿ ನೋಡುತ್ತದೆ ಕಲೆಯ ಕಣ್ಣು. ಮೇಲಿನ ಆಕೃತಿ ಚೆನ್ನಾಗಿಲ್ಲದಿರಬಹುದು.

ಆದರೆ ಹೃದಯ ಭಂಗಾರದ್ದಾಗಿರಬಹುದು" ಎಂದರು ತಾಯಿ ಮೆಲ್ಲಗೆ. ಅವರ ದನಿಯಲ್ಲಿ ಕೊಂಚ ಅಳುಕಿದ್ದುದು ಮೋಹನನಿಗೆ ಗೊತ್ತಾಯಿತು.

ಸರಿ, ತಾಯಿಯೇನೋ ತಾನು ಆ ಚಿತ್ರದ ವಿಚಾರ ಹೇಳಿದುದನ್ನು ತಪ್ಪದೆ ಸರಿಯಾಗಿ ಹೇಳುತ್ತಿದಾರೆ. ಆ ಹುಡುಗಿ ಏನುತ್ತರಕೊಡುವಳೋ ಎಂದು ಕಳವಳದಿಂದ ಕಾತರಿಸಿದ ಮೋಹನ.

"ಹೌದು. ಹೂವಿನಂತಹ ಮುಖವಿದ್ದರೂ ಹಾವಿನಂತಹ ಹೃದಯ ವಿರಬಹುದು. ಹೃದಯ ಚೆನ್ನಾಗಿರಬೇಕು. ಗುಣ ಒಳ್ಳೆಯದಾಗಿರಬೇಕು" ಎಂದಳು ಹುಡುಗಿಯ ಅಕ್ಕ.

"ತಾಯಿಯ ಕಣ್ಣಿಗೆ ಮಕ್ಕಳು ಕಾಣುವಂತೆ ಪ್ರಪಂಚವೆಲ್ಲವನ್ನೂ ನೋಡಬೇಕು. ಮಮತೆಯಿಂದ, ವಿಶ್ವಾಸದಿಂದ ನೋಡಿದರೆ ಒಳಗೆ ಮರೆಯಾಗಿರುವ ಗುಣ ಕಾಣುವುದೇ ಹೊರತು ಹೊರಗಿನ ಹುಳುಕಲ್ಲ" ಎಂದರು ತಾಯಿ ಕೊಂಚ ಗಂಭೀರವಾದ ದನಿಯಲ್ಲಿ.

"ನಿಜ. ಒಂದು ಬಾರಿ ನಿಜವಾದ ವಿಶ್ವಾಸವನ್ನಿಟ್ಟರೆ, ತಪ್ಪುಗಳು, ವಿಕಾರಗಳು, ಎಲ್ಲಾ ಮರೆತು ಹೋಗುತ್ತವೆ. ಬರಿಯ ಗುಣಗಳು ಮಾತ್ರವೇ ಕಾಣುತ್ತವೆ. ಅದೇ ನಿಜವಾದ ವಿಶ್ವಾಸ. ಮನುಷ್ಯನಿಗೆ ಬೇಕಾದುದೂ ಅದೇ ಅಂತ ನಮ್ಮ ಪುಸ್ತಕದಲ್ಲಿ ಓದಿದೇನೆ" ಎಂದಳು ಹುಡುಗಿ.

ಒಳಗೆ ನಿಂತು ಕೇಳುತ್ತಿದ್ದ ಮೋಹನನ ಹೃದಯದ ಆಸೆಯ ಬಳ್ಳಿ ಹೂವಿಟ್ಟಿತು. ಇನ್ನು ಪರವಾಗಿಲ್ಲ. ಆ ಹುಡುಗಿಯೂ ಕಲಿತವಳು. ಆದರ್ಶವನ್ನೇ ನಂಬುವವಳು. ಹೊರರೂಪಕ್ಕೆ ಮರುಳಾಗುವವಳಲ್ಲ. ತಾನು ಹೇಗಿದ್ದರೂ ಸರಿ. ತನ್ನನ್ನು ಒಲಿಯುವಳು. ತನ್ನ ಕಲೆಗಾಗಿ ತನ್ನನ್ನೊಪ್ಪುವಳೆಂದುಕೊಂಡು ಸಮಾಧಾನ ಮಾಡಿಕೊಂಡ. ಆ ಹುಡುಗಿಯ ಮಾತುಗಳು ಬರಿಯ ಪುಸ್ತಕದಲ್ಲಿ ಕಲಿತ ಆದರ್ಶದ ಮಾತುಗಳಿರಬಹುದೆಂಬ ಸಂದೇಹ ಇಣುಕಲು ಅದನ್ನು ಅಲ್ಲಿಗೇ ಮೊಟಕುಮಾಡಿದ.

"ಇಂತಹ ಸುಂದರ ಚಿತ್ರ ರಚಿಸಿದವರ ಕೈಹಿಡಿಯಲು ನನ್ನ ತಂಗಿ ಪುಣ್ಯಮಾಡಿದ್ದಳು" ಎಂದಳು ಅಕ್ಕ. ಆ ಚಿತ್ರಗಳಂತೆಯೇ ಕಲಾವಿದನೂ

ಸುಂದರನೆನ್ನುವ ಅವರ ಭ್ರಮೆ ಮೋಹನನಿಗೆ ತಿಳಿಯಲಿಲ್ಲ. ಅವನಿಗೆ ಕೇಳಿಸಿದಷ್ಟು ಮಾತಿನಿಂದ ಹೃದಯದ ಹೂವು ಅರಳಿತು.

"ಹಾಗಾದರೆ ನನ್ನ ಸೊಸೆಯಾಗಲು ಒಪ್ಪಿಗೆಯೇನಮ್ಮ?" ಎಂದರು ತಾಯಿ ಬಹಳ ಮೃದುವಾಗಿ.

ಮೋಹನನ ಹೃದಯ ಕುಣಿಯುತ್ತಿತ್ತು. ಕಲೆಯ ದೇವತೆ, ಸೌಂದರ್ಯದ ರೂಪದಲ್ಲಿ ತನಗೆ ಸಾಕ್ಷಾತ್ಕಾರಳಾಗಿಬಿಟ್ಟಳೆಂದು ಹಿಗ್ಗಿದ. ತನಗಿನ್ನೇನು ಕಲೆಯ ಸ್ವರ್ಗ ಸಿಕ್ಕಿತೆಂದು ಆನಂದಪಟ್ಟ.

"ನಿನ್ನ ಅತ್ತೆಗೆ ನಮಸ್ಕಾರ ಮಾಡು. ಆಶೀರ್ವಾದ ಮಾಡಿ" ಎಂದಳು ಹುಡುಗಿಯ ಅಕ್ಕ.

"ನೂರುಕಾಲ ದೀರ್ಘ ಸುಮಂಗಲಿಯಾಗಿ ಮೋಹನನೊಂದಿಗೆ ಬಾಳು, ಮಗು" ಎಂದು ತಾಯಿ ಮಮತೆಯಿಂದ ಹರಸಿದರು.

ಮೋಹನನಿಗೆ ಸಂತೋಷ ತಡೆಯಲಾಗಲಿಲ್ಲ. ತನ್ನನ್ನು ತಾನು ಸಂಪೂರ್ಣವಾಗಿ ಮರೆತುಬಿಟ್ಟ. ಆಗಲೇ ಆ ಹುಡುಗಿ ತನ್ನ ಹೆಂಡತಿಯಾಗಿ ಹೋದಳೆನ್ನುವಷ್ಟು ಹಿಗ್ಗು. ಈ ಅಪಾರ ಸುಖದಲ್ಲಿ, ಆನಂದದಲ್ಲಿ ಎಚ್ಚರವೇ ಇಲ್ಲದಂತಾಗಿತ್ತು. ಅವನಿಗರಿವಿಲ್ಲದೆಯೇ ಬಾಗಿಲು ತೆರೆದು ಚಿತ್ರಶಾಲೆಗೆ ಬಂದುಬಿಟ್ಟ. ಅವನು ಬಂದು ನಿಲ್ಲುವ ವೇಳೆಗೂ ಹುಡುಗಿ ನಮಸ್ಕಾರ ಮಾಡಿ ಏಳುವ ವೇಳೆಗೂ ಸರಿಹೋಯಿತು. ಹುಡುಗಿಯ ಕಣ್ಣು ಬಿದ್ದುದು ಮೊದಲು ಅವನ ಮೇಲೆಯೇ. ಹುಡುಗಿ ಗಾಬರಿಯಿಂದ ಚೀರಿ ಅಕ್ಕನ ಕಡೆಗೆ ಹಿಮ್ಮೆಟ್ಟಿದಳು. ಮೋಹನನ ಬಣ್ಣದ ಸ್ವಪ್ನ ಚುಕ್ಕು ಚೂರಾಯಿತು. ಹೃದಯ ನುಚ್ಚುನೂರಾಯಿತು. ಕಣ್ಣು ಕಗ್ಗತ್ತಲಾಯಿತು. ಹಾಗೆಯೇ ಕೆಳಕ್ಕೆ ಕುಸಿದ. ಒಂದರೆನಿಮಿಷದಲ್ಲೇ ವೈಯರಿತು ನೋಡಿದ. ಚಿತ್ರಶಾಲೆ ಬರಿದಾಗಿತ್ತು. ಎದುರಿಗೇ ಹಾಲಾಹಲವನ್ನು ಬಾಯಿಗೆ ತೆಗೆದುಕೊಳ್ಳಲು ಸಿದ್ಧನಾದ ಪರಶಿವನ ಚಿತ್ರ. ತಲೆ ತಗ್ಗಿಸಿ ಮೌನವಾಗಿಯೇ ಕಣ್ಣೀರು ಸುರಿಸಿದ ಮೋಹನ. ಆ ಕಣ್ಣೀರಿನ ಅರ್ಥ ಅವನಿಗೇ ತಿಳಿಯದು. ತಿಳಿದಿದ್ದರೆ ಆ ಪರಶಿವನೊಬ್ಬನಿಗೇ!

# ಜುಡಾಸ್

"ಪೀಟರ್"

"ಪ್ರಭು"

"ಇನ್ನು ಮೂರುದಿನ ಮಾತ್ರ, ಪೀಟರ್. ಅನಂತರ—"

ಮಾತು ಅರ್ಧಕ್ಕೇ ನಿಂತಿತು. ಯೇಸುಕ್ರಿಸ್ತ ತನ್ನ ಶಿಷ್ಯರೊಂದಿಗೆ ಕಾಲುನಡಿಗೆಯಲ್ಲಿ ಜೆರೂಸಲೆಂ ನಗರಕ್ಕೆ ನಡೆದು ಬರುತ್ತಿದ್ದ. ಹನ್ನೆರಡುಜನ ಶಿಷ್ಯರೂ ಹಿಂದೆ ಹಿಂದೆ ಒರುತ್ತಿದ್ದರು. ಆರಿಸಿಬಂದ ಜನ. ಯೇಸು ತನ್ನ ಪ್ರೇಮಪ್ರಸಾರಕ್ಕಾಗಿ ಹುಡುಕಿ ತಂದ ಹನ್ನೆರಡು ವಿಭೂತಿ ಪುರುಷರು. ಒಬ್ಬನಿಗೊಬ್ಬ ಯಾವ ವಿಷಯದಲ್ಲೂ ಕಡಿಮೆಯಿಲ್ಲ. ಯೇಸುವಿನಲ್ಲಿ ಸಂಪೂರ್ಣವಾಗಿ ತಮ್ಮನ್ನು ತಾವೇ ಅರ್ಪಣಮಾಡಿಕೊಂಡಿದ್ದವರು. ಸ್ವಾರ್ಥತ್ಯಾಗದಲ್ಲಿ ನಿಸ್ಸೀಮರು. ಯೇಸುವಿನೊಂದಿಗೆ ನೂರಾರು ಬಗೆಯ ಸಂಕಟಗಳ ಮೂಸೆಯಲ್ಲಿ ಹಾದು ಬಂದವರು. ತಮಗಾಗಿ ಯಾವುದನ್ನೂ ಬಯಸದವರು. ಯೇಸುಕ್ರಿಸ್ತನ ಮುಖದಲ್ಲಿ ಹನ್ನೆರಡು ಮಹಾನದಿಗಳ ನೀರನ್ನು ತುಂಬಿಸಿಕೊಂಡ ಮಹಾಸಾಗರದ ಗಾಂಭೀರ್ಯವಿತ್ತು. ನೂರು ನಕ್ಷತ್ರಗಳ ಬೆಳಕುಹೊತ್ತ ರಾತ್ರಿಯ ಆಕಾಶದ ಸೊಬಗಿತ್ತು. ಹತ್ತುದಿಕ್ಕಿಗೂ ಬೆಳಕಿನ ಕಿರಣ ಚಾಚಿದ ಹಗಲಿನ ಓಜಸ್ಸಿತ್ತು. ಸರ್ವಸ್ವವನ್ನೂ ತ್ಯಾಗಮಾಡಿ, ಸರ್ವಸ್ವವನ್ನೂ ಪಡೆದ ಮಹಾಯೋಗಿಯ ತೇಜವಿತ್ತು. ಪ್ರಪಂಚವನ್ನೇ ತನ್ನ ಪ್ರೇಮದಿಂದ ಬಾಚಿ ತಬ್ಬಿಕೊಂಡ ಅವನ ಧ್ವನಿಯಲ್ಲಿ ಮಾಧುರ್ಯ ಮಿಳಿತವಾಗಿ ಹೋಗಿತ್ತು. ಅವನ ಮಾತು ಕೇಳಲು ಯಾವಾಗಲೂ ಸಿದ್ಧವಾಗಿರುತ್ತಿದ್ದ ಶಿಷ್ಯರು, ಯೇಸುವಿನ ಮಾತು ಅರ್ಧಕ್ಕೇ ನಿಂತುಹೋಗಲು ಅವನ ಕಡೆಗೇ ಎವೆಯಿಕ್ಕದೆ ನೋಡಿದರು. ತಾಯಿಹಸು ಕರುವನ್ನು ನೆಕ್ಕುತ್ತಿದ್ದುದನ್ನು ನಿಲ್ಲಿಸಿದೊಡನೆಯೇ ಕರು ತಾಯಿಯ ಕಡೆ ನೋಡಿ ಬೇಡಿ ಎದುರು ನೋಡುವಂತೆ, ಯೇಸುವಿನ ಮುಖವನ್ನೇ ಎಲ್ಲರೂ ನೋಡಿದರು. ಮುಂದಿನ ಮಾತಿಗಾಗಿ ಕಾದರು.

ಯೇಸು ಏಕೋ ಆ ವಾಕ್ಯ ಪೂರೈಸಲೇ ಇಲ್ಲ. ಮೌನವಾಗಿ ಮುಂದೆ ಮುಂದೆ ಹೆಜ್ಜೆಯಿಡುತ್ತಾ ನಡೆದ. ಹಿಂದೆಂದೂ ಇಲ್ಲದುದು ಇಂದು ತಲೆ ತಗ್ಗಿತ್ತು. ಏನೋ ಚಿಂತೆ—ಯಾವುದೋ ಮೋಡದನೆರಳು ಮುಸುಕಿದಂತೆ—ಮುಖದಲ್ಲಿ ಕೊಂಚ ಕಳವಳ. ಶಿಷ್ಯರಿಗೆ ಈ ಮಾತು ಹೇಳಲೋ ಬೇಡವೋ ಎಂದು ಕೊಂಚ ಯೋಚನೆ. ಹೇಳಿದರೂ ಅವರಿಗೆ ಅದು ಸರಿಯಾಗಿ ಅರಿವಾಗುವುದೇ ಎನುವ ಸಂದೇಹ. ಹೇಳಿದಮೇಲೆ ಅದರಿಂದ ಅವರಲ್ಲೇನಾದರೂ ಹೇಡಿತನ ಬಂದರೆ ಎನುವ ಶಂಕೆ. ಹೇಳಿದರೂ ಏನು ಪ್ರಯೋಜನವೆನುವ ನಿರಾಸಕ್ತಿ. ಹೇಳಿಬಿಟ್ಟರೆ ವಾಸಿ ಹೇಗಾದರೂ ಆಗಲಿ ಎನುವ ಒತ್ತಡ. ಎಲ್ಲಕ್ಕೂ ಜತೆಯಾಗಿ ಒಂದು ಅನುಮಾನ. ತಾನೇನೋ ಇದುವರೆಗೂ ಅವರ ಭಕ್ತಿ ಪ್ರೇಮ ಪಡೆದುದು ನಿಜ. ಅವರಿಗೆ ತನ್ನ ಶಕ್ತಿಯಲ್ಲಿ ಸಾಕಷ್ಟು ನಂಬಿಕೆಯಿತ್ತು. ಆದರೆ ಆ ನಂಬಿಕೆ ಎಲ್ಲಿಯವರೆಗೂ ಎಳೆಯುವುದೋ ಯಾರಿಗೆ ಗೊತ್ತು? ಅದನ್ನು ಶಕ್ತಿ ಮೀರಿ ಹಿಂಜಿದರೆ, ತಂತಿ ಯಾವಾಗ ಮುರಿದುಹೋದೀತೋ? ನಂಬಿಕೆ ಹುಟ್ಟಿಸಲೆಂದು ತಾನು ಮಾಡಿದುದೆಲ್ಲ ಒಂದೊಂದು ಬಾರಿ ನಿಷ್ಫಲವಾಗಿರ ಲಿಲ್ಲವೇ? ತಾನು ರೋಗಿಗಳನ್ನೆಲ್ಲ ಬರಿಯ ಕೈಯಿಂದ ಮುಟ್ಟಿ ನಂಬಿಕೆಯ ಬಲದಿಂದ ಗುಣಪಡಿಸಲಿಲ್ಲವೇ? ಇಷ್ಟಾದರೂ ತೊನ್ನು ರೋಗಿಯ ಹತ್ತಿರ ಹೋಗಲು ಜಾನ್ ಹಿಂಜರಿಯಲಿಲ್ಲವೇ? ತಾನು ಪೀಟರನನ್ನು ಹತ್ತಿರ ಬರಮಾಡಿಕೊಂಡಾಗ ನೀರಿನಮೇಲೆ ನಡೆದುಬರಲಿಲ್ಲವೇ? ಆದರೂ ಪೀಟರ ನಿಗೆ ಅನುಮಾನ. ನದಿಯ ದಂಡೆಯಮೇಲೆ ಶಿಬಿರ ಹೂಡಲು ಹೆದರಿಕೆ ಯಾಗಿ, ಅಲ್ಲಿ ಬೇಡವೆನ್ನಲಿಲ್ಲವೇ? ನಂಬಿಕೆಯಿದ್ದರೂ ಅದರ ಹಿಂದೆ ಕೊಂಚ ಸಂದೇಹ, ಶಂಕೆ, ಅನುಮಾನವಿದ್ದಂತಿತ್ತು. ತಾನು ದೇವರ ಮಗನೆಂದು ಪೀಟರನಿಗೆ, ಜೇಮ್ಸನಿಗೆ ತೋರಿಕೊಡಲು ಆಗೊಂದು ದಿನ ಬೆಟ್ಟದಮೇಲೆ ಹತ್ತಿನಿಂತು ಮಿಂಚಾಗಬೇಕಾಗಿತ್ತು. ತನ್ನ ಜತೆಗೆ ತನ್ನ ತಂದೆ—ಸ್ವರ್ಗದಲ್ಲಿರುವ ದೇವದೇವನನ್ನೂ—ಕರೆತರಬೇಕಾಯಿತು. ಇಷ್ಟೆಲ್ಲಾ ಆದರೂ ಅವರ ಹೃದಯಗಳಲ್ಲಿ ಒಡಕಿಲ್ಲದ ಸಂಪೂರ್ಣ ನಂಬಿಕೆ ಬಂದಿರಲಿಲ್ಲ. ಜುಡಾಸ್ ಒಬ್ಬನೇ—ತನ್ನ ಹನ್ನೆರಡು ಶಿಷ್ಯರಲ್ಲಿ ಒಮ್ಮೆಯಾದರೂ ಶಂಕೆ

ಪಡೆದವನು. ಅವನು ಎಲ್ಲರಿಗಿಂತಲೂ ಚಿಕ್ಕವನು. ಎಲ್ಲರಿಗಿಂತಲೂ
ಕೊನೆಯಲ್ಲಿ ತನ್ನ ಬಳಿ ಬಂದವನು. ಆದರೆ ಅವನ ನಂಬಿಕೆ ಅಚಲವಾದು
ತಿತ್ತು. ತಾನು ಹೇಳಿದ ಮಾತೊಂದಕ್ಕೂ ಅನುಮಾನವನ್ನಂಟಿಸುತ್ತಿರಲಿಲ್ಲ.
ಆಗ ತನ್ನ ಮಾತನ್ನು, ತನ್ನ ಬೋಧನೆಯನ್ನು ಕೇಳಲು ನಾಲ್ಕು ಸಾವಿರ
ಮಂದಿ ಕೂಡಿದಾಗ, ಅವರೆಲ್ಲರಿಗೂ ಕೊಡಲು ಆಹಾರವಿಲ್ಲ. ಇರುವುದು
ಮೂರೇ ರೊಟ್ಟಿಯೆಂದು ಉಳಿದೆಲ್ಲ ಶಿಷ್ಯರೂ ಕಳವಳಪಟ್ಟು ಒದ್ದಾಡಿದ್ದರು.
ಎಲ್ಲರನ್ನೂ ಹಾಗೆಯೇ ಕಳುಹಿಸಿಬಿಡುವುದೆಂದು ತೀರ್ಮಾನಿಸಿಕೊಂಡೂ
ಇದ್ದರು. ತನಗೆ ತಿಳಿಯದಂತೆ, ತನಗೆ ತಿಳಿಸದಂತೆ ಅವರನ್ನು ಸಾಗಹಾಕಲು
ಯತ್ನಿಸಿದ್ದರು. ಆಗ ಕೊಂಚವಾದರೂ ಸಂದೇಹಪಡದೆ, ಕೊಂಚವಾದರೂ
ಕಳವಳಪಡದೆ ಶಾಂತನಾಗಿದ್ದವನೆಂದರೆ ಜುಡಾಸ್ ಒಬ್ಬನೇ. ಬೋಧನೆ
ಪೂರ್ತಿ ಮುಗಿಯುವವರೆಗೂ ಅಲುಗಾಡದೆ ಕುಳಿತು ಕೇಳಿದ. ಅದು ಮುಗಿ
ದೊಡನೆಯೇ ಎಂದಿನಂತೆಯೇ ಸಮಾಧಾನದಿಂದ, ಶಾಂತಿಯಿಂದ, ಕೊಂಚ
ವಾದರೂ ಒದ್ದಾಟವಿಲ್ಲದೆ ತನ್ನ ಬಳಿ ಬಂದು ನಮಸ್ಕರಿಸಿದ. ಜೋಳಿಗೆ
ಯಲ್ಲಿದ್ದ ಮೂರು ರೊಟ್ಟಿಯನ್ನು ತನ್ನ ಮುಂದೆ ಇಟ್ಟು ಕೈ ಜೋಡಿಸಿದ್ದ.
ಆಗ ತಾನು, “ಜುಡಾಸ್, ಎಲ್ಲರಿಗೂ ಒಂದೊಂದು ರೊಟ್ಟಿಕೊಡು”
ಎಂದಾಗ ಸಂಕೋಚ ಸ್ವಲ್ಪವೂ ಇಲ್ಲದೆ ಅಚಲಭಕ್ತಿಯಿಂದ, ಧೃಢನಂಬಿಕೆ
ಯಿಂದ, ನಟ್ಟವಿಶ್ವಾಸದಿಂದ ಒಬ್ಬೊಬ್ಬರಿಗಾಗಿ ರೊಟ್ಟಿಕೊಟ್ಟ. ಆ ನಂಬಿ
ಕೆಯೇ ಮೂರುರೊಟ್ಟಿಯನ್ನು ಮೂವತ್ತು ಸಾವಿರ ಮಾಡಿತ್ತು. ಜುಡಾ
ಸನ ಹೃದಯದ ಈ ಅಚಲತೆ ಉಳಿದವರಿಗಿರಲಿಲ್ಲ. ಅನುಮಾನ, ಸಂದೇಹ
ಮನುಷ್ಯನಿಗೆ ಸಹಜ. ಯಾವ ಹೃದಯವೇ ಆಗಲಿ ಒಮ್ಮೆಮ್ಮೆಯಾದರೂ
ಹಿಂದೇಟು ಹಾಕದಿರುತ್ತಿರಲಿಲ್ಲ. ತನಗೇ ಎಷ್ಟೋಬಾರಿ ತನ್ನಲ್ಲಿ, ತನ್ನ
ತತ್ವದಲ್ಲಿ, ತನ್ನ ತಂದೆ—ದೇವದೇವನಲ್ಲಿ ಅನುಮಾನ ತೋರಿರಲಿಲ್ಲವೇ?
ತನ್ನನ್ನು ದೇವರು ಮಾನವ ಕಲ್ಯಾಣಕ್ಕಾಗಿ ಕಳುಹಿಸಿದ್ದರೆ ಮಾನವರೇಕೆ
ತನ್ನ ವಿರುದ್ಧ ಏಳುವರೆಂದು ಬೇಸರವಾಗಿರಲಿಲ್ಲವೇ? ಈ ಮಾನವರು
ಸಾಮಾನ್ಯ ಮಾತನ್ನು ಅರ್ಥಮಾಡಿಕೊಳ್ಳದವರು, ತತ್ವಹೇಗೆ ತಿಳಿಯುವರು
ಎಂದು ಸಂದೇಹ ಪಟ್ಟಿರಲಿಲ್ಲವೇ? ತಮ್ಮ ಒಳಿತು ಅರಿಯದ ಇವರಿಗೆ

ಒಳ್ಳೆಯದು ಸಾಧ್ಯವೇ ಎಂದು ತನ್ನ ಕಾರ್ಯದಲ್ಲಿಯೇ ನಿರಾಸೆ ಬಂದಿರಲಿಲ್ಲವೇ ?—ನಿಜ. ಅವುಗಳೆಲ್ಲ ಹಲವು ಕ್ಷಣಗಳಕಾಲ ಬಂದವು ಮಾತ್ರ. ವಿಶಾಲವಾದ ಆಕಾಶದಲ್ಲಿ ಅಲ್ಲೊಂದು ಇಲ್ಲೊಂದು ಕರಿಮೋಡದ ಚೂರುಗಳು ಎಸೆದಿದ್ದಂತೆ. ಆದರೆ ಅಷ್ಟು ನಿಜ. ತನಗೂ ಆ ದೌರ್ಬಲ್ಯವಿತ್ತು. ಈ ದೌರ್ಬಲ್ಯ ಉಳಿದವರಿಗೂ ಸಾಮಾನ್ಯ, ಸಹಜ. ಆದರೆ ಈ ಬಗೆಯ ನಿರಾಸೆ, ಶಂಕೆ ಒಮ್ಮೆಯಾದರೂ ಜುಡಾಸನಲ್ಲಿ ತೋರಿರಲಿಲ್ಲ. ಅದೇ ಆಶ್ಚರ್ಯ. ತಾನು ಅವರೊಂದಿಗೆ ಹಡಗಿನಲ್ಲಿ ಬಂದಾಗ, ಜುಡಾಸನ ತೊಡೆಯಮೇಲೆ ತಲೆಯಿಟ್ಟು ಮಲಗಿದ್ದ. ಹಡಗಿನಲ್ಲಿ ತನ್ನ ಉಳಿದ ಶಿಷ್ಯರೂ ಬಂದಿದ್ದರು. ಅವರೆಲ್ಲರ ಸತ್ವದ ಪರೀಕ್ಷೆಗೇ ಎನುವಂತೆ ಸಾಗರದಲ್ಲಿ ಮಹಾಪ್ರಳಯ ಎದ್ದಂತೆ ಬಿರುಗಾಳಿ ಬೀಸಿತು. ಪ್ರಪಂಚ ಇದುವರೆಗೂ ನಮ್ಮನ್ನು ಕಟ್ಟಿಹಾಕಿತ್ತು. ಅದರಮೇಲೀಗ ಸೇಡುತೀರಿಸಿಕೊಳ್ಳುತ್ತೇವೆ. ಕಟ್ಟುಗಳನ್ನು ಕಿತ್ತೆಸೆದು ಪ್ರಪಂಚವನ್ನೇ ನುಂಗಿಬಿಡುತ್ತೇವೆಂದು ಸಾಗರದ ನೀರಿನ ಅಲೆಗಳು ದಂಗೆಯೆದ್ದಿದ್ದುವು. ಹಡಗು ಗಾಳಿಯಲ್ಲಿ ತೇಲಾಡುವ ಪಟದಂತೆ ಮುಗ್ಗುರಿಸುತ್ತಿತ್ತು. ಒದ್ದಾಡುತ್ತಿತ್ತು. ಆಗ ಉಳಿದ ಶಿಷ್ಯರೆಲ್ಲಾ ಮಲಗಿದ್ದ ತನ್ನನ್ನು ಎಬ್ಬಿಸಿ ತನಗೆ ತನ್ನ ಪ್ರಾಣಭಯ ಹೇಳಿಕೊಂಡಿದ್ದರು. ಹಡಗು ಮುಳುಗಿಹೋಗುತ್ತದೆ. ತಮ್ಮ ಪ್ರಾಣಗಳೆಲ್ಲಾ ಈಗಲೋ ಆಗಲೋ ಸಾಗರದ ಪಾಲಾಗಿಬಿಡುತ್ತವೆಂದು ಗೋಳುಗರೆದಿದ್ದರು. ಆಗ ಜುಡಾಸ್ ಮಾತ್ರ ಎಂದಿನಂತೆಯೇ ಕುಳಿತಿದ್ದ. ತಾನು ಆಗ ಅವರನ್ನುದ್ದೇಶಿಸಿ "ಓ ನಂಬಿಕೆಯಿಲ್ಲದವರೇ, ಏಕೆ ಹೀಗೆ ಕುಗ್ಗುವಿರಿ? ಪ್ರಾಣಕ್ಕೇಕೆ ಹೆದರುವಿರಿ?" "ಎಂದು ಹೇಳಿದ್ದ. ಆಗ ಕೊಂಚ ಹೊತ್ತಾದಮೇಲೆ ಸಾಗರ ಮತ್ತೆ ಶಾಂತವಾಗಿತ್ತು. ಹೊರಗೆ ಬಿರುಗಾಳಿಯಿದ್ದರೂ ಜುಡಾಸನ ಮನಸ್ಸು ಶಾಂತವಾಗಿತ್ತು. ಅವನ ಈ ಅಚಲನಂಬಿಕೆ ಉಳಿದವರಿಗಿರಲಿಲ್ಲ. ಅಂತೆಯೇ ಈಗ ಈ ಮಾತನ್ನು ಎಲ್ಲರಿಗೂ ಹೇಳಲೋ ಜುಡಾಸನೊಬ್ಬನಿಗೇ ಹೇಳಲೋ ಎಂದು ಯೇಸು ಯೋಚಿಸುತ್ತಿದ್ದ. ಶಿಷ್ಯರೆಲ್ಲ ಅರೆಮುಗಿದ ಮಾತು ಪೂರ್ಣವಾಗಲೆಂದು ಕಾದರು. ದಾರಿ ಹಿಂದೆ ಹಿಂದೆ ಸಾಗುತ್ತಿತ್ತು.

ಶಿಷ್ಯರೆಲ್ಲ ಯೇಸುವಿನ ಹಿಂದೆ ತಲೆತಗ್ಗಿಸಿ ಬರುತ್ತಿದ್ದರು. ಎಂದೂ ಇಲ್ಲದುದು ಇಂದು ತಮ್ಮ ಗುರು, ಯೇಸುಕ್ರಿಸ್ತ ತಲೆಯೆತ್ತದೆ ಗಾಢವಾಗಿ ಚಿಂತಿಸುತ್ತಾ ಮುಂದೆಹೋಗುತ್ತಿದ್ದಾನೆ. ಏನೋ ಹೇಳಬೇಕೆಂದಿದ್ದವನು ಅರ್ಧದಲ್ಲಿಯೇ ತಡೆದುಬಿಟ್ಟ. ಏನು ಯೋಜನೆಯೋ, ಏನು ತಡೆಯೋ, ಏನು ಸಂದೇಹವೋ ಯಾರಿಗೆ ತಾನೇಗೊತ್ತು. ಪ್ರತಿಯೊಬ್ಬ ಶಿಷ್ಯನಿಗೂ ತಾನೇ ಯೇಸುವನ್ನು ಸಂಪೂರ್ಣವಾಗಿ ಅರಿತುಕೊಂಡಿರುವವನು, ತಾನೇ ಯೇಸುವಿನ ಪಟ್ಟಶಿಷ್ಯನೆನ್ನುವ ಭಾವನೆ. ಹಿಂದೊಮ್ಮೆ ಈ ಮಾತಿಗೇ ಕೊಂಚ ಅಸಮಾಧಾನ ತೋರಿತ್ತು. ಜಾನನಿಗೂ ಜೇಮ್ಸನಿಗೂ ಕೊಂಚ ತಿಕ್ಕಾಟ ಹತ್ತಿತ್ತು. ಆಗಲೇ ಯೇಸು ಅವರಿಗೆ ಹೇಳಿದ್ದ—"ಮೊದಲಿಗನು ಕೊನೆಯವನಾಗುವನು. ಕೊನೆಯವನು ಮೊದಲಿಗನಾಗುವನು. ಏಕೆಂದರೆ ಸ್ವರ್ಗಸಾಮ್ರಾಜ್ಯ ಒಂದು ಮನೆಯ ಯಜಮಾನನಂತೆ. ತನ್ನ ತೋಟ ದಲ್ಲಿ ಕೆಲಸಮಾಡಲು ಯಜಮಾನ ಸೇವಕರನ್ನು ಹುಡುಕಿಕೊಂಡುಹೊರಟ. ಮೊದಲ ಗಂಟೆಯಲ್ಲಿ ಸಿಕ್ಕಿದವರನ್ನು ಗೊತ್ತುಮಾಡಿ ತನ್ನ ತೋಟಕ್ಕೆ ಕಳಿಸಿದ. ಎರಡನೆಯ ಗಂಟೆಯಲ್ಲಿ ಮತ್ತೆ ಕೆಲವರನ್ನು ಗೊತ್ತುಮಾಡಿದ. ಹೀಗೆಯೇ ಐದು ಗಂಟೆಯವರೆಗೂ ಗೊತ್ತುಮಾಡಿದ. ಆರನೆಯ ಗಂಟೆ ಯಾದೊಡನೆಯೇ ಎಲ್ಲರಿಗೂ ಅವರ ಭತ್ಯಕೊಟ್ಟು ಕಳಿಸುವಾಗ ಕೊನೆ ಯವರಿಂದ ಆರಂಭಿಸಿ ಎಲ್ಲರಿಗೂ ದಿನದ ಕೂಲಿ ಕೊಟ್ಟ. ಆಗ ಮೊದಲ ಗಂಟೆಯಲ್ಲಿ ಬಂದವರು ಕೊಂಚ ತಂಟೆಹೂಡಿದರು. ಆದರೆ ಆತ ಅವರಿಗೆ ಇಷ್ಟೇ ಹೇಳಿದ. ಅವರಿಗೆ ಗೊತ್ತುಮಾಡಿದಷ್ಟು ಕೂಲಿ ಅವರಿಗೆ ಕೊಟ್ಟಾಗಿದೆ. ಉಳಿದವರಿಗೆಷ್ಟು ಕೊಟ್ಟರೆನ್ನುವ ಮಾತು ಅವರಿಗೇಕೆ? ಅಂತೆಯೇ ಕೊನೆಯವನು ಮೊದಲಿಗನಾಗಬಹುದು. ಮೊದಲಿಗ ಕೊನೆ ಯವನಾಗಬಹುದು" ಎಂದು ಯೇಸು ಬುದ್ಧಿಹೇಳಿದ್ದ. ಯೇಸುವಿನ ಬಳಿಗೆ ಬಂದವರಲ್ಲಿ ಕೊನೆಯವನು ಜುಡಾಸ್. ಮೊದಲು ಬಂದವನು ಪೀಟರ್. ಈ ಮಾತಿನಿಂದ ಪೀಟರನಿಗೆ ಕೊಂಚ ಅಸಮಾಧಾನವಾಯಿತು. ಈ ಪಿಳ್ಳೆ ಜುಡಾಸ್ ನನಗಿಂತ ದೊಡ್ಡವನಾಗುವನೇ? ನನಗೆ ತಿಳಿಯದುದು ಅವನಿಗೇನುತಾನೇ ತಿಳಿದಿದೆ ಎಂದು ಮನಸ್ಸಿನಲ್ಲೇ ಅಂದುಕೊಂಡಿದ್ದ.

ಅವನ ಈ ಒಳಮಾತಿನ ಮರ್ಮ ತಿಳಿದೋ ಏನೋ ಯೇಸು ಮತ್ತೆ ಹೇಳಿದ್ದ. ಎಲ್ಲ ತನಗೆ ತಿಳಿದಿದೆಯೆನ್ನುವವನಷ್ಟು ಮೂರ್ಖ ಮತ್ತಾರೂ ಇಲ್ಲ. ತಿಳಿದಿದ್ದರೂ ತೋರ್ಪಡಿಸಿಕೊಳ್ಳದ ಅಹಂಕಾರರಹಿತ ತಿಳಿವೇ ನಿಜವಾದ ಅರಿವು. ಉಳಿದವರಿಗೆ ನಾನು ಮೇಲೆಂದಿರುವವನ ಮನಸ್ಸು ನಿಜಕ್ಕೂ ಕೀಳು. ಕ್ರಿಸ್ತನ ಈ ಮಾತಿನಿಂದ ಪೀಟರನಿಗೆ ಬಹಳ ನಾಚಿಕೆಯಾಗಿತ್ತು. ಇಷ್ಟೆಲ್ಲಾ ಆದರೂ ಪ್ರತಿ ಶಿಷ್ಯನಿಗೂ ತಾನು ಯೇಸುವನ್ನು ಚೆನ್ನಾಗಿ ಅರಿತುಕೊಂಡಿರುವೆನೆನ್ನುವ ಅಭಿಪ್ರಾಯ. ಹೀಗಾಗಿ ಒಬ್ಬೊಬ್ಬ ಒಂದೊಂದು ರೀತಿಯಲ್ಲಿ ಯೋಚಿಸಲಾರಂಭಿಸಿದ. ಮೂರುದಿನಗಳು! ಅದಾದ ಮೇಲೆ—ಅದಾದ ಮೇಲೇನು? ಪ್ರಭು ಏನೋ ಹೇಳಲುಹೊರಟು ನಿಲ್ಲಿಸಿಬಿಟ್ಟಿದ್ದ. ಮೂರು ದಿನವಾದ ನಂತರ ಜೆರೂಸಲೆಂ ನಗರ ಸೇರುತ್ತೇವೆ. ಅದೇ ಇರಬೇಕೆಂದು ಜಾನ್ ಯೋಚಿಸಿದ. ಮೂರು ದಿನಗಳು ಕಳೆದ ಮೇಲೆ ಯೇಸು ಎಂತಹುದೋ ಪವಾಡ ಮಾಡಬಹುದೆಂದು ಪೀಟರನ ಯೋಚನೆ. ಮೂರು ದಿನಗಳ ಮೇಲೆ ಜೆರೂಸಲೆಂ ನಮ್ಮದಾಗುವುದು. ನಾವು ಎಲ್ಲರನ್ನೂ ಯೇಸುವಿನ ಬೋಧನೆಗೆ ತರುವೆನೆಂದು ಜೇಮ್ಸ್. ಹೀಗೆಯೇ ಒಬ್ಬೊಬ್ಬರು ಒಂದೊಂದು ಬಗೆಯಾಗಿ ಯೋಚಿಸುತ್ತಿದ್ದರು.

ಜುಡಾಸ್ ಯೇಸುವಿನ ಪಕ್ಕದಲ್ಲಿ ಜೋಳಿಗೆ ಹಿಡಿದುಕೊಂಡು ಬರುತ್ತಿದ್ದ. ಯಾವಾಗಲೂ, ಯಾವುದಕ್ಕೂ ಮಾತನಾಡದ ಅಂತರ್ಜೀವಿ ಅವನು. ಬಂದಯೋಚನೆಗಳನ್ನೆಲ್ಲಾ ಮನಸ್ಸಿನಲ್ಲೇ ಇಟ್ಟುಕೊಂಡು ಮತ್ತೆ ಮತ್ತೆ ಒರೆಹಚ್ಚುವವನು. ಯೇಸುವಿನೊಂದಿಗೆ ಕಳೆದ ಕೆಲವು ವರ್ಷಗಳಲ್ಲಿ ಅವನ ಯೌವನದ ಕಾವೆಲ್ಲಾ ತಣ್ಣಗಾಗಿತ್ತು. ಈಗ ಕಾವಿರಲಿಲ್ಲವೆಂದಲ್ಲ. ಈಗ ನಸು ಬೆಚ್ಚಗಿತ್ತು ಕಲ್ಪನೆ. ಮನಸ್ಸು ಹೂವಿನ ಬಣ್ಣ ಬಿಟ್ಟು ಹಣ್ಣಿನ ತಿರುಳಾಗುತ್ತಿತ್ತು. ಯೇಸುವಿನ ಬೋಧನೆಯಲ್ಲಿ ತನ್ನಿಂದಾದಷ್ಟನ್ನು ಅರಗಿಸಿಕೊಂಡಿದ್ದ. ಉಳಿದುದನ್ನು ಅರಿತುಕೊಳ್ಳಲು ಪ್ರಯತ್ನಿಸುತ್ತಿದ್ದ. ಈಗಲೂ ಯೇಸು ಮಾತನಾಡದೆ ಅರ್ಧಕ್ಕೇ ನಿಲ್ಲಿಸಿಬಿಟ್ಟಾಗ ಅವನ ಮುಖ ದಿಟ್ಟಿಸಿ ನೋಡಿದ. ಯಾವಾಗಲೂ ಶಾಂತವಾಗಿರುತ್ತಿದ್ದ ಹಸುಗೂಸಿನ ಮುಖದಷ್ಟು ತಿಳಿಮುಖದಲ್ಲಿ ಒಂದು ನೆರಳು

ಮಲಗಿದ್ದಂತೆ ತೋರಿತು. ಯೇಸುವಿನ ಯೋಚನೆ ಏನಿರಬಹುದೆಂದು ಕೊಂಡು ತಾನೂ ಕಲ್ಪಿಸಿಕೊಳ್ಳಲು ಹತ್ತಿದ. ಮೂರುದಿನ! ಮೂರು ದಿನದ ನಂತರ ಜೆರೂಸಲೆಂ ಸೇರುತ್ತೇವೆ. ಆಮೇಲೆ? ಆಮೇಲೇನು? ಅದು ಬಗೆಹರಿಯದ ಪ್ರಶ್ನೆ. ಆಮೇಲೆ ಏನೋ ಕಾದಿದೆ. ಯೇಸು ಇದುವರೆಗೂ ಹೇಳುತ್ತಿದ್ದುದು ಈಗ ಮುಗಿದುಹೋದೀತೇ? ನಾನು ಜೆರೂಸಲೆಂ ಸೇರಿದರೆ ಸಾಕು. ನನ್ನ ಕಾರ್ಯಮುಗಿದಂತೆ ಎಂದು ಯೇಸು ಹಿಂದೊಮ್ಮೆ ಹೇಳಿದುದು ನೆನಪಾಯಿತು. ಅಂದರೆ ತನ್ನ ಕೆಲಸ ಪೂರ್ಣ ವಾದ ಮೇಲೆ ತಮ್ಮ ಪ್ರಭು ತಮ್ಮನ್ನು ಬಿಟ್ಟು—ಛೆ! ಛೆ! ಇರಲಾರದು! —ಆದರೆ ಅದೇನಾದರೂ ಸತ್ಯವಾದರೆ—ತಮ್ಮ ಪ್ರಭುವನ್ನುಳಿದು ತಾವು ಇರುವುದು ಹೇಗೆ ತಾನೇ ಸಾಧ್ಯ? ಅದು ಅಸಾಧ್ಯ. ಅದು ತನ್ನಿಂದಂತೂ ಆಗದಮಾತು ಎಂದುಕೊಂಡ ಜುಡಾಸ್. ಹೃದಯ ಯಾಕೋ ಎಂದೂ ಇಲ್ಲದುದು ಜಿರುಸಾಗಿ ಬಡಿದುಕೊಳ್ಳುತ್ತಿತ್ತು. ಏನೋ ಒಂದು ಬಗೆಯ ವಿಹ್ವಲತೆ, ಕಳವಳ. ಹಿಂದೆಂದೂ ಹಾಗಾಗಿರಲಿಲ್ಲ. ಯೇಸುವಿನ ಜತೆಗೆ ಬರುವ ದಿನದ ಹಿಂದಿನ ದಿನ ಹಾಗಾಗಿತ್ತು. ಅನಿರ್ವಚನೀಯವಾದ ಒಂದು ಚಿಂತೆ. ರೂಪವಿಲ್ಲದ ಒಂದು ವೇದನೆ, ಕಾರಣವಿಲ್ಲದ ಒಂದು ಬೇಸರದ ತ್ರಿವೇಣೀಸಂಗಮವಾಗಿತ್ತು ಹೃದಯ. ಆಗ ಯೇಸುವಿನ ಜತೆಗೆ ತಾನು ಒಂದು ಬಿಟ್ಟಿದ್ದ. ಈಗ ಮತ್ತೆ ಅದೇ ರೀತಿ ಹೃದಯದಲ್ಲಿ ಕೊರಗು, ಅಶಾಂತಿ, ಅಸಮಾಧಾನ. ಮಳೆಬರುವ ಮೊದಲು ಮೋಡ ಮುಸುಕಿದಂತೆ ಅಪೂರ್ವ ಮೌನ. ಈ ಮೌನದ ಮಹಾಗರ್ಭದಲ್ಲಿ ಅಶಾಂತಿಯು ಅಗಾಧತೆ ಸಿಡಿಯಲು ಸಿದ್ಧವಾದಂತಿತ್ತು!

ಇದ್ದಕ್ಕಿದ್ದಂತೆ ಯೇಸು ಮಾತನಾಡಿದ. ಎಲ್ಲರೂ ತಮ್ಮ ಯೋಚನೆಗಳಿಗೆ ತಡೆಹಾಕಿ ಕೇಳಲಾರಂಭಿಸಿದರು.

"ಪೀಟರ್"

"ಪ್ರಭು"

"ಇನ್ನು ಮೂರು ದಿನಗಳು ಮಾತ್ರ, ಪೀಟರ್. ಅನಂತರ—"

"ಅನಂತರ ಏನು ಪ್ರಭು?"

"ಅನಂತರ—ಹೂವು ಹಣ್ಣಾಗುತ್ತದೆ"

ಜುಡಾಸ್ ಒಮ್ಮೆಗೇ ನಡುಗಿದ. ಹಾಗಿದ್ದರೆ—ತಾನೆಂದು ಕೊಂಡುದು ನಿಜ. ಹೂವು ಒಮ್ಮೆ ಹಣ್ಣಾದ ಮೇಲೆ ಬಹುಕಾಲ ಅದು ಮರಕ್ಕೆ ಅಂಟಿಕೊಳ್ಳದು. ತೊಟ್ಟಿನ ಆಧಾರ ಅದಕ್ಕೆ ಬೇಕಿಲ್ಲ! ಎಂದ ಮೇಲೆ—ತೊಟ್ಟಿನ ಗತಿ?

ಪೀಟರನಿಗೆ ಯೇಸುವಿನ ಮಾತು ಅರ್ಥವಾಯಿತೋ ಇಲ್ಲವೋ ಸುಮ್ಮನೆ ನಡೆಯುತ್ತಿದ್ದ. ಮತ್ತೆ ಪ್ರಶ್ನೆ ಕೇಳಲಿಲ್ಲ. ಯೇಸು ಕೊಂಚ ಕಾಲ ಮತ್ತೆ ಮೌನವಾಗಿದ್ದವನು ತಿರುಗಿ ಮಾತಾಡಲಾರಂಭಿಸಿದ.

"ಹಣ್ಣಾದರೇ ಹೂವಿನ ಜನ್ಮ ಸಾರ್ಥಕ. ಆ ಹಣ್ಣು ಕೆಳಗುರುಳು ತ್ತದೆ. ಅದರ ಬಲಿತ ಬೀಜಗಳು ಚೆಲ್ಲಿ ನೂರಾರು ಸಸಿಗಳೇಳುತ್ತವೆ. ನೂರಾರು ಮರಗಳಾಗುತ್ತವೆ. ಸಾವಿರಾರು ಹೂಗಳಾಗುತ್ತವೆ. ಒಂದು ಹೋಗಿ ಲಕ್ಷವಾಗುತ್ತದೆ."

ಯೇಸು ತಾನೊಬ್ಬ ಹೋಗಿ ಲಕ್ಷ ಯೇಸುಕ್ರಿಸ್ತರ ಸೃಷ್ಟಿಗೆ ದಾರಿಮಾಡಿಕೊಡುವನು. ಆದರೆ ಹೋದ ಯೇಸುವಿನ ವಿಯೋಗ ಹೇಗೆ ತಾನೇ ತಡೆಯುವುದೆಂದು ಒದ್ದಾಡಿದ ಜುಡಾಸ್.

"ಪೀಟರ್, ಇಲ್ಲಿ ಕೊಂಚ ಹೊತ್ತು ಕುಳಿತುಕೊಳ್ಳೋಣ"

ಯೇಸುವಿನ ಸುತ್ತಲೂ ಅವನ ಶಿಷ್ಯರು ಕುಳಿತರು. ಯೇಸು ಅವರಿಗೆ ಹೇಳಲಾರಂಭಿಸಿದ.

"ಇನ್ನು ಮೂರು ದಿನದನಂತರ ನಾನು ನನ್ನ ಸ್ಥಾನಕ್ಕೆ ಹಿಂದಿರು ಗುತ್ತೇನೆ. ನನ್ನನ್ನು ಇಲ್ಲಿಗೆ ಕಳುಹಿಸಿದ, ಸ್ವರ್ಗದಲ್ಲಿರುವ ನನ್ನ ತಂದೆ—ದೇವ ದೇವ, ನನ್ನನ್ನು ಹಿಂದಕ್ಕೆ ಕರೆಸಿಕೊಳ್ಳುತ್ತಾನೆ. ನನ್ನ ಈ ಮಾತಿನಿಂದ ನಿಮಗೆ ದುಃಖವಾಗಿದೆ. ಆದರೆ ನನಗೆ ಬೇರೆ ಮಾರ್ಗವೇ ಇಲ್ಲ. ನಾನು ಹೋಗಿ ನಿಮಗೆ ಶಾಂತಿ ನೀಡುವವನನ್ನು ಕಳುಹಬೇಕು. ಕೊಂಚ ಕಾಲದಲ್ಲೇ ನಿಮ್ಮ ಬಳಿಯಿಂದ ಹೊರಟು ಹೋಗುವೆನು. ಕೊಂಚ ಕಾಲದಲ್ಲೇ ನಿಮ್ಮ ಬಳಿ ಬರುವೆನು."

ಯೇಸುವಿನ ಕೊನೆಯಮಾತು ಎಲ್ಲರನ್ನೂ ತಬ್ಬಿಬ್ಬಾಗಿಸಿತು. ಕೊಂಚ

ಕಾಲದಲ್ಲಿ ಹೋಗುವೆನು, ಕೊಂಚಕಾಲದಲ್ಲೇ ಬರುವೆನು ಎಂದರೆ ಏನರ್ಥ ವೆಂದು ಎಲ್ಲರ ಮನಸ್ಸಿನಲ್ಲೂ ಸಂದೇಹ. ಈ ಸಂದೇಹವನ್ನರಿತು ಯೇಸು ಮತ್ತೆ ಹೇಳಲಾರಂಭಿಸಿದ.

"ಜೆರೂಸಲೆಂನಲ್ಲಿರುವ ರಾಜ ಪೈಲೇಟನಿಗೆ ನಾನು ಒಪ್ಪಿಸಲ್ಪಡು ತ್ತೇನೆ. ನನ್ನ ಶತ್ರುಗಳ ಕೈಗೆ ಕೊಡಲ್ಪಡುತ್ತೇನೆ. ನನ್ನ ಶತ್ರುಗಳು ನನ್ನನ್ನು ಗೇಲಿಮಾಡುತ್ತಾರೆ. ನನ್ನನ್ನು ಬಯ್ಯುತ್ತಾರೆ. ನನ್ನನ್ನು ಇನ್ನಿಲ್ಲದ ರೀತಿಯಲ್ಲಿ ಗೋಳಾಡಿಸುತ್ತಾರೆ. ನನ್ನನ್ನು ಕೊಲ್ಲುತ್ತಾರೆ. ಆದರೆ ಮತ್ತೆ ಮೂರೇ ದಿನದಲ್ಲಿ ನಾನು ಸಾವಿನಿಂದ ಎದ್ದು ಬರುತ್ತೇನೆ" ಎಂದು ಯೇಸು ಮತ್ತೆ ಮೌನತಾಳಿದ.

ಶತ್ರುಗಳ ಕೈಗೆ ಕೊಡಲ್ಪಡುತ್ತೇನೆಂದು ಯೇಸು ಹೇಳಲು ಎಲ್ಲರೂ ನಡುಗಿದರು. ತಮ್ಮ ಪ್ರಭುವನ್ನು ಕಾಪಾಡಲು ತಾವು ಹನ್ನೆರಡು ಮಂದಿಯೂ ಇರಲು ಶತ್ರುಗಳ ಕೈಗೆ ಯೇಸುವನ್ನು ಕೊಡುವವರಾದರೂ ಯಾರು? ಅಂತಹ ದ್ರೋಹ ನಡೆಸುವವರು ಯಾರು? ಈಗಲೇ ತಿಳಿದು ಬಿಟ್ಟರೆ ಆತನಿಲ್ಲದಂತೆ ಮಾಡಿಬಿಡಬಹುದೆಂದು ಶಿಷ್ಯರು ಯೋಚಿಸಿದರು. ಯೇಸು ಬೋಧಿಸಿದ್ದ ಅಹಿಂಸೆ ಆ ಕ್ಷಣದಲ್ಲಿ ಮರೆತುಹೋಗಿತ್ತು.

"ಆದರೆ ನನ್ನ ಪ್ರಯಾಣದಿಂದ ನೀವು ಯಾರೂ ಮರುಗಬೇಕಾ ದ್ದಿಲ್ಲ. ನನ್ನಲ್ಲಿ ನಂಬಿಕೆಯಿಟ್ಟವರಲ್ಲಿ ನಾನು ಯಾವಾಗಲೂ ಇರುತ್ತೇನೆ. ನನ್ನಲ್ಲಿ ಉಳಿದವರು ಯಾವಾಗಲೂ ನನ್ನವರೇ. ನನ್ನ ಕೊಂಬೆಯಲ್ಲಿ ಬಿಟ್ಟ ಹನ್ನೆರಡು ಹಣ್ಣುಗಳು ನೀವು. ನಿಮ್ಮಲ್ಲಿ ನಾನು ಯಾವಾಗಲೂ ಇರು ತ್ತೇನೆ. ಆದರೆ ಸಂಪೂರ್ಣವಾಗಿ ನನ್ನಲ್ಲಿ ನಂಬುಗೆಯುನ್ನಿಡಿ. ಅದಿಲ್ಲ ದಿದ್ದರೆ ನೀವು ಉಳಿಯುವುದು ಕಷ್ಟಸಾಧ್ಯ."

ಯೇಸು ಮಾತು ಮುಗಿಸಿ ನಸುನಕ್ಕ. ಆ ನಗೆಯಲ್ಲಿ ಎಲ್ಲರಿಗೂ ಒಂದು ಅಪೂರ್ವ ಕಾಂತಿ ತೋರಿತು. ಆದರ ಹಿಂದೆ ಅಡಗಿದ್ದ ಅಪಾರ ನೋವಿನ ನಿಶ್ಚಯ ಯಾರಿಗೂ ಕಾಣಲಿಲ್ಲ. ಯೇಸು ಉಳಿದೆಲ್ಲ ಶಿಷ್ಯರನ್ನು ಕೆಲಸ ಹೇಳಿ ಕಳುಹಿಸಿ ಜುಡಾಸನ ತೊಡೆಯ ಮೇಲೆ ತಲೆಯಿಟ್ಟು ಮಲಗಿದ. ಒಂದೆರಡು ನಿಮಿಷ ಮೇಲುಗಡೆಗೇ, ಜುಡಾಸನ ಕಡೆಗೇ ನೋಡುತ್ತಾ ಒಂದು ನಿಟ್ಟುಸಿರಿಟ್ಟ.

"ಜುಡಾಸ್"

"ಪ್ರಭು"

"ನಿನ್ನ ತೊಡೆಯ ಮೇಲೆ ತಲೆಯಿಟ್ಟು ಮಲಗಿದಾಗ ಎಷ್ಟು ಹಾಯಿಯೆನಿಸುತ್ತದೆ ಗೊತ್ತೇ ಜುಡಾಸ್. ಒಂದೊಂದು ಸಾರಿ ಮನಸ್ಸಿಗೆ ದಣಿವಾದಾಗಲೂ ನನಗೆ ಶಾಂತಿ ನಿನ್ನ ತೊಡೆಯಲ್ಲಿ ಸಿಕ್ಕಿದೆ. ನಿನ್ನ ಮುಖ ಕಂಡೊಡನೆಯೇ ನನಗೆ ಏನೇನೋ ನೆನಪಾಗುತ್ತದೆ. ಜುಡಾಸ್."

"ಏನು ನೆನಪು, ಪ್ರಭು?"

"ಚಿಕ್ಕಂದಿನಲ್ಲಿ ನನ್ನ ತಾಯಿ ಮೇರಿಯೊಂದಿಗೆ ನಾನು ಈಜಿಪ್ಟಿನಲ್ಲಿದ್ದಾಗ, ಸೈನಿಕರಿಂದ ನನ್ನನ್ನುಳಿಸಲು ತಾಯಿ ಊರಿನಿಂದ ಊರಿಗೆ ಹೋಗುತ್ತಿದ್ದಳು. ಆಗ ರಾತ್ರಿಯಾಯಿತೆಂದರೆ ಹೀಗೆಯೇ ತೊಡೆಯ ಮೇಲೆ ತಲೆಯಿಟ್ಟು ಮಲಗುತ್ತಿದ್ದೆ. ಮೇಲೆ ಕಣ್ಣೆತ್ತಿದರೆ ಹೀಗೆಯೇ ಅಚಲಸಂಬಿಕೆಯಿಂದ ಕಳೆಗಟ್ಟಿದ ಮುಖ ಪ್ರೇಮವೇ ಕಾಂತಿಯಾದ ಮಮತೆಯ ಕಣ್ಣುಗಳು. ನಿನ್ನನ್ನು ಕಂಡಾಗಲೆಲ್ಲ ನನಗೆ ತಾಯಿ ಮೇರಿಯ ನೆನಪಾಗುವುದು, ಜುಡಾಸ್."

ಜುಡಾಸ್ ಮಾತಾಡಲಿಲ್ಲ. ಕೈ ಮಾತ್ರ ಯೇಸುವಿನ ಮುಂಗುರುಳುಗಳನ್ನಾಡಿಸುತ್ತಿತ್ತು. ತಾಯ್ತನದ ಮಮತೆಯಿಂದ ಹಣೆಯನ್ನು ನೇವರಿಸುತ್ತಿತ್ತು. ಕಣ್ಣಿನಲ್ಲಿ ನೀರು ತುಂಬಿಕೊಂಡಿತ್ತು. ಜುಡಾಸನಿಗೆ ತನ್ನ ತಾಯಿಯ ನೆನಪೂ ಬಂದಿತು. ತಾನು ಯೇಸುವಿನೊಂದಿಗೆ ಹೊರಟುಬಂದಾಗ ತಾಯಿಗೆ ಹೇಳಿ ಕೂಡ ಬರಲಿಲ್ಲ. ಆಗ ತಾನಿನ್ನೂ ಚಿಕ್ಕವನು. ತಮ್ಮ ಮನೆಯಿಂದ ಕೊಂಚದೂರದಲ್ಲಿದ್ದ ಹಳೆಯ ಕೋಟೆಯ ಅವಶೇಷಗಳ ಬಳಿ ಕುಳಿತಿದ್ದ. ಅಲ್ಲಿಯೇ ಕುಳಿತು ಗ್ರೀಕ್ ವೀರಯೋಧರ ಕತೆಯನ್ನೋದುತ್ತಿದ್ದ. ಮೊದಲಿನಿಂದಲೂ ಅವನಿಗೆ ಕಾವ್ಯವೆಂದರೆ ಪ್ರಾಣ. ಅದರಲ್ಲಿಯೂ ಗ್ರೀಕ್ ರುದ್ರಕಾವ್ಯಗಳಂತೂ ಅವನಿಗೆ ಸೀಯಾಳ ಕುಡಿದಂತೆ. ಆಗ ಅದನ್ನು ಓದುತ್ತಿದ್ದಾಗ, ತಮ್ಮ ದೇಶವನ್ನುಳಿಸಲು ತಮ್ಮತನ ಮರೆತ ತ್ಯಾಗವೀರರ ಚಿತ್ರ ಮನಸ್ಸಿನ ಮುಂದೆ ಸುಳಿದು, ತನ್ನ ಯುವಕ ಹೃದಯದಲ್ಲಿ ಕೂಡ ಹಿರಿಯಾಸೆ ಮೂಡಿದಾಗ, ದೂರದಲ್ಲಿ

ಹನ್ನೆರಡು ಮಂದಿ ಬರುತ್ತಿದ್ದುದನ್ನು ಕಂಡಿದ್ದ. ಹಿಂದಿನ ದಿನದಿಂದ ಹೃದಯ ಏನೋ ಹುಚ್ಚುಹುಚ್ಚಾಗಿದ್ದುದು ಈಗ ಇದ್ದಕ್ಕಿದ್ದಂತೆ ಬಂದರು ಸೇರಿದ ಹಡಗಿನಂತೆ ಶಾಂತವಾಯಿತು. ಜೋಲಿಯಾಟ ನಿಂತಿತು. ಯೇಸು ಮುಂದೆ ಬಂದವನು "ಮಗು" ಎಂದು ತನ್ನ ಕೈಹಿಡಿದಿದ್ದ. ಆಗ ತಾನು ಮಾತಿಲ್ಲದೆ ಯೇಸುವನ್ನು ಹಿಂಬಾಲಿಸಿದ್ದ. ಆದಾಗಿ ಬಹಳ ವರ್ಷಗಳಾಗಿ ಹೋಗಿದೆ. ಈಗ ತನ್ನ ತಾಯಿ ಏನಾಗಿರುವಳೋ, ಮಗನನ್ನು ಕಳೆದು ಕೊಂಡ ದುಃಖದಲ್ಲಿ ತಾಯಿ ಕೊರಗಿ ಕೊರಗಿ ಆಗಲೇ ಸತ್ತುಹೋದಳೋ ಏನೋ. ಈಗ ಉಳಿದಿರುವಳೋ ಇಲ್ಲವೋ. ಉಳಿದಿದ್ದರೂ ಮುದುಕತನ. ಕಣ್ಣು ಕಾಣಿಸದೆ ಒದ್ದಾಡಬಹುದು. ಹಲವುವರ್ಷಗಳ ಹಿಂದೆ ಕಳೆದು ಕೊಂಡ ತನ್ನ ಒಬ್ಬನೇ ಮಗನ ಬರವಿಗಾಗಿ ಕಾದು ಕಾದು ಕಣ್ಣು ಇಂಗಿ ಹೋಗಿರಬಹುದು. ಹಂಬಲಿಸಿ ಹಂಬಲಿಸಿ ಹೃದಯ ತರಗಾಗಿರಬಹುದು. ತಾನು ತಾಯಿಯನ್ನು ಕಳೆದುಕೊಂಡವನು ಎಂದು ಜುಡಾಸಿನ ಹೃದಯದಲ್ಲಿ ನೆನಪು ಉಮ್ಮಳಿಸಿ ಬಂತು. ಕಣ್ಣಿನಿಂದ ಒಂದು ಹನಿ ನೀರು ಮುತ್ತಿನ ಚಿಪ್ಪಿನಿಂದುರುಳುವ ಮುತ್ತಿನಂತೆ ಕೆಳಗುರುಳಿ ಯೇಸುವಿನ ಮುಂಗುರುಳಿನ ಆಭರಣವಾಗಿ ಕ್ಷಣಕಾಲ ನಿಂತಿತು. ಅಲ್ಲಿಂದ ಹಣೆಗೆ ಇಳಿಯಿತು.

"ಜುಡಾಸ್"

"ಪ್ರಭು"

"ಅಳುತ್ತಿರುವೆಯಾ, ಜುಡಾಸ್"

ಯೇಸುವಿನ ಧ್ವನಿಯಲ್ಲಿ ಮಾಧುರ್ಯ, ಮಾರ್ದವತೆ, ಮಮತೆಗಳು ಮನೆಮಾಡಿಕೊಂಡಿದ್ದುವು. ತಾಯಿಯ ಪ್ರೇಮದ ಸ್ವರದಂತಿತ್ತು.

"ಏನೋ, ನನಗೂ ತಾಯಿಯ ನೆನಪಾಯಿತು. ಪ್ರಭು"

"ಜುಡಾಸ್. ತಾಯಿಯ ನೆನಪಾಗದ ಮನುಷ್ಯ ಮನುಷ್ಯನೇ ಅಲ್ಲ, ತನಗೆ ಜನ್ಮಕೊಟ್ಟತಾಯಿಯನ್ನು ಮರೆಯುವನಿಗಿಂತ ಪಾಪಿ, ದ್ರೋಹಿ ಮತ್ತೊಬ್ಬನಿಲ್ಲ. ಕೋಟಿ ಕೀರ್ತನ ನಡೆಸಿದವನಿಗಾದರೂ ಸ್ವರ್ಗದ ಬಾಗಿಲು ತೆರೆಯಬಹುದು. ಆದರೆ ತಾಯಿಯನ್ನು ಮರೆತವನಿಗಲ್ಲ. ನನಗೆ ನೀನೇ ತಾಯಿಯಂತಿರುವೆ. ಜುಡಾಸ್"

ಜುಡಾಸನ ಕಣ್ಣಿನಿಂದ ಹನಿ ಪಳಪಳನೆ ಉದುರಿದುವು. ಆನಂದ, ನೋವುಗಳು ಕೈಗೆ ಕೈಕೂಡಿದ್ದುವು ಆ ಕಣ್ಣೀರಿನಲ್ಲಿ.

"ನೀವೆಲ್ಲಾ ನನಗಾಗಿ ಬಹಳ ಕಷ್ಟಪಟ್ಟಿದ್ದೀರಿ. ಜುಡಾಸ್. ಆದರೆ ಇದು ಈ ಎಲ್ಲ ಕಷ್ಟವೂ ಪ್ರಪಂಚದ ಒಳಿತಿಗಾಗಿ. ಹೊಸ ಪ್ರಪಂಚದ ಸೃಷ್ಟಿಯಾಗಬೇಕಾಗಿದೆ. ಜುಡಾಸ್. ಪ್ರೇಮದ ಜನನವಾಗ ಬೇಕಾಗಿದೆ. ಈಗ ರೋಮನರ ಶಾಸನದಲ್ಲಿ, ಮಾನವತೆಯನ್ನೇ ಮರೆತ ವರ ಅಮಾನುಷತೆಯಿಂದ ಪ್ರಪಂಚ ಕೆಟ್ಟುಹೋಗಿದೆ. ಅದನ್ನು ಸರಿಪಡಿಸ ಬೇಕು. ಅದು ಕಷ್ಟದ ಕೆಲಸ. ಅಸಾಧ್ಯ ಗಡುಸಿನ ಕೆಲಸ. ಇದುವರೆಗೂ ನನ್ನ ಜತೆಯಲ್ಲಿದ್ದು ಎಲ್ಲರೀತಿಯ ಕಷ್ಟಗಳನ್ನೂ ಅನುಭವಿಸಿದ್ದೀರಿ. ನಿಮ್ಮನ್ನು ಎಲ್ಲರೂ ದೂರಕ್ಕೆ ಎಸೆದಿದ್ದಾರೆ. ಗಾಳಿಗೆಸಿಕ್ಕಿ ಹೂಬಳ್ಳಿ ಯಿಂದ ಕಿತ್ತು ಬೇಲಿಯಿಂದ ಹೊರಗೆಸೆಯಲ್ಪಟ್ಟ ಹೂವಿನ ಬಾಳು ಕಠಿಣ. ಆದರೆ ಅದನ್ನೇ ಆರಿಸಿ ಎತ್ತಿಕೊಂಡುಹೋಗಿ ಮುಡಿದುಕೊಳ್ಳುವರು. ಅಂತೆಯೇ ನೀವಿಲ್ಲಿ ಕಷ್ಟಪಟ್ಟರೂ ನಿಮಗೆ ನನ್ನ ಸ್ವರ್ಗದಲ್ಲಿ ಯಾವಾಗಲೂ ಸುಖಾಸನ ಕಾದಿರುತ್ತದೆ."

"ಈಗ—"

ಜುಡಾಸ್ ಮಾತಾಡಲು ಕೊಂಚ ಹಿಂತೆಗೆದ. ಅದನ್ನು ಕಂಡು ಯೇಸು ಅವನನ್ನು ಕುರಿತು ಹೇಳಿದ—

"ಹೇಳು, ಜುಡಾಸ್. ಏನೋ ಸಂದೇಹವಿರುವಂತಿದೆ"

"ಪ್ರಭು. ನಮ್ಮ ಕಷ್ಟವೇನೂ ಕಷ್ಟವಲ್ಲ. ಆದರೆ ನಿಮ್ಮದು, ಇನ್ನು ಮೂರುದಿನವೆಂದು ಮಾತ್ರ ಹೇಳಿದಿರಿ. ಆಮೇಲೆ ನಿಮ್ಮನ್ನುಳಿದು ನಾವು ಹೇಗೆ ಇರುವುದು ಪ್ರಭು?"

"ಮಗು, ಜುಡಾಸ್, ಮೂರು ದಿನದ ನಂತರ ನಾನು ಶತ್ರುಗಳ ಕೈಗೆ ಸಿಕ್ಕಿಕೊಳ್ಳುತ್ತೇನೆ. ಅದಾದ ಮೂರುದಿನದಲ್ಲೇ ಸಾವಿನಿಂದ ಮತ್ತೆ ಏಳುತ್ತೇನೆ. ಇದೂ ಅಲ್ಲದೆ ನಿಮ್ಮೊಂದಿಗೆ ನನ್ನ ಆತ್ಮ ಯಾವಾಗಲೂ ಇದ್ದೇ ಇದೆ"

"ಆದರೆ, ಪ್ರಭು, ಶತ್ರುಗಳ ಕೈಗೆ ನಿಮ್ಮನ್ನೊಪ್ಪಿಸುವವರು ಯಾರು, ಪ್ರಭು?"

"ಜುಡಾಸ್, ನಿನ್ನಲ್ಲಿ ನನ್ನದೊಂದು ಬೇಡಿಕೆಯಿದೆ. ಜುಡಾಸ್. ನೀನು ನನಗೆ ತಾಯಿಯಂತೆ. ತಾಯಿ ಮಗ ಕೇಳಿದುದನ್ನು ಏನೆಂದರೂ ಒಲ್ಲೆನೆನ್ನುವುದಿಲ್ಲ. ಕೊಡುವೆಯಾ ಜುಡಾಸ್?"

ಜುಡಾಸ್ ಈ ಬೇಡಿಕೆ ಕೇಳಿ ಕೊಂಚ ಬೆದರಿದ. ಕಾಲು, ತೊಡೆ ಕೊಂಚ ಅದುರಿತು. ಯೇಸುವಿಗದು ಕೂಡಲೇ ಅರಿವಾಯಿತು.

"ಜುಡಾಸ್, ನಾನು ಕೇಳಿದುದಕ್ಕೆ ಬೆಚ್ಚಿದೆಯಾ? ನಾ ಕೇಳಿದುದನ್ನು ಕೊಡಲಾರೆಯಾ?"

ಯೇಸುವಿನ ಧ್ವನಿಯ ಹಿಂದಿದ್ದ ನೋವು ಜುಡಾಸನ ಹೃದಯದ ತಂತಿಯನ್ನು ಮೀಟಿತು.

"ಪ್ರಭು. ನನ್ನದೆಲ್ಲವೂ ನಿಮ್ಮದಾಗಿರುವಾಗ—"

"ಹಾಗಲ್ಲ, ಜುಡಾಸ್. ಇದೊಂದು ಮಾತನ್ನು ನೀನು ಮಾಡಬೇಕು. ನಿನ್ನಿಂದ ಒಬ್ಬನಿಂದಲೇ ಈ ಮಹಾತ್ಯಾಗ ಸಾಧ್ಯ."

"ಪ್ರಭು, ತಮ್ಮದಾದುದನ್ನು ಹೇಗೆ ಬೇಕಾದರೂ ತಾವು ಉಪಯೋಗಿಸಿಕೊಳ್ಳಬಹುದಲ್ಲವೇ?

"ಈ ತ್ಯಾಗದಿಂದ ನಿನ್ನ ಹೆಸರು ಕಲುಷಿತವಾಗುವುದು. ಪ್ರಪಂಚವಿರುವವರೆಗೂ ಜನ ನಿನ್ನಹೆಸರನ್ನೆತ್ತಿ ಬಯ್ಯುವರು. ಪ್ರಪಂಚವೆಲ್ಲ ನಿನ್ನನ್ನು ನಿಂದಿಸುವುದು. ನಿನಗೆ ಒಬ್ಬರಿಂದಲೂ ಒಂದು ಒಳ್ಳೆಯ ಮಾತು ಸಿಗುವುದಿಲ್ಲ. ನಿನ್ನವರಿಂದ, ನಿನ್ನಜತೆಗಾರರಿಂದ, ನನ್ನಜತೆಗಾರರಿಂದಲೂ ನೀನು ಹಾಸ್ಯಕ್ಕೆ ಗುರಿಯಾಗಬೇಕಾದೀತು. ಅಪನಿಂದೆಗೀಡಾಗಬೇಕು. ಈ ತ್ಯಾಗಕ್ಕೆ ನೀನು ಸಿದ್ಧನಾಗಿರುವೆಯಾ, ಜುಡಾಸ್?"

ಯೇಸುವಿನ ಮಾತಿನ ಹಿಂದಿನ ನೋವು, ಕಾವಿನಿಂದ ಜುಡಾಸನ ಹೃದಯಕ್ಕೆ ಮೋಡಿ ಹಾಕಿದಂತಾಗಿತ್ತು. ಎಂದೂ ಯೇಸು ಇಷ್ಟು ಉದ್ವೇಗದಲ್ಲಿ ಮಾತಾಡಿರಲಿಲ್ಲ. ಎಂದೂ ಯೇಸುವಿನ ಕಣ್ಣಿನಲ್ಲಿ ನೀರು ಆಡಿರಲಿಲ್ಲ. ಈಗ ಯೇಸುವಿನ ಮುಖದಲ್ಲಿ ನೋವು, ಅಗಾಧ ವೇದನೆ ತೋರುತ್ತಿತ್ತು. ಕಣ್ಣಿನಲ್ಲಿ ನೀರು ತುಂಬಿ ಕನ್ನೆಗಿಳಿಯುತ್ತಿತ್ತು. ಜುಡಾಸ್ ಮೆಲ್ಲನೆ ಬೆರಳಿನಂಚಿನಿಂದ ಕಣ್ಣೀರನ್ನೊರೆಸಿದ.

"ಹೇಳು, ಜುಡಾಸ್. ನಿನ್ನನ್ನು ಎಲ್ಲರೂ ದ್ರೋಹಿಯೆನ್ನುವರು. ಮುಂದೆ ಬರುವ ಜನಾಂಗಗಳೆಲ್ಲಾ ನಿನ್ನ ಹೆಸರನ್ನೇ ದ್ರೋಹಿಯೆಂದುಪ ಯೋಗಿಸುವರು. ಆದರೆ ಅವರಿಗಾಗಿ, ಜಗತ್ತನ್ನುಳಿಸುವುದಕ್ಕಾಗಿ ನೀನು ಅದನ್ನೊಪ್ಪಬೇಕು ಜುಡಾಸ್"

ಜುಡಾಸ್ ಧಿಗ್ಗನೆ ನಡುಗಿದ. ಹಾಗಿದ್ದರೆ—ಹಾಗಿದ್ದರೆ! ನಿಜ! ತಾನೇ!

"ಪ್ರಭು!" ಎಂದೊಮ್ಮೆ ಚೀರಿದ.

"ಹೌದು ಜುಡಾಸ್, ನೀನೇ ಆ ಕಾರ್ಯ ಮಾಡಬೇಕು. ಹಣ್ಣನ್ನು ಕೆಳಕ್ಕೆ ಬೀಳಿಸಲು ತಾಯಿತೊಟ್ಟಿಗೆ ಇಚ್ಛೆಯಿಲ್ಲ. ಆದರೆ ಆ ಹಣ್ಣಿನ ಸಾವಿನಿಂದ ಸಾವಿರ ಬೀಜಗಳು ಹುಟ್ಟುತ್ತವೆ. ಅದಕ್ಕಾಗಿ ತೊಟ್ಟು ಮರುಗಬಾರದು, ಸಂತೋಷ ಪಡಬೇಕು"

"ಪ್ರಭು, ನಿಮ್ಮನ್ನು ಬಲಿ ಕೊಡಬೇಕೇ? ಅಯ್ಯೋ! ಇದೆಂತಹ ಬೇಡಿಕೆ ಪ್ರಭು? ಅದಿಲ್ಲದೆ ಪ್ರಪಂಚವನ್ನುಳಿಸುವುದು ಸಾಗದೇ ಪ್ರಭು. ನಾವು ಹನ್ನೆರಡು ಮಂದಿ ಶಿಷ್ಯರಿದ್ದೇವೆ. ನಮ್ಮೆಲ್ಲರ ಬಲಿ ಕೊಟ್ಟರೆ ಸಾಲದೇ? ಪ್ರಪಂಚವನ್ನುಳಿಸಲು ನೀವೇ ಬಲಿಯಾಗಬೇಕೇ?"

"ಹೌದು, ಜುಡಾಸ್. ನನ್ನ ಮನಸ್ಸು ಎಷ್ಟು ರೋಸಿಹೋಗಿದೆ ಗೊತ್ತೇ? ಒಂದೊಂದು ಬಾರಿ ನನಗೂ ಅನಿಸುತ್ತೆ. ಸ್ವರ್ಗದಲ್ಲಿರುವ ನನ್ನ ತಂದೆ—ದೇವದೇವ ಕೂಡ ನನ್ನನ್ನು ಮರೆತುಬಿಟ್ಟನೇನೋ ಎಂದು. ಆದರೇನು ಮಾಡುವುದು? ಇಷ್ಟು ವರ್ಷ ನಾವು ಬೋಧಿಸಿದೆವು. ಪ್ರೇಮದ ತತ್ವ ಬೋಧಿಸಿ ನಾವು ಬಡವಾದೆವೇ ಹೊರತು, ಕೇಳಿದವರಾರೂ ಬಲವಂತರಾಗಲಿಲ್ಲ. ಇಷ್ಟು ದಿನ ನಾವು ನಡೆಸಿದುದೆಲ್ಲಾ ನೀರಿನಲ್ಲಿ ಒರೆದ ಒರಹವಾಗಿ ಹೋಗುತ್ತದೆ. ಈ ಜನರ ಅಜ್ಞಾನದಿಂದ ನನಗೂ ಅತ್ಯಂತ ಬೇಸರವಾಗಿದೆ. ಹಾಗೆಯೇ ಬರಿಯ ಬೋಧನೆಯಿಂದಲೇ ಜನರನ್ನು ಪ್ರೇಮದ ಹಾದಿಗೆ ತರಬಹುದೆಂದಿತ್ತು- ಆದರೆ ಈಗ ಅದರಿಂದ ಏನೂ ಉಪಯೋಗವಾಗಿಲ್ಲ. ನಾವು ಹೋದ ಹೋದಲ್ಲಿ ಜನ ನಮ್ಮನ್ನು ಕೇಳುತ್ತಾರೆ. ಆದರೆ ಕೇಳಿದೊಡನೆಯೇ ಮರೆಯುತ್ತಾರೆ. ಈಗ ಅವರನ್ನುಳಿಸಲು ಒಂದೇ ಮಾರ್ಗ!"

"ಅದೇನು ಪ್ರಭು?"

"ರಕ್ತತರ್ಪಣ. ನನ್ನ ರಕ್ತಹರಿಸಿ ಅದರ ಪಾಪಗಳನ್ನು ತೊಳೆಯಬೇಕು. ಅವರ ಪಾಪಗಳನ್ನೆಲ್ಲಾ ನನ್ನ ಮೇಲೆ ತೆಗೆದುಕೊಳ್ಳಬೇಕು. ಅವರ ಪಾಪಗಳಿಗಾಗಿ ನಾನು ನೋವನನುಭವಿಸಬೇಕು. ಅದೊಂದೇ ಈ ಜಗತ್ತಿನ ಜನರನ್ನೆಚ್ಚರಿಸುವ ಮಾರ್ಗ. ಅದರಿಂದ ಮಾತ್ರವೇ ಅವರ ಹೃದಯದಲ್ಲಿ ಪ್ರೇಮ ಬೆಳೆಯಲು ಸಾಧ್ಯ. ಅದಕ್ಕಾಗಿ ನೀನು ನನಗೆ ನೆರವಾಗಲಾರೆಯಾ, ಜುಡಾಸ್?"

"ಪ್ರಭು ಇದನ್ನು ಹೇಗೆ ಒಪ್ಪಲಿ ಪ್ರಭು. ಕೈಯಾರ ತನ್ನ ಕೂಸನ್ನೇ ಕೊಲ್ಲಲು ಯಾವ ತಾಯಿ ತಾನೇ ಒಪ್ಪುವಳು ಪ್ರಭು?"

"ಜಗತ್ತಿಗೆ ತಾಯಿಯಾಗುವ ಹೃದಯವೈಶಾಲ್ಯಕ್ಕಾಗಿ ತನ್ನದೆಲ್ಲವನ್ನೂ ಬಲಿ ಕೊಡುವವಳೇ ನಿಜವಾದ ತಾಯಿ. ಜುಡಾಸ್. ಇದು ಕೊಲೆಯಲ್ಲ, ಜುಡಾಸ್. ಜನ್ಮ!"

"ಜನ್ಮವೇ, ಪ್ರಭು?"

"ಹೌದು, ಜುಡಾಸ್. ಮಗು ತಾಯಿಯ ಬಸುರಿನಲ್ಲಿ ಒಂಬತ್ತು ತಿಂಗಳು ಕಳೆಯುತ್ತದೆ. ತಾಯಿಗೆ ಅದು ಕಟ್ಟಿಕೊಂಡಿರುತ್ತದೆ. ತಾಯಿಯ ದೇಹಕ್ಕೆ ಅದು ಅಂಟಿಕೊಂಡಿರುತ್ತದೆ. ತಾಯಿಗೆ ಅದನ್ನು ಬಿಡುವ ಮನಸ್ಸಿಲ್ಲ. ಆದರೆ ಕೂಸಿಗೂ ತನಗೂ ಇರುವ ಸಂಬಂಧವನ್ನು ತಾಯಿ ಕಡಿಯಬೇಕು. ಬಸುರಿನಲ್ಲಿ ಕಾಪಾಡಿದ ಜೀವವನ್ನು ಹೊರ ಜಗತ್ತಿಗೆ ಕೊಡಬೇಕು. ಈ ಕಾರ್ಯ ಬಹು ಕಠಿಣವಾದುದು. ತಾಯಿ ಅದಕ್ಕಾಗಿಯೇ ಕೂಸು ಹುಟ್ಟುವಾಗ ಅತಿ ನೋವಿನಿಂದ ನರಳುವುದು. ಆದರೆ ತನ್ನೊಳಗಿಂದ ಪ್ರಪಂಚಕ್ಕೆ ಕೊಟ್ಟಮೇಲೆ ತಾಯಿಯ ಆನಂದಕ್ಕೆ ಕೊನೆಯೆಲ್ಲಿ? ಆಕೆ ಆ ಕೂಸಿಗೊಂದಕ್ಕೆ ತಾಯಿಯಲ್ಲ. ಜಗತ್ತಿಗೇ ತಾಯಿ! ನೀನೂ ಅಂತಹ ತಾಯಿಯಾಗಲಾರೆಯಾ?"

"ಪ್ರಭು—"

"ಇನ್ನೂ ಅನುಮಾನವೇ, ಜುಡಾಸ್? ನಾನು ಜಗತ್ತಿಗೆ ಬಂದ ಕಾರ್ಯ ಪೂರ್ಣವಾಗಬಾರದೆಂದೇ ನಿನ್ನ ಅಭಿಪ್ರಾಯ? ಪೂರ್ಣ

ವಾಗಲು ಇದೊಂದೇ ಮಾರ್ಗ. ಈಗ ನನ್ನ ಒಂದು ಹನಿ ರಕ್ತ ತೊಟ್ಟಿಕ್ಕಿದರೆ ಪ್ರಪಂಚದ ಒಂದೊಂದು ಜನಾಂಗದ ಜೀವವುಳಿಯುವುದು. ಇಲ್ಲದಿದ್ದರೆ ಮಾನವ ಮಾನವನಾಗುವುದನ್ನು ಮರೆತುಬಿಡುತ್ತಾನೆ. ಇನ್ನೂ ಮೃಗವಾಗಿಯೇ ಉಳಿಯುತ್ತಾನೆ. ಅದಕ್ಕಾಗಿ, ನನಗಾಗಿ ನನ್ನನ್ನು—"

"ಪ್ರಭು—ಆಗಲಿ, ಪ್ರಭು"

"ಜುಡಾಸ್, ನೀನಿಂದು ನಿಜವಾದ ತ್ಯಾಗಿ. ಯಾರೂ ಮಾಡದ ತ್ಯಾಗವನ್ನು ನೀನುಮಾಡಿರುವೆ. ಜಗತ್ತು ನಿನ್ನನ್ನು ದೂಷಿಸಲಿ. ಆದರೆ ನೀನು ಮಾತ್ರ ನಿಷ್ಕಳಂಕ. ನೀನು ನಿಜವಾದ ತಾಯಿ. ಸ್ವರ್ಗ ಸಾಮ್ರಾಜ್ಯದ ಜನ್ಮದ ಕೀರ್ತಿಯಷ್ಟೂ ನಿನ್ನದು. ನಿನ್ನ ಹೃದಯ ವೈಶಾಲ್ಯ ಜಗತ್ತಿಗೆ ಬರಲಿ. ನಿನ್ನ ಪ್ರೇಮ ಪ್ರಪಂಚದಲ್ಲಿ ಮೊಳೆಯಲಿ. ನಿನ್ನ ಹೃದಯದ ತಾಯ್ತನ ಎಲ್ಲೆಲ್ಲೂ ಮೂಡಲಿ. ನಿನ್ನ ತ್ಯಾಗ ಎಲ್ಲರ ರಕ್ತದಲ್ಲೂ ಬೆರೆಯಲಿ."

ಯೇಸು ಜುಡಾಸನನ್ನಪ್ಪಿಕೊಂಡುಬಿಟ್ಟ. ತೊಡೆಯಮೇಲೆ ಮಲಗಿದ್ದ ಯೇಸುವಿನ ಕೈಗಳೆರಡೂ ಜುಡಾಸನ ಕೊರಳಸುತ್ತಸುತ್ತಿದವು. ಜುಡಾಸ್ ಕಂದಿದ ಮುಖದಿಂದ ಬಾಗಿ ಯೇಸುವಿನ ಹಣೆಯಮೇಲೆ ಮಮತೆಯಿಂದ, ವಾತ್ಸಲ್ಯದಿಂದ ಮುತ್ತಿಕ್ಕಿದ. ತಾಯಿಹಸು ಅದೇ ತಾನೆ ಈದ ಎಳಗರುವನ್ನು ನೆಕ್ಕುವಾಗಿನ ವಾತ್ಸಲ್ಯ. ನೋವು ಕೂಡಿದ ನಲುಮೆ ಆ ಮುತ್ತಿನಲ್ಲಿತ್ತು.

ಅದಾದಮೇಲಿನ ಎರಡು ದಿನವನ್ನು ಯೇಸು ಬಹಳ ಸಂತೋಷದಿಂದ ಕಳೆದ. ಹಿಂದೆಂದೂ ಕಾಣದ ಆನಂದ, ಕಳೆ ಅವನ ಮುಖದಲ್ಲಿ ಮಿರುಗುತ್ತಿತ್ತು. ಅವನ ಸುತ್ತಲಿದ್ದ ಎಲ್ಲರಿಗೂ ಅದು ಹರಡಿಕೊಂಡಿತ್ತು. ಅವನ ಹತ್ತಿರ ಬಂದ ಯಾರಿಗೇ ಆಗಲಿ ಆ ನಗೆಯ ಸೆಳೆತ ತಡೆಯಲಾಗುತ್ತಿರಲಿಲ್ಲ. ಅಂದಿನವರೆಗೂ ಪೀಟರ್ ಮೊದಲಾದ ಶಿಷ್ಯರು ಯೇಸುವಿನಲ್ಲಿ ಈ ಆನಂದದ ಹಿಗ್ಗನ್ನು ಕಂಡಿರಲಿಲ್ಲ. ಈ ಆನಂದ ಏತಕ್ಕೆಂಬುದು ಅವರಿಗೆ ತಿಳಿದಿರಲಿಲ್ಲ. ಮೂರು ದಿನದ ಅನಂತರ ಏನೋ ಆಗಬೇಕು. ಸುಮಾರು ಆ ಪವಾಡಕ್ಕೆ ಮುನ್ನುಡಿಯಾಗಿ ಈ ಹಿಗ್ಗೆಂದು ಅವರೂ

ಅದರಲ್ಲಿ ಸೇರಿಹೋದರು. ಆದರೆ ಜುಡಾಸನ ಮುಖದಲ್ಲಿ ಮಾತ್ರ ಎಂದಿಗಿಂತ ಹೆಚ್ಚು ಗಾಂಭೀರ್ಯ. ಗೂಢವಾದ ಯಾವುದೋ ಚಿಂತೆಯನ್ನಿಟ್ಟುಕೊಂಡಂತೆ ಗಹನವಾಗಿತ್ತು ಮುಖ. ಕಣ್ಣುಗಳ ಆಳದಲ್ಲಿ ಯಾವುದೋ ದುಗುಡ ಮನೆ ಮಾಡಿಕೊಂಡಿತ್ತು. ಆದರೆ ಅಲ್ಲಿಂದಲೂ ಯಾವುದೋ ಅಪೂರ್ವ ತೇಜಸ್ಸು ಪದೇಪದೇ ಮಿಂಚುತ್ತಿತ್ತು. ಜುಡಾಸನ ಮನಸ್ಸಿಗಿನ್ನೂ ಶಾಂತಿಯಿರಲಿಲ್ಲ. ಒಪ್ಪುವಾಗಲೇನೋ ಒಪ್ಪಿದ. ಆದರೆ ಮನಸ್ಸಿನಲ್ಲಿ ಮಹಾಸಂಗ್ರಾಮ ಸಾಗುತ್ತಿತ್ತು. ಅಯ್ಯೋ! ಎಂತಹ ಕಾರ್ಯ! ಜಗತ್ತನ್ನು ಉಳಿಸಲು ಬಂದವನ ಅಳಿವಿಗೆ ನಾನು ಅಡಿಗಲ್ಲಾಗಬೇಕೇ ಎಂದು ಮರುಗು. ಅವನ ಅಳಿವಿನಿಂದಲೇ ಜಗತ್ತಿನ ಉಳಿವು. ಅದೂ ಅವನಾಗಿಯೇ ಹೇಳಿದುದು. ಅಂದಮೇಲೆ ತಾನೊಲ್ಲೆನೆನ್ನುವುದಾದರೂ ಹೇಗೆ? ಇಷ್ಟಾಗಿ ಯೇಸು ಅಷ್ಟೊಂದು ಕರುಣೆಯಿಂದ, ಅಷ್ಟೊಂದು ದೈನ್ಯದಿಂದ, ಕಣ್ಣೀರು ಕರೆದು ತನ್ನನ್ನು ಬೇಡಿಕೊಂಡಿದ್ದ. ಯೇಸುವಿನ ಮಾತಿಗೆ ಮರು ಮಾತಾಡಲಾಗದೆ ತಾನೊಪ್ಪಿದ. ಮಾತು ಕೊಟ್ಟ. ಈಗ ಕೊಟ್ಟಮಾತನ್ನು ಮುರಿಯುವುದಾದರೂ ಹೇಗೆ? ಅದೂ ತನ್ನ ಪ್ರಭುವಿಗೆ ಕೊಟ್ಟ ಮಾತು. ಪ್ರಭುವಿಗೆ ತನ್ನನ್ನೇ ತಾನು ಅರ್ಪಿಸಿಕೊಂಡಾಗ ಪ್ರಭು ಹೇಳಿದುದನ್ನೆಲ್ಲ ಮಾಡಬೇಡವೇ? ಅಂತಹುದರಲ್ಲಿ ಪ್ರಭುವಿಗೆ ಒಪ್ಪಿಗೆ ಕೊಟ್ಟು ಅದನ್ನು ಮಾಡದಿದ್ದರೆ ಹೇಗೆ? ಆದರೆ ಈ ಬಗೆಯ ಸಮಾಧಾನವನ್ನೆಷ್ಟು ಹೇಳಿಕೊಂಡರೂ ಮನಸ್ಸು ಮಾತ್ರ ಒಂದೇ ಸಮನಾಗಿ ಮಿಡುಕುತ್ತಿತ್ತು. ಯಾರೂ ಮಾಡದ ಕೆಲಸ. ಇದು ನೀಚಕಾರ್ಯವೆಂದು ತನ್ನ ಮೇಲೆ ತನಗೇ ಕೋಪ ಬಂತು. ಆದರೆ ಅದು ಆರಲೇನೂ ಕಾಲವಿಲ್ಲ. ಪ್ರಭುವಿನ ಕಾರ್ಯ ಮಾಡುವುದು ನನ್ನ ಕೆಲಸ. ಎಲ್ಲ ಕಾರ್ಯದ ಹೊಣೆಯೂ ಅವನ ಮೇಲೆಯೇ. ಪ್ರಭುವೇ ಹೇಳಲಿಲ್ಲವೇ? ನೂರು ಜನರ ಪಾಪವನ್ನು ತಾನೇ ಹೊತ್ತು ಪ್ರಪಂಚದ ಮುಂಬರುವ ಜನಾಂಗಗಳ ಪಾಪವನ್ನೆಲ್ಲಾ ತನ್ನ ರಕ್ತದಿಂದಲೇ ತೊಳೆಯುವೆನೆಂದು ಯೇಸು ಭರವಸೆ ನೀಡಲಿಲ್ಲವೇ? ಮಾಡುವವನು ನಾನು ನಿಮಿತ್ತ ಮಾತ್ರ. ಮಾಡಿಸುವವನು ಯೇಸು, ಎಂದು ಮನಸ್ಸಿಗೆ

ಸಮಾಧಾನ ತಂದುಕೊಳ್ಳುತ್ತಿದ್ದ. ಆದರೂ ಈ ಸಮಾಧಾನದ ತಿಳಿ ನೀರಿನಲ್ಲಿ ಒಂದೊಂದು ಅಸಮಾಧಾನದ ಸುಳಿ ತೋರಿಕೊಂಡು ನೀರನ್ನು ಕದಡುತ್ತಿತ್ತು.

ಅದೇ ಕೊನೆಯ ಊಟ. ಯೇಸು ಇದುವರೆಗೂ ತಲೆಗೆ ಎಣ್ಣೆ ಸೋಕಿಸದವನು ಅಂದು ಆ ಮನೆಯ ಯಜಮಾನಿ ತಂದ ಎಣ್ಣೆಯನ್ನು ಸ್ವೀಕರಿಸಿದ. ತಲೆಗೆ ಎಣ್ಣೆ ಹಚ್ಚಿ ಅಂದು ವೈಗೆಲ್ಲಾ ಮಂಗಳಸ್ನಾನ ಮಾಡಿಕೊಂಡ. ಹಿಂದೆಂದೂ ಕಾಣದಂತೆ ಅಂದು ಮದುವಣಿಗನಷ್ಟು ಆಸಕ್ತಿಯಿಂದ ತನ್ನ ಉಡುಪನ್ನು ನೋಡಿಕೊಂಡ. ಎಲ್ಲರೊಂದಿಗೂ ನಗುನಗುತ್ತಾ ಮಾತನಾಡಿದ. ಕೊನೆಯ ಊಟಕ್ಕೆ ಕುಳಿತಾಗ ಪೀಟರನನ್ನು ತನ್ನ ಪಕ್ಕದಲ್ಲಿ ಕೂರಿಸಿಕೊಂಡು ಅವನನ್ನು ಹಾಸ್ಯಮಾಡಿದ. ಎದುರಿಗಿದ್ದ ಜುಡಾಸನ ಮುಖದ ಕಡೆ ಒಮ್ಮೆ ಕೂಡ ತಿರುಗಿ ನೋಡಲಿಲ್ಲ. ಜುಡಾಸ್ ಮೌನವಾಗಿ ಆಳವಾದ ಯೋಚನೆಯಲ್ಲಿ ಮುಳುಗಿ ಮುಂದಿದ್ದ ಊಟವನ್ನು ಮರೆತು ಕುಳಿತಿದ್ದ. ಅವನ ಮನಸ್ಸಿನ ಕೋಲಾಹಲ ಯೇಸುವಿಗೆ ಚೆನ್ನಾಗಿ ಗೊತ್ತು. ಆ ಅಶಾಂತಿ ಬೇಗನೆ ಇಳಿಯುವುದೆಂದೂ ಯೇಸುವಿಗೆ ಗೊತ್ತು. ಅದು ತಾನಾಗಿಯೇ ತಗ್ಗಬೇಕೆಂದೂ ಗೊತ್ತು. ಆದರಿಂದಲೇ ಜುಡಾಸನ ಕಡೆಗೊಮ್ಮೆಯೂ ತಿರುಗಿ ಕೂಡ ನೋಡಲಿಲ್ಲ. ಆದರೆ ಹೆಚ್ಚು ಮಾತೆಲ್ಲ ಪೀಟರನೊಂದಿಗೇ!

"ಪೀಟರ್"

"ಪ್ರಭು"

"ನನ್ನ ಕಾಲ ಮುಗಿಯಿತು. ಇನ್ನು ನಿನ್ನ ಕಾಲ ಆರಂಭ. ಪ್ರೇಮದ ಮತವನ್ನು ನೀನು ಎಲ್ಲೆಲ್ಲೂ ಪ್ರಸಾರ ಮಾಡಬೇಕು. ನನ್ನ ತಂದೆಯಿಂದ ನಾನು ಬಂದು ಇಲ್ಲಿ ಇದ್ದುದಾಯಿತು. ಇನ್ನು ಮತ್ತೆ ನಾನು ನನ್ನ ತಂದೆಯ ಬಳಿಗೇ ಹಿಂದಿರುಗಬೇಕು. ನಾನು ನಡೆಸಿದ ಕಾರ್ಯವನ್ನು ನೀವು ನಡೆಸಬೇಕು. ನನ್ನಲ್ಲಿ ನೀವು ಪ್ರೇಮ ತೋರಿದಿರಿ. ಅದಕ್ಕಾಗಿ ದೇವದೇವನಿಗೆ ನಿಮ್ಮಲ್ಲಿ ಪ್ರೇಮವಿದೆ. ನನ್ನಲ್ಲಿ ನೀವು ನಂಬಿಕೆಯಿಟ್ಟಿರಿ. ಅದಕ್ಕಾಗಿ ನೀವೇನು ಬೇಡಿದರೂ ಅದು ಸಿದ್ಧಿಯಾಗುತ್ತದೆ. ಆದರೆ ನನ್ನಲ್ಲಿ ಮಾತ್ರ ನಂಬಿಕೆ ಬಿಡಬೇಡಿ."

"ಖಂಡಿತವಾಗಿಯೂ ಇಲ್ಲ ಪ್ರಭು. ನಿಮ್ಮಲ್ಲಿ ನನಗೆ ಅಚಲ ನಂಬಿಕೆಯಿದೆ. ಎಂದೆಂದಿಗೂ ನಿಮ್ಮಲ್ಲಿ ನನ್ನ ನಂಬಿಕೆ ಹೋಗದು."

ಯೇಸು ಈ ಮಾತು ಕೇಳಿ ನಸುನಕ್ಕ.

"ಪೀಟರ್, ಕೋಳಿ ಕೂಗುವುದರಲ್ಲಿ ಮೂರು ಬಾರಿ ನನ್ನಲ್ಲಿ ನಂಬಿಕೆ ಕಳೆದುಕೊಳ್ಳುವೆ. ಆದರೂ ನನ್ನ ತತ್ವಪ್ರಚಾರ ನಿನ್ನಿಂದ ಆಗಬೇಕು."

ಪೀಟರ್ ಹೆಚ್ಚು ಮಾತಾಡಲಿಲ್ಲ. ಮತ್ತಾರಿಗೂ ಮಾತಾಡುವ ಧೈರ್ಯ ಬರಲಿಲ್ಲ. ಪೀಟರನಂತಹ ಶ್ರೇಷ್ಠ ವ್ಯಕ್ತಿಯೇ ನಂಬಿಕೆ ಕಳೆದು ಕೊಳ್ಳುವನೆಂದರೆ ತಮ್ಮ ಪಾಡೇನೋ ಎಂದು ಅವರಿಗೆ ಹೆದರಿಕೆಯಾಯಿತು. ಅವರೆಲ್ಲರ ಹೃದಯಗಳಲ್ಲೂ ಹೆದರಿಕೆ ಹೆಜ್ಜೆಯಿಟ್ಟಿತು. ಜುಡಾಸ್ ಮಾತ್ರ ತನ್ನ ಚಿಂತೆಯ ಜೇಡನ ಬಲೆಯಲ್ಲಿ ಸಿಕ್ಕಿಕೊಂಡು ತಪ್ಪಿಸಿಕೊಳ್ಳಲಾರದೆ ಒದ್ದಾಡುತ್ತಿದ್ದ.

ಊಟ ಮುಗಿದ ಮೇಲೆ ಯೇಸು ನೇರವಾಗಿ ಮನೆಯ ಬಾಗಿಲಿನಿಂದ ಹೊರಗೆ ನಡೆದ. ಬೀದಿಯ ಕಡೆಗೇ ದಿಟ್ಟಿಸುತ್ತಾ ನಿಂತ ಜುಡಾಸನ ಬಳಿಗೆ ಬಂದ. ಬೆನ್ನಮೇಲೆ ಮೆಲ್ಲನೆ ಕೈಯಾಡಿಸಿದ.

"ಜುಡಾಸ್"

"ಪ್ರಭು"

ಜುಡಾಸ್ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದ. ಯೇಸು ಅವನನ್ನು ತನ್ನೆದೆಗಾನಿಸಿಕೊಂಡ. ಮೆಲ್ಲನೆ ಅವನ ತಲೆ ನೇವರಿಸುತ್ತಾ ಸಮಾಧಾನ ನೀಡಿದ. ಒಂದೆರಡು ನಿಮಿಷದ ನಂತರ ಜುಡಾಸನ ಮನಸ್ಸು ಕೊಂಚ ಸಮಾಧಾನಗೊಂಡಿತು.

"ಪ್ರಭು, ನೀವು ಬಿಟ್ಟುಹೋದ ಮೇಲೆ ನಾನಿಲ್ಲಿರಲಾರೆ ಪ್ರಭು. ನಿಮ್ಮೊಂದಿಗೇ ನಾನೂ ಬರುತ್ತೇನೆ"

"ಜುಡಾಸ್, ಅದು ಹೇಗೆ ಸಾಧ್ಯ. ನೀನೇ ಯೋಚಿಸು. ಈಗ ನಾನಲ್ಲದೆ ಮತ್ತಾರೂ ಪೈಲೆಟನ ಕೈಗೆ ಸಿಕ್ಕಿಕೊಳ್ಳಲಾಗದು. ನೀನೂ ನನ್ನೊಂದಿಗೆ ಸೇರಿಕೊಳ್ಳುವೆ, ಯೋಚಿಸಬೇಡ"

"ಪ್ರಭು, ನೀವಿಲ್ಲದ ಮೇಲೆ ನನಗೆ ಒಂದು ನಿಮಿಷಕೂಡ ಇರಲು ಆಗದು, ಪ್ರಭು. ಇದೊಂದು ಕರುಣೆ ತೋರಬೇಕು."

"ಹುಂ ಆಗಲಿ, ಹೋಗಿ ಪೈಲೆಟನ ಸೈನಿಕರನ್ನು ಕರೆದುತಾ ಹೋಗು, ಇದೇ ನಮ್ಮಿಬ್ಬರ ಕೊನೆಯ ಊಟ ಮುಗಿಯಿತು. ಈಗ ಕೊನೆಯ ಸಂವಾದ. ಕೊನೆಯ ಪ್ರೇಮಲ ಆಲಿಂಗನ. ಎಲ್ಲಿ—ಇದೋ ನನ್ನ ಕ್ಷೇಮದ ಕುರುಹು"

ಯೇಸು ಜುಡಾಸನ ಎರಡು ಕೆನ್ನೆಗಳ ಮೇಲೂ ಮುತ್ತಿಟ್ಟ. ಜುಡಾಸ್ ಮೆಲ್ಲನೆ ಯೇಸುವಿನ ಹಣೆಯ ಮೇಲೆ ಮುತ್ತಿಟ್ಟು ಅಲ್ಲಿಂದ ಹೊರಟು ಕತ್ತಲಿನಲ್ಲಿ ಮಾಯವಾದ.

ಯೇಸು ಮನೆಯೊಳಕ್ಕೆ ಬಂದು ಪೀಟರನೊಂದಿಗೆ ಮಾತನಾಡುತ್ತಿದ್ದಂತೆಯೇ ಪೀಟರನಿಗೆ ತನ್ನೆಲ್ಲ ಶಕ್ತಿಯನ್ನು ಧಾರೆಯೆರೆದುಕೊಟ್ಟ. ದೇವದೇವನ ದಯದಿಂದ, ತನ್ನಲ್ಲಿ ಅವನಿಗಿರುವ ನಂಬಿಕೆಯಿಂದ ಅವನಿಂದಾಗದ ಕೆಲಸವಾವುದೂ ಇಲ್ಲವೆಂದು ಪೀಟರನಿಗೆ ಹೇಳಿದ. ಸ್ವರ್ಗದ ಬೀಗದ ಕೈ ನಿನ್ನ ಕೈಯಲ್ಲಿದೆಯೆಂದೂ ಹೇಳಿದ. ಇದರಿಂದ ಪೀಟರನ ಹೃದಯ ಹಿಗ್ಗಿನಲ್ಲಿ ಅರಳಿತು. ಯೇಸುವಿಗೆ ನಮ್ರತೆಯಿಂದ ಬಾಗಿದ. ಯೇಸು ಉಳಿದ ಶಿಷ್ಯರನ್ನು ಉದ್ದೇಶಿಸಿ ಅವರವರ ಕೆಲಸ ತಿಳಿಸಿದ. ಒಬ್ಬೊಬ್ಬನಿಗಾಗಿ ಹೇಳಿ ಮುಗಿಸಿದ ಮೇಲೆ ಪೀಟರನಿಗೆ ಇದ್ದಕ್ಕಿದ್ದಂತೆ ನೆನಪಾಯಿತು. ಊಟವಾದಷ್ಟು ಹೊತ್ತಿನಿಂದ ಜುಡಾಸ್ ಎಲ್ಲಿಯೋ ಕಾಣಲಿಲ್ಲ. ಪಕ್ಕದಲ್ಲಿದ್ದ ಥಾಮಸನನ್ನು ಕೇಳಿದ. ಅವನೂ ತಿಳಿಯದೆಂದ. ಪೀಟರನಿಗೇಕೋ ಕೊಂಚ ಅನುಮಾನವಾಯಿತು. ಕಳವಳವೂ ಆಯಿತು. ಜುಡಾಸ್ ಎಲ್ಲೋ ದ್ರೋಹಿಯಾಗಿರಬೇಕು. ಯೇಸುವನ್ನು ಪೈಲೆಟ್‌ರಾಜನಿಗೆ ಬಿಟ್ಟುಕೊಟ್ಟಿರಬೇಕೆಂದು ಹೆದರಿಕೆಯಾಯಿತು. ನೋಡೋಣವೆಂದು ಬಾಗಿಲಕಡೆ ಹೊರಡುವ ವೇಳೆಗೆ ಜುಡಾಸ್ ಒಳಗೆಬಂದ. ಯೇಸು ಅವನು ಬಂದೊಡನೆಯೇ ಅವನಕಡೆ ತಿರುಗಿದ. ಆನಂದದ ಎಳೆನಗು ನಕ್ಕು ಅವರನ್ನು ಕರೆದ. ಆಗಲೇ ನಡೆದ ಸಂಕೇತದಂತೆ ಜುಡಾಸ್ ಬಂದು ಯೇಸುವಿನ ಹಣೆಗೆ ಮುತ್ತಿಟ್ಟ. ಪೈಲೆಟನ ಅಧಿಕಾರಿಗಳು, ಸೈನಿಕರು ಬಂದು ಯೇಸುವನ್ನು ಬಂಧಿಸಿದರು.

ಪೀಟರ್ ಹೆದರಿಕೆಯಿಂದ ಯೇಸುವನ್ನು ಬಿಟ್ಟು ಬಾಗಿಲಿಗೆ ಓಡಿದ. ಅಲ್ಲಿದ್ದವರಲ್ಲೊಬ್ಬ ಅವನನ್ನು ಕೇಳಿದ—"ನೀನೂ ಈ ಯೇಸುವಿನ ಶಿಷ್ಯನಲ್ಲವೇ ?" ಎಂದು.

ಪೀಟರ್ ಹಿಂದು ಮುಂದು ನೋಡದೆ "ಅವನಾರೋ ನನಗೆ ತಿಳಿಯದು" ಎಂದ.

ಎರಡನೆಯ ಬಾರಿ ಅಲ್ಲಿದ್ದ ಹೆಂಗಸೊಬ್ಬಳು "ನೀನು ಯೇಸುವಿನ ಶಿಷ್ಯ" ಎಂದಳು.

ಪೀಟರ್ ಗಾಬರಿಯಿಂದ "ಇಲ್ಲ, ಇಲ್ಲ, ನಾನು ಅವನನ್ನು ಕಂಡೇ ಇಲ್ಲ" ಎಂದ.

ಮೂರನೆಯ ಬಾರಿ ಪೈಲೆಟನ ಅಧಿಕಾರಿ "ನೀನೂ ಈ ಯೇಸುವಿನ ಶಿಷ್ಯನೋ ?" ಎಂದುಗುಡುಗಿದ.

"ಇಲ್ಲ, ಇಲ್ಲ, ನನಗೂ ಅವನಿಗೂ ಪರಿಚಯವೇ ಇಲ್ಲ" ಎಂದು ಪೀಟರ್ ನಡುಗುತ್ತ ಹೇಳಿದ.

ಯೇಸು ಸೈನಿಕರ ಮಧ್ಯೆ ಸೆರೆಯಾಳಾಗಿದ್ದವನು ಇದನ್ನು ನೋಡಿ ನಸುನಕ್ಕ. ಬಾಗಿಲಿನ ಹಿಂದೆ ಮುಖ ಮುಚ್ಚಿಕೊಂಡು ಜುಡಾಸ್ ಅಳುತ್ತಿದ್ದ.

ಯೇಸು ಶಿಲುಬೆಗೇರಿದಾಗ ಜುಡಾಸ್ ಅಲ್ಲಿರಲಿಲ್ಲ. ಯೇಸು ತನ್ನ ತೊಡೆಯ ಮೇಲೆ ತಲೆಯಿಟ್ಟು ಮಲಗಿ, ತನ್ನ ತ್ಯಾಗ ಬೇಡಿದ ಜಾಗಕ್ಕೆ ಬಂದಿದ್ದ. ತ್ಯಾಗಮಾಡಿಯಾದ ಮೇಲೆ ಅವನಿಗೆ ಅಲ್ಲಿರಲು ಸಾಗದಾಯಿತು. ಅಲ್ಲಿಂದ ತಪ್ಪಿಸಿಕೊಳ್ಳಬೇಕೆಂದು ಓಡಿದ. ಹುಚ್ಚುಹುಚ್ಚಾಗಿ ನಡೆದ. ಕಾಲೊಯ್ದ ಕಡೆ ಸಾಗಿದ. ಕೊನೆಗೆ ಸುಸ್ತಾಗಿ ಅಲ್ಲಿಗೆ ಬಂದು ಆ ನದಿಯ ತೀರದಲ್ಲಿ ಬಿದ್ದಿದ್ದ. ತಲೆ ಗಿರ್ರನೆ ಸುತ್ತುತ್ತಿತ್ತು. ಅಯ್ಯೋ ! ಏನೋ ಮಾಡಿಬಿಟ್ಟೆ, ಆಗಿಹೋಯಿತು ! ಎಂದು ಹೃದಯ ಹೊಡೆದುಕೊಳ್ಳುತ್ತಿತ್ತು. ಎಷ್ಟೇ ಯತ್ನಿಸಿದರೂ ಮನಸ್ಸಿನ ಯೋಚನೆಗಳೊಂದೂ ಸ್ಪಷ್ಟವಾಗದು. ಏನೋ ದುಃಖ, ತಾಳಲಾರದ ನೋವು. ಅಪಾರವೇದನೆ ಉಕ್ಕಿಉಕ್ಕಿ ಉಮ್ಮಳಿಸಿ ಬರುತ್ತಿತ್ತು. ಇನ್ನೇನು ಯೇಸುವಿನ ಗತಿ ಆಗಿ

ಹೋಯಿತು. ಅದೂ ನನ್ನಿಂದ ಎಂದು ಹೃದಯ ಸಿಡಿಯುತ್ತಿತ್ತು. ಕಣ್ಣಿನ ಮುಂದೆ ಇದ್ದಕ್ಕಿದ್ದಂತೆ ಯೇಸುವಿನ ಮೂರ್ತಿ ಬಂದುನಿಂತಿತು. "ನಾನು ನೀನು ಒಂದೇ ಅಲ್ಲವೇ ಜುಡಾಸ್? ನೀನೂ ನನ್ನಲ್ಲಿ ಸೇರಿ ಹೋಗುವೆ" ಎಂದಿತು ಮೂರ್ತಿ. ನಸುನಗೆಯಮೂರ್ತಿ ಮಾಯ ವಾಯಿತು. ಮತ್ತೊಂದು ಮೂರ್ತಿ—ಶಿಲುಬೆಯ ಮೇಲೇರಿಸಿಡ ಮಾನವ ಯೇಸು. ಮುಳ್ಳಿನ ಕಿರೀಟಹೊತ್ತವನು. ಶಿಲುಬೆಯಮೇಲೆ ಯೆಹೂದಿಗಳ ರಾಜನೆಂದು ಬರೆದಿದೆ-ಅವನನ್ನು ಹಾಸ್ಯಮಾಡಲು! ಜನ ಅವನಮೇಲೆ ಉಗಿಯುತ್ತಿದಾರೆ. ಕಲ್ಲನ್ನೆಸೆಯುತ್ತಿದಾರೆ. ರಕ್ತ ಒಂದೇ ಸಮನಾಗಿ ತೊಟ್ಟಿಕ್ಕುತ್ತಿದೆ. ಆದರೆ ಮುಖದಲ್ಲಿ ಮಾತ್ರ ಅನಂತ ಶಾಂತಿ ಯಿದೆ.

"ಪ್ರಭು" ಎನ್ನುತ್ತಾ ಜುಡಾಸ್ ಮುನ್ನುಗ್ಗಿದ.
ನದಿಯ ಪ್ರವಾಹ ತನ್ನ ಆಲಿಂಗನದಲ್ಲಿ ಜುಡಾಸನನ್ನು ಸೇರಿಸಿಕೊಂಡಿತು.

---

# ವಿಷಚಕ್ರ

"ಚಂದ್ರು, ಒಳಗೆ ಬಾಮ್ಮ. ಮಳೆ ಬರುತ್ತೆ."

ತಾಯಿ ಕೂಗಿದುದನ್ನು ಕೇಳಿ ಚಂದ್ರು ನಕ್ಕ. ಒಳಕ್ಕೆ ಬರುವುದಿರಲಿ. ಪಕ್ಕದ ಮನೆಯ ಹುಡುಗಿ ವೇದಳೊಂದಿಗೆ ಆಡುತ್ತಿದ್ದುದನ್ನು ನಿಲ್ಲಿಸಲೂ ಇಲ್ಲ.

"ನೋಡೇ-ನಾನು ರೈಲಿನ ಇಂಜಿನ್ನು. ನೀನು ಡ್ರೈವರ್"

"ಇಲ್ಲಪ್ಪ. ನಾನು ಇಂಜಿನ್ನು."

"ನಿನಗೆ ಕೂಗೋದಕ್ಕಾಗೋಲ್ಲಮ್ಮ. ನೋಡಿದ್ಯಾ-ನಾನು ಇಂಜಿನ್ನು. ನೀನು ನನ್ನ ಹಿಂದೆ ಬರಬೇಕು. ಈ ಗೇಟು ಮೈಸೂರು. ಮಲ್ಲಿಗೆ ಇದೆಯಲ್ಲ ಅದು ಮದ್ರಾಸು—ಆಂ"

"ಊಂ"

ರೈಲು ಹೊರಟಿತು. ಇಂಜನ್ನಿನ ಜತೆಗೆ ಡ್ರೈವರ್ ಕೂಡ ಕೂಗಿದುದಾಯಿತು. ಮಕ್ಕಳಿಬ್ಬರೂ ಆಟದಲ್ಲಿ ಮೈಮರೆತಂತೆ ತಾಯಿ ಅವರ ಕಡೆಗೇ ನೋಡುತ್ತಾ ನಿಂತಿದ್ದಳು. ಬಾಗಿಲಿಗೆ ಒರಗಿಕೊಂಡು ನಿಂತು ಅವರ ಆಟದಲ್ಲೇ ಮಗ್ನಳಾಗಿದ್ದಳು.

ಚಂದ್ರುಗಿನ್ನೂ ಆರು ವರ್ಷ. ಆದರೂ ಎಷ್ಟು ಚುರುಕು. ಎಷ್ಟು ಬುದ್ಧಿವಂತ ಎಂದುಕೊಂಡಳು. ಮುದ್ದಾಗಿ, ಗುಂಡಾದ ಮುಖ. ಹಾಲುಗೆನ್ನೆ. ತುಂಬುಗಲ್ಲ. ವಿಶಾಲವಾದ ಹಣೆ. ಕಣ್ಣುಗಳಲ್ಲಿ ಚಕಮಕಿ. ಅದೇ ಬಗೆಯ ಹೊಳಪು. ಎಲ್ಲ ಅವರಂತೆಯೇ! ಅವರು!—ಸರಸಿಯ ಕಣ್ಣು ತೇಲುಗಣ್ಣಾಯಿತು. ಹನಿಯಾಡಿತು!

ಮಳೆ ಇದ್ದಕ್ಕಿದ್ದಂತೆ ಆರಂಭವಾಯಿತು. ಎದುರು ಮನೆಯ ಜಿಂಕ್ ಷೀಟಿನ ಮೇಲೆ ಕವಣೆ ಕಲ್ಲು ಬೀರಿದಂತೆ ಸದ್ದು ಆಗುತ್ತಿತ್ತು. ಪಟಪಟನೆ ಹನಿಗಳುದುರಿದುವು. ಸರಸಿ ಕಣ್ಣೊರೆಸಿಕೊಂಡು ಕೂಡಲೇ ಮಕ್ಕಳಿಬ್ಬರನ್ನು ಒಳಕ್ಕೆ ಕರೆದಳು.

"ಆಗಲೇ ಹೇಳಿದೆ. ಬೇಡವ್ರೋ ಅಂತ. ಹೋಗಿ ಒಳಗೆ ಆಡಿ ಕೊಳ್ಳಿ"

ಚಂದ್ರು ತನ್ನ ಜತೆಗಾತಿ ವೇದಳೊಂದಿಗೆ ಒಳಕ್ಕೋಡಿದ, ತನ್ನ ಹತ್ತಿರವಿರುವ ಆಟದ ಸಾಮಾನನ್ನು ಅವಳಿಗೆ ತೋರಿಸಲು. - ಸರಸಿ ಮಾತ್ರ ಅಲ್ಲಿಯೇ ನಿಂತು ನೋಡುತ್ತಿದ್ದಳು. ಅವಳ ದೃಷ್ಟಿ ಮಳೆಯ ಹನಿಗಳ ಮೂಲಕ ಮತ್ತೆಲ್ಲೋ ಹೋಗಿ ನಟ್ಟಂತಿತ್ತು.

"ಸರಸಿ! ಸರಸಿ! ಅಬ್ಬ, ಎಂತಹ ಮಳೆಯಪ್ಪ! ಕೊಡೆಯಿದ್ದರೂ ಏನೂ ಪ್ರಯೋಜನವಾಗಲಿಲ್ಲ."

"ಅಯ್ಯೋ! ಎಷ್ಟು ನೆನೆದಿದೀರಿ. ಹೋಗಿ ಬಟ್ಟೆ ಬದಲಾಯಿಸಿ ಕೊಳ್ಳೀಂದ್ರೆ. ಮೊದಲು ಈ ಒದ್ದೆ ಬಟ್ಟೆ ತೆಗೆದು ಹಾಕಿ. ಕಾಫಿ ಬಿಸಿ ಮಾಡ್ತೀನಿ"

"ಸದ್ಯ! ಮಹರಾಯತಿ. ಒಂದಿಷ್ಟು ಬಿಸಿ ಕಾಫಿ ಬಿದ್ದರೆ ಸಾಕು. ಆಫೀಸಿನಿಂದ ಹೊರಟಾಗ ಏನೂ ಇರಲಿಲ್ಲ. ಇದ್ದಕ್ಕಿದ್ದ ಹಾಗೆ ಒಳ್ಳೆ ಕವಣೆ ಕಲ್ಲು ಉದುರಿದ ಹಾಗೆ ಶುರುವಾಯ್ತು."

"ದಾರೀಲೇ ಎಲ್ಲಾದರೂ ನಿಂತುಕೋಬಹುದಾಗಿತ್ತು"

"ಬಹಳ ಹೊತ್ತಾಗಿ ಹೋಗಿತ್ತು. ಇದೂ ಅಲ್ಲದೆ ಛತ್ರಿ ಕೂಡ ಇತ್ತು. ನೀನು, ಪಾಪ ಮನೇಲಿ ಕಾದಿರ್ತೀಯ ಅಂತ—"

"ಅಯ್ಯೋ ಪಾಪ! ನಮ್ಮ ಮೇಲೆ ಎಷ್ಟೊಂದು ಕರುಣೆ! ಥಂಡಿಯಾಗ್ತಿತ್ತು. ಕಾಫಿ ಬೇಕಾಗಿತ್ತು. ಅದಕ್ಕೋಸ್ಕರ ಬಂದಿರಿ. ನಮಗೇನು ಗೊತ್ತಿಲ್ಲವೇ?

ಸರಸಿ ಹುಸಿ ಮುನಿಸಿನಿಂದ ಅಂದ ಮಾತಿಗೆ ಅವಳ ಗಂಡ ಜೋರಾಗಿ ನಕ್ಕುಬಿಟ್ಟ. ಸರಸಿಯೂ ದನಿಗೂಡಿಸಿದಳು. ಸಂಜೆಯಾಯಿ ತೆಂದರೆ ಅವನ ಬರವಿಗಾಗಿ ಕಾದು ಬಾಗಿಲ ಹತ್ತಿರವೇ ನಿಂತು ಅಷ್ಟು ದೂರದವರೆಗೂ ದಿಟ್ಟಿಸುವುದು ಅವಳ ಪರಿಪಾಠ. ದೂರದಲ್ಲಿ ಅವನು ಕಂಡ ಕೂಡಲೇ ಕಾಫಿ ಬಿಸಿಗಿಟ್ಟು ಓಡಿ ಬರುವುದು. ಬಾಗಿಲಲ್ಲೇ ಅವನನ್ನೆದುರುಗೊಳ್ಳುವುದು.

ಕಾಫಿ ಕುಡಿಯುತ್ತಾ ರಾಮು ಕುರ್ಚಿಯ ಮೇಲೆ ಕುಳಿತಿದ್ದ. ಸರಸಿ ಅವನ ಭುಜದ ಮೇಲೆ ಕೈ ಹಾಕಿಕೊಂಡು ಕುರ್ಚಿಯ ಎಡಗೈ ಮೇಲೆ ಕುಳಿತಿದ್ದಳು. ಇಬ್ಬರೂ ಹೊರಗೆ ಮಳೆಯ ಆಟೋಪವನ್ನು ನೋಡುತ್ತಿದ್ದರು.

"ಸರಸಿ, ಅಲ್ಲಿ ನೋಡು."

"ಏನೊಂದ್ರೆ ?"

"ಆ ಗುಬ್ಬಚ್ಚಿ ಮರಿ, ಈ ಮಳೆಯಲ್ಲಿ ಕೂಡ ಇಲ್ಲಿ ಬಂದು ಒದ್ದಾಡುತ್ತಿದೆ. ಮಲ್ಲಿಗೆ ಒಳ್ಳೆಯಲ್ಲಿ ಒಣಗಿದ ಕಡ್ಡಿಯನ್ನು ಕೊಕ್ಕಿನಲ್ಲಿ ಕಚ್ಚಿ ಕೀಳಲು ಯತ್ನಿಸಿದೆ. ಪಾಪ! ಆದರೆ—"

"ಹುಂ"

ಸರಸಿಯ ಮುಖ ಗಂಭೀರವಾಯಿತು. ರಾಮು ಕೂಡ ಒಂದು ನಿಮಿಷ ಮುಂದೆ ಮಾತಾಡಲಿಲ್ಲ.

"ಆದರೆ—ಅದಕ್ಕೆ ಅದರಲ್ಲೊಂದು ಸಂತೋಷವಿದೆ. ಗೂಡಿನಲ್ಲಿರುವ ಮರಿಗೆ ಬೆಚ್ಚಗಿರುವಂತೆ, ಹನಿ ಬೀಳದಂತೆ ಗೂಡು ಭದ್ರಪಡಿಸಬೇಡವೇ ?"

"ಹೂಂ—"

"ಎಲ್ಲರೂ ಹಾಗೆಯೇ ಅಲ್ಲವೇ ಸರಸಿ? ಗೂಡಿನಲ್ಲಿ ಯಾವುದಾದರೂ ನಮ್ಮದೆನ್ನುವ ಮಮತೆಯಿದ್ದರೆ ಏನು ಮಾಡಲೂ ಸಿದ್ಧ, ನೋಡು. ನೀನು ಮನೆಯಲ್ಲಿ ಕಾದಿದ್ದೀಯಾ ಅಂತ ನಾನು ಓಡಿಬರಲಿಲ್ಲವೇ ?"

ರಾಮು ನಕ್ಕು ಸರಸಿಯ ಕೆನ್ನೆ ನೇವರಿಸಿದ. ಸರಸಿಯ ಮನಸ್ಸು ಗಂಭೀರವಾಗಿತ್ತು.

"ಮರಿ—ಮಗು! ಗುಬ್ಬಚ್ಚಿಯಂತಹುದೇ ಮರಿಗಾಗಿ ಇಷ್ಟು ಮಾಡುವಾಗ, ಮನುಷ್ಯ ಏನು ತಾನೇಮಾಡುವುದಿಲ್ಲ!— ಅವರಿಗೆ ಈಗಲೇ ಹೇಳಿಬಿಡಲೇ-ಬೇಡವೇ? ಆಮೇಲೆ-ನನಗೇ ಇನ್ನೂ ಖಂಡಿತ ವಾಗಿಲ್ಲ; ಆದರೂ ಹೇಗೆತಾನೇ ಹೇಳಲಿ-ಅವರೇನೆನ್ನುವರೋ!"

ಸರಸಿಯ ಮುಖ ಗಂಭೀರವಾಗಿತ್ತು. ರಾಮುವಿನ ನಗೆಗೆ ಅವಳು ನಗಲಿಲ್ಲ.

"ಯಾಕೆ, ಸರಸಿ ?"

ಸರಸಿಗೆ ನಾಚಿಕೆಯಾಗಿ ಕೆನ್ನೆ ರಂಗೇರಿತು.

"ಏನೂ ಇಲ್ಲ"

"ಏನೋ ಯೋಚನೆ ಅ ಪುಟ್ಟತಲೇಲಿ. ನಮಗೆ ಹೇಳಬಾರದೋ ?"

"ಏನೂ ಇಲ್ಲ ಅಂದ್ರೆ"

ಸರಸಿ ಹೇಗಾದರೂ ಮಾಡಿ ಮಾತು ತಿರುಗಿಸಬೇಕೆಂದು ಆ ಕಡೆ ನೋಡಿದಳು. ಮೂಲೆಯಲ್ಲಿ ಜಿಮ್ಮಿ-ನಾಯಿಮರಿ ಮಲಗಿತ್ತು. ಛಳಿಯಲ್ಲಿ ನಡುಗುತ್ತಿತ್ತು.

"ನೋಡೀಂದ್ರೆ. ಷೀಬಾ ನಾಯಿ ಬರಲೇ ಇಲ್ಲ. ಪಾಪ! ಜಿಮ್ಮಿ ಒಂದೇಸಮನಾಗಿ ಒದ್ದಾಡಿತು. ಕಿರಿಚಿಕೊಳ್ಳುತ್ತಿತ್ತು ಆದರೆ ಷೀಬಾ ಕೇಳದಂತೆ ಓಡಿಹೋಯಿತು. ನಿನ್ನೆ ಮಧ್ಯಾಹ್ನ ಹೋದುದು ಇನ್ನೂ ಬಂದಿಲ್ಲ. ಮರಿಯನ್ನು ಬಿಟ್ಟು ಎಲ್ಲಿಗೆಹೋಯಿತೋ ಏನೋ!" ಎಂದಳು.

"ಸರಿ. ಷೀಬಾ ಇನ್ನೇನು ಹೋದಹಾಗೆಯೇ, ಮನೆಬಿಟ್ಟುಕದಲುತ್ತಿರಲಿಲ್ಲ. ಈಗ ಹೀಗೆ ಬರಲಿಲ್ಲವೆಂದರೆ—"

"ಪಾಪ! ಮರಿ ಎಷ್ಟು ಒದ್ದಾಡಿತು ನಿನ್ನೆಯಿಂದ. ರಾತ್ರಿಯೆಲ್ಲಾ ಒಂದೇಸಮನಾಗಿ ಅಳುತ್ತಿತ್ತು."

ಸರಸಿ ಮಾತನ್ನೇನೋ ತಿರುಗಿಸಿದ್ದಳು. ಆದರೆ ಮರಿಯಸಂಕಟದಿಂದ ಅವಳಿಗೂ ಮನಸ್ಸು ಕೊಂಚ ನೊಂದಿತು. ಕೊಂಚ ಸಂಕಟಗೊಂಡಿತ್ತು. ಎದ್ದುಹೋಗಿ ಜಿಮ್ಮಿಗೆ ಗೋಣಿಯ ತಾಟನ್ನು ಹೊದಿಸಿ ಬಂದಳು, ಹೊರಗೆ ಮಳೆ ಒಂದೇಸಮನಾಗಿ ಬೀಳುತ್ತಿತ್ತು.

"ಅಮ್ಮ, ಅಮ್ಮ"

ಸರಸಿ ಬೆಚ್ಚಿದಳು. ಕನಸೊಡೆಯಿತು. ಚಂದ್ರು ಜೋರಾಗಿ ಕೂಗುತ್ತಿದ್ದ.

"ಅಮ್ಮ ನಾಯಿಮರಿ ಯಾಕೋ ಸುಮ್ಮನೆ ಒದ್ದಾಡುತ್ತಿದೆ. ಏನುಮಾಡಿದರೂ ಸುಮ್ಮನಾಗುವುದಿಲ್ಲ."

ಸರಸಿ ನೆನಪಿನ ಕಣ್ಣೀರನ್ನೊರಸಿಕೊಂಡು ಚಂದ್ರುವಿನ ಜತೆಗೆ ಹಿತ್ತಲಿನ ಕಡೆಗೆ ಹೋದಳು. ನಾಯಿಮರಿ ಒದ್ದಾಡುತ್ತಿತ್ತು. ವೇದ, ಐದು ವರ್ಷದಹುಡುಗಿ ಗಾಬರಿಯಿಂದ ಕಕ್ಕಾವಿಕ್ಕಿಯಾಗಿ ಕಣ್ಣನ್ನು ಅಗಲವಾಗಿ ಬಿಟ್ಟುಕೊಂಡು ನೋಡುತ್ತಾ ನಿಂತಿದ್ದಳು. ನಾಯಿಮರಿಯ ಒದ್ದಾಟ ಕಂಡು ಅವಳಿಗೆ ಏನೋ ಗಾಬರಿ, ಹೆದರಿಕೆ. ಕಣ್ಣೀರಿನಕಟ್ಟೆ ಈಗಲೋ ಆಗಲೋ ಒಡೆಯುವಂತ್ತಿತ್ತು. ಸರಸಿ ಬಂದೊಡನೆಯೇ ಚಂದ್ರು ವಿನ ಕೈಹಿಡಿದು ನಿಂತಳು ವೇದ. ಚಂದ್ರು-ವೇದ ಇಬ್ಬರೂ ನಾಯಿಯ ಕಡೆಗೇ ದಿಟ್ಟಿಸುತ್ತಾ ನಿಂತಿದ್ದರು. ಪಾಪ! ನಾಯಿಮರಿಗೆ ಎಷ್ಟು ನೋವಾಗುತ್ತಿದೆಯೋ ಏನೋ ಎಂದು ಅವರಿಬ್ಬರ ಎಳೆಮನಸ್ಸು ತುಡಿ ಯುತ್ತಿತ್ತು. ಸರಸಿ ನಾಯಿಮರಿಯನ್ನು ಸಮಾಧಾನಗೊಳಿಸಲು ಯತ್ನಿ ಸಿದಳು. ಆದರೆ ಮರಿ ಒಂದೇ ಸಮನಾಗಿ ಮಿಲಮಿಲನೆ ಒದ್ದಾಡಿತು. ಹಾಗಿಂದ ಹೀಗೆ ಒಂದೇಸಮನಾಗಿ ಹೊರಳುತ್ತಿತ್ತು. ಬಾಯಿಂದ ನೊರೆ ಸುರಿಯುತ್ತಿತ್ತು. ಕಣ್ಣು ಮೇಲುಗಣ್ಣಾಗಿತ್ತು. ಸರಸಿ ಏನು ಮಾಡಿ ದರೂ ಮರಿಯ ಸಂಕಟ ತಗ್ಗಲಿಲ್ಲ. ಅದರ ಒದ್ದಾಟ, ಹೊರಳಾಟ, ಕಿರಲು ವುದು ಹೆಚ್ಚಾಯಿತು. ಮಕ್ಕಳಿಬ್ಬರನ್ನು ಒಳಕ್ಕೆ ಹೋಗಿ ಆಡಿಕೊಳ್ಳಿ ರೆಂದು ಕಳುಹಿಸಿ ಸರಸಿ ಅಲ್ಲಿಯೇ ನಿಂತಳು.

ಮರಿಯ ಒದ್ದಾಟ ತಗ್ಗಲೇ ಇಲ್ಲ. ಒಂದೇ ಸಮನಾಗಿ ಕಿರಲು ತ್ತಿತ್ತು. ಅದಕ್ಕೇನು ಮಾಡಬೇಕೋ ಏನೋ ಸರಸಿಗೆ ತಿಳಿಯಲಿಲ್ಲ. ಕತ್ತಿಗೆ ಹಾಕಿದ್ದ ಸರಪಳಿಯನ್ನು ತೆಗೆದುಹಾಕಿದಳು. ಮರಿ ಕೋಣೆ ಯಲ್ಲೆಲ್ಲ ಹೊರಳಾಡುತ್ತಿತ್ತು. ಈ ಸಮಯದಲ್ಲಿ ಮನೆಯಲ್ಲಿ ಜವಾನರೂ ಯಾರೂ ಇಲ್ಲವಲ್ಲ ಎಂದು ಸರಸಿ ಅಂದುಕೊಂಡಳು. ಅವಳ ಅಣ್ಣ ನೊಂದಿಗೆ ಜವಾನರಿಬ್ಬರೂ ಪೇಟೆಗೆ ಹೊರಟು ಹೋಗಿದ್ದರು. ಮನೆಯಲ್ಲಿ ಉಳಿದವರೆಂದರೆ ಅವಳು, ಅವಳಗಂಡ ರಾಮು ತನ್ನ ಪ್ರತಿಬಿಂಬವಾಗಿ ಬಿಟ್ಟುಹೋದ ಮಗು ಚಂದ್ರು!

ಕ್ಷಣಕ್ಷಣಕ್ಕೂ ಮರಿಯ ಸ್ಥಿತಿ ಕೆಡುತ್ತಾ ಬಂತು. ಈಗಲೋ ಆಗಲೋ ಅದರ ಅವಸ್ಥೆ ಮುಗಿದು ಹೋಯಿತು ಎಂದು ಸರಸಿಗೆ ಖಚಿತ

ವಾಗಿ ಹೋಯಿತು. ಆದರೆ ಸಾಯುವ ಮರಿಯನ್ನು ಹಾಗೆಯೇ ಬಿಟ್ಟು ಹೋಗುವುದಾದರೂ ಹೇಗೆ? ಅಲ್ಲಿಯೇ ಹಾಗೆಯೇ ನಿಂತಿದ್ದಳು.

ಹೊರಬಾಗಿಲು ಸದ್ದಾಯಿತು. ಸರಸಿ ಆ ಕಡೆ ತಿರುಗಿದಳು. ನಾಯಿ, ಜಿಮ್ಮಿ ಬೆಳಿಗ್ಗೆ ಹೋದುದು ಈಗ ಬಂದಿತ್ತು. ಬಾಗಿಲು ತೆರೆದಿರ ಲಿಲ್ಲ. ಅದರಿಂದಾಗಿ ಸದ್ದು ಮಾಡುತ್ತಿತ್ತು.

"ಚಂದ್ರು, ಜಿಮ್ಮಿ ಬಂದಿದೆ. ಬಾಗಿಲು ತೆಗೆಯಮ್ಮ. ಜಾಣ" ಎಂದು ಕೂಗಿದಳು ಸರಸಿ.

ಚಂದ್ರು ಬಾಗಿಲು ತೆರೆದ. ಜಿಮ್ಮಿ ಒಳಬರುತ್ತಾ ಹೊರಗೆ ಮತ್ತೊಮ್ಮೆ ನೋಡಿ ಒಳಕ್ಕೆ ಬಂತು.

"ಥೂ, ಹೋಗು, ಹೋಗು." ಎಂದ ಚಂದ್ರು.

"ಏನು ಮಗು?"

"ಜಿಮ್ಮಿಯ ಜತೆಗೆ ಬೇರೆ ಯಾವುದೋ ನಾಯಿ ಬಂದಿದೆ ಅಮ್ಮ. ಬಾಗಿಲಿಂದೊಳಕ್ಕೆ ನುಗ್ಗುತ್ತಿದೆ"

"ಬಂದೆ" ಎಂದು ಸರಸಿ ಬಾಗಿಲ ಬಳಿ ಬಂದಳು.

"ಜಿಮ್ಮಿ, ಒಳಗೆ ಹೋಗು" ಎಂದು ಗದರಿಕೊಂಡಳು. ಜಿಮ್ಮಿ ಬಾಲ ಮುದುರಿಕೊಂಡು ತನ್ನ ಜಾಗದ ಕಡೆಗೆ ಹೊರಟಿತು. ಬಾಗಿಲ ಬಳಿ ಬಂದಿದ್ದ ಗಂಡುನಾಯಿಯನ್ನು ಓಡಿಸಿ ಬಾಗಿಲು ಹಾಕಿಕೊಂಡು ಸರಸಿ ಒಳಕ್ಕೆ ಬಂದಳು. ನಾಯಿಮರಿಯ ಪಕ್ಕದಲ್ಲಿ ಜಿಮ್ಮಿ ನಿಂತಿತ್ತು. ಜಿಮ್ಮಿಯ ಕಣ್ಣಿನಿಂದ ನೀರು ಹರಿಯಿತು. ಮರಿಯ ಒದ್ದಾಟ ಆದೇ ತಾನೇ ನಿಂತಿತ್ತು. ಸರಸಿ ಬರುವ ವೇಳೆಗೆ ಮರಿ ತಣ್ಣಗಾಗಿತ್ತು. ತೆಪ್ಪ ಗಾಗಿತ್ತು. ಮೂಕವಾಗಿ ನಿಂತು ಕಣ್ಣೀರು ಹನಿಸುತ್ತಿತ್ತು ಜಿಮ್ಮಿ. ಆದರೆ ಒಂದು ಜೀವ ಹೋಯಿತು. ಬಾಳಿನ ವಿಷಚಕ್ರ ಸಾಗಲು ಹಲ ವಾರು ಜೀವಗಳ ಸಿದ್ಧತೆಯನ್ನು ತನ್ನಲ್ಲಿ ಮಾಡಿಕೊಂಡು ಬಂದಿತ್ತು ಜಿಮ್ಮಿ. ಸರಸಿ ಗೋಣಿಯ ತಾಟನ್ನೆತ್ತಿ ಮರಿಯ ಶವದ ಮೇಲೆ ಸಂಪೂರ್ಣವಾಗಿ ಹೊದಿಸಿದಳು. ಜಿಮ್ಮಿಯ ಕತ್ತಿಗೆ ಸರಪಳಿ ಹಾಕಿ ಕೈ ತೊಳೆದುಕೊಳ್ಳಲು ಒಳಕ್ಕೆ ಬಂದಳು. ಅವಳ ಜೀವಕ್ಕೆ ಇಂಬಾಗಿ ಅವಳ

ಅಳಿದ ಗಂಡ ರಾಮುವಿನ ಪ್ರತೀಕ ಚಂದ್ರು ಆಟದ ಸಾಮಾನಿಟ್ಟುಕೊಂಡು ವೇದಳ ಜತೆಯಲ್ಲಿ ಅಮ್ಮನಾಟ ಆಡುತ್ತಿದ್ದ! ಸರಸಿಯ ಹೃದಯ ತುಂಬಿ ಬಂತು. ಕಣ್ಣಿನಿಂದ ಪಳಪಳನೆ ಎರಡು ಹನಿ ಉರುಳಿತು! ಚಂದ್ರು, ವೇದ ತಮ್ಮಂತೆ ತಾವು ಅಮ್ಮನಾಟದಲ್ಲಿ ಮುಳುಗಿದ್ದರು!

---

# ತಾಯಿ-ಬಂಜೆ

"ಅಯ್ಯೋ! ಅಮ್ಮ!... ನೋವು ... ನೋವು ... ಸಂಕಟ... ಅಮ್ಮ !—"

ಒಂದೇ ಸಮನಾಗಿ ನರಳಾಟ. ಹೊಟ್ಟೆಯನ್ನು ಕಡೆಗೋಲಿನಿಂದ ಕಡದಂತಾಗುತ್ತಿತ್ತು. ಈ ಕಲಕಾಟದಿಂದ ನರ ನರವೂ ಕಿತ್ತು ಹೋದಂತಾಗಿ ಮೈಕೈಯೆಲ್ಲಾ ನೋವಿನಿಂದ ತುಂಬಿತ್ತು. ಆ ನೋವಿನಲ್ಲಿ ಮತ್ತಾವ ಜ್ಞಾನವೂ ಇರಲಿಲ್ಲ, ನೋವು! ನೋವು! ಬರಿಯ ನೋವಿನದಷ್ಟೇ ಜ್ಞಾನ!

ನರಳಾಡುತ್ತಿದ್ದ ವೈದೇಹಿಯ ಮೈಗೆ ಕೊಂಚ ಬಿಸಿ ತಾಗಿದಂತಾಯಿತು. ಆ ಬಿಸಿಯಿಂದ ನೋವು ಕೊಂಚ ತಗ್ಗಿ ಮನಸ್ಸಿಗೆ ಒಂದು ಬಗೆಯ ಸಮಾಧಾನ, ನೆಮ್ಮದಿ ಬಂದಂತಾಯಿತು. ಅರೆ ಮರೆವಿನಲ್ಲಿ ಸಂಕಟದ ಕೂಗಾಟ, ನರಳಾಟ ತಗ್ಗಿತು. ಮೆಲ್ಲನೆ ಕಣ್ಣು ತೆರೆದು ಪಕ್ಕದಲ್ಲಿ ನಿಂತಿದ್ದ ಆಸ್ಪತ್ರೆಯ ನರ್ಸನ್ನು ನೋಡಿದಳು. ನರ್ಸಿನ ಮುಖ ನಗುನಗುತ್ತಿತ್ತು. ಆ ನಗೆ!—ತನ್ನ ನೋವನ್ನು ಕಂಡು ಆಕೆ ಸುಖ ಪಡುತ್ತಿರಬಹುದು ಎನಿಸಿತು ಒಂದು ಕ್ಷಣ. ಆದರೆ ಮರುನಿಮಿಷವೇ ಆ ಚಿಂತೆ ಮರಳಿತು. ಹಾಗಿಲ್ಲ! ಆ ನಗು ಮೋಹಕ ನಗು. ಯಾವ ನೊಂದ ಮನಸ್ಸಿಗಾದರೂ ಸಮಾಧಾನ ಕೊಡುವಂತಹುದು. ಗಾಯಕ್ಕೆ ಔಷಧಿಯಂತಿತ್ತು ಆ ನಗು. ಆ ನಗೆಯ ಬೆಳುದಿಂಗಳಲ್ಲಿ ವೈದೇಹಿಯ ನೊಂದ ಜೀವಕ್ಕೆ ತುಸು ನೆಮ್ಮದಿ ಸಿಕ್ಕಿದಂತಾಯಿತು. ನೋವು ಮುಕ್ಕಾಲು ಮಾಯವಾಯಿತು.

ನರ್ಸ್ ವೈದೇಹಿಯ ಮೈಮೇಲೆ ಇದ್ದ ಬಿಸಿನೀರಿನ ಚೀಲವನ್ನು ತೆಗೆದಳು. ಒಡನೆಯೇ ನೋವು ಚಿಮ್ಮಿತು, ಆದರೆ ನರ್ಸ್ ಮರುನಿಮಿಷವೇ ಮತ್ತೊಂದು ಚೀಲವನ್ನಿಟ್ಟಳು.

"ಅಬ್ಬಾ!"

"ಈಗ ನೋವು ಹೇಗಿದೆಯಮ್ಮ ?" ನಗುನಗುತ್ತಾ, ಶಾಂತವಾಗಿ ಸಮಾಧಾನ ನೀಡುವ ಧ್ವನಿಯಲ್ಲಿ ನರ್ಸ್ ಕೇಳಿದಳು. ವೈದೇಹಿಗೆ ತನ್ನ ತಾಯಿಯೇ ಆ ಮಾತನ್ನಾಡಿದಳೋ ಏನೋ ಎನ್ನಿಸಿತು. ಆ ರೀತಿಯ ಮಾತು ಕೇಳಿ ಎಷ್ಟೋ ಯುಗಗಳಾದಂತಾಗಿತ್ತು. ಮೆಲ್ಲಗೆ ಕತ್ತನ್ನು ಬಹು ಕಷ್ಟದಿಂದ ಆ ಕಡೆ ತಿರುಗಿಸಿಕೊಂಡು ನರ್ಸನ್ನೇ ನೋಡುತ್ತಿದ್ದಳು. ಮನಸ್ಸಿಗೆ ಏನೋ ಒಂದು ಬಗೆಯ ಸಮಾಧಾನ. ಆ ಸಮಾಧಾನದಿಂದ ಕಣ್ಣಿನಲ್ಲಿ ಒಂದು ಹನಿ ನೀರು.

"ಈಗ ವಾಸಿಯೇನಮ್ಮ ?" ಎಂದಳು ನರ್ಸ್ ಮತ್ತೊಮ್ಮೆ.

"ಹುಂ, ಕೊಂಚ ವಾಸಿ !"

"ಸದ್ಯ !"

"ಏನೋಮ್ಮ !" ಎಂದು ವೈದೇಹಿ ಬೇಸರದ ನಿಟ್ಟುಸಿರೊಂದನ್ನಿಟ್ಟಳು.

"ಯಾಕಮ್ಮ ಇಷ್ಟು ಬೇಸರ ?" ಎಂದಳು ನರ್ಸ್, ಅವಳ ತಲೆಗೂದಲನ್ನು ನೇವರಿಸುತ್ತಾ, ವೈದೇಹಿ ಕಣ್ಣೆತ್ತಿ ನೋಡಿದಳು. ನರ್ಸಿನ ಕಣ್ಣಿನಲ್ಲಿದ್ದ ಮಮತೆ ಅವಳ ಹೃದಯದಲ್ಲಿದ್ದ ತಾಯ್ತನವನ್ನೆಲ್ಲಾ ಒಮ್ಮೆಗೇ ಕೆರಳಿಸಿತು. ಮನಸ್ಸಿನ ಸಮಾಧಾನ ಇದ್ದಕ್ಕಿದ್ದಂತೆ ಮಾಯವಾದಂತಾಯಿತು. ಎದೆಯಲ್ಲಿ ಏನೋ ಒಂದು ರೀತಿಯ ಕಲಕಾಟ. ಹೇಳಲಾರದ ಸಂಕಟ. ತಾಳಲಾರದ ನೋವು. ಇಂತಹುದೇ, ಹೀಗೆಯೇ ಎಂದು ರೂಪಿಸಲಾಗದ ತೊಳಲು.

"ಹೌದಮ್ಮ, ಈಗ ಬೇಸರ. ಆದರೆ ಕೈಯಲ್ಲಿ ಮುದ್ದುಕೂಸನ್ನೆತ್ತಿಕೊಂಡು ಆಡಿಸುವಾಗ !" ಎನ್ನುತ್ತಾ ನರ್ಸ್ ಕೆನ್ನೆಯನ್ನು ನೇವರಿಸಿದಳು.

ಆ ಮಾತಿನಿಂದ ವೈದೇಹಿಯ ತಾಯ್ತನದ ದುಃಖವೆಲ್ಲಾ ಮರುಕಳಿಸಿತು. ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು. ದುಃಖ ಒತ್ತಿಕೊಂಡು ಬಂತು. "ಮುದ್ದು ಕೂಸು ! ಹುಂ !—ಮುದ್ದು ಕೂಸು !" ಅದು ತನ್ನ ಹಣೆಯಲ್ಲಿ ಬರೆದಿಲ್ಲ. ಇದುವರೆಗೂ ತನ್ನ ಕೂಸನ್ನೆತ್ತಿಕೊಂಡು ಆಡಿ

ಸುವ ಸೌಭಾಗ್ಯವನ್ನು ದೇವರು ತನಗೆ ಕೊಟ್ಟಿರಲಿಲ್ಲ. ಮತ್ತೆ—ಕೊಡು ವನೋ ಇಲ್ಲವೋ ?—ತನ್ನ ಹಣೆಯ ಬರಹ ಹೇಗಿದೆಯೋ ಏನೋ ಯಾರಿಗೆ ಗೊತ್ತು !—ವೈದೇಹಿಗೆ ಹಿಂದಿನ ದಿನಗಳ ನೆನಪೆಲ್ಲಾ ಒಂದೊಂದಾಗಿ ಬರಲಾರಂಭವಾಯಿತು. ಆ ನೆನಪಿನಲ್ಲಿ ತನ್ನ ಸುತ್ತಿನ ವಾತಾವರಣವನ್ನು, ನರ್ಸನ್ನು ಮತ್ತು ತನ್ನ ನೋವನ್ನೂ ಅವಳು ಮರೆತು ಬಿಟ್ಟಳು. ಆದರೆ ಕಣ್ಣಿನಲ್ಲಿ ಮಾತ್ರ ನೀರು ಒಂದೇ ಸಮನಾಗಿ ಹರಿಯುತ್ತಿತ್ತು.

ಮುದ್ದುಕೂಸು !—ಅದು ತನ್ನ ಬಹುದಿನಗಳ ಕನಸು. ಅದು ಎಲ್ಲ ಹೆಂಗಸರ ಕನಸು. ಚಿಕ್ಕ ಹುಡುಗಿಯಾದಾಗಿನಿಂದಲೂ ಪ್ರತಿ ಹೆಣ್ಣಿಗೂ ತಾನು ಕೂಸಿನ ತಾಯಿಯಾಗುವ ಕನಸು. ಅದು ನಿಜವಾಗಿಯೇ ಹೆಂಗಸಿನಲ್ಲಿ ಕೂಡಿಬಂದ ಭಾವನೆ, ಪ್ರವೃತ್ತಿ. ಗೊಂಬೆಯಾಟದಲ್ಲಿ ದಿನವೂ ತನ್ನ ಕೈಮುರಿದ ಗೊಂಬೆಗೆ ತಾನೇ ತಾಯಿಯಾಗಿ ಮಡಿಯುಡಿಸಿ, ಲಂಗ ಹಾಕಿ—ಅದೇಕೋ ಏನೋ ಯಾವಾಗಲೂ ಆ ಬೊಂಬೆ ಹೆಣ್ಣೆಂದೇ ಅವಳ ಭಾವನೆ—ಊಟಮಾಡಿಸಿ, ಪುಟ್ಟ ತೊಟ್ಟಿಲಿನಲ್ಲಿ ಮಲಗಿಸಿ, ಜೋಗುಳ ಹಾಡಿ ನಿದ್ರೆ ಮಾಡಿಸಿದ ಮೇಲೆಯೇ ವೈದೇಹಿಯ ಊಟ. ಇದು ದಿನದ ಪರಿಪಾಟ. ಒಂದು ದಿನ ಗೊಂಬೆಯ ಅವಶ್ಯಕತೆ ನೋಡಿಕೊಳ್ಳದಿದ್ದರೆ ಆ ದಿನ ವೈದೇಹಿಗೆ ಊಟವೇ ಸೇರುತ್ತಿರಲಿಲ್ಲ. ತಾನು ಅದರ ತಾಯಿ; ಅದನ್ನು ಸರಿಯಾಗಿ ನೋಡಿಕೊಳ್ಳದಿದ್ದರೆ ಮತ್ತೆ ಯಾರು ನೋಡಿಕೊಳ್ಳುವವರು--ಎನ್ನುವ ತಾಯ್ತನದ ಮಮತೆ ಇನ್ನೂ ಚಿಕ್ಕತನದಲ್ಲಿಯೇ ವೈದೇಹಿಯಲ್ಲಿ ಮೂಡಿತ್ತು. ಒಂದು ದಿನ ತನ್ನ ಕರ್ಪೂರದ ಗೊಂಬೆಗೆ ಎಣ್ಣೆ ನೀರು ಹಾಕುವ ಸಂಭ್ರಮದಲ್ಲಿ ಬಚ್ಚಲು ಮನೆಯ ಒಲೆಯ ಹತ್ತಿರ ಕುಳಿತಿದ್ದಾಗ, ಕಿಡಿಯೊಂದು ಹಾರಿ ತನ್ನ ಕೈ ಮೇಲೆ ಬಿದ್ದುದು, ಆ ಗಾಬರಿಯಲ್ಲಿ ತಾನು ಗೊಂಬೆಯನ್ನು ಕೈಯಿಂದ ಬಿಟ್ಟುದು, ಗೊಂಬೆಗೆ ಬೆಂಕಿ ಹತ್ತಿ ಅದು ಉರಿದು ಹೊಗೆಯಾದುದು—ತಾನು ಅದಕ್ಕಾಗಿ ಅತ್ತು ಹಟ ಮಾಡಿದಾಗ ತಂದೆ ಬಂದು " ಹಟಮಾರಿ " ಎಂದು ತನ್ನನ್ನು ಹೊಡೆದುದು—ಇದೆಲ್ಲಾ ಅವಳ ಮನಸ್ಸಿನಲ್ಲಿ ಇನ್ನೂ

ಹಸುರಾಗಿತ್ತು. ಕೊನೆಗೂ ಆ ದಿನ ಕೈಗೆ ಬೇರೆ ಗೊಂಬೆ ಬರುವ ವರೆಗೂ ಅವಳು ಊಟ ಮಾಡಲೇ ಇಲ್ಲ,

ಅದಾದ ಮೇಲೆ—ಲಂಗಬಿಟ್ಟು ಸೀರೆ ಉಡುವ ವಯಸ್ಸಾದಾಗ—ಆಗ ಗೊಂಬೆಗಳೊಂದಿಗೆ ಆಡುವುದೆಂದರೆ ಹೇಗೆ? ವೈದೇಹಿಗೆ ಆಗಂತೂ ಮಕ್ಕಳೆಂದರೆ ಪಂಚಪ್ರಾಣ. ಮೊದಲು ಗೊಂಬೆಗಳಲ್ಲಿ ಎಷ್ಟು ಪ್ರೇಮ, ಮಮತೆ ತೋರುತ್ತಿದ್ದಳೋ ಅದರ ನೂರರಷ್ಟು ಮಮತೆ ಈಗ ಮಕ್ಕಳ ಮೇಲೆ. ಯಾವ ಮಗು ಕಂಡರೂ ಅದನ್ನು ಮುದ್ದಾಡದೆ ಇರುತ್ತಿರಲಿಲ್ಲ. ತನ್ನ ಸಹಪಾಠಿ ಸೀತಾಲಕ್ಷ್ಮಿಯ ಅಕ್ಕ ತವರುಮನೆಗೆ ಬಂದಿದ್ದಾಗ ಅವಳ ಮೊದಲ ಕೂಸು ಉಷೆಯೊಂದಿಗೆ ಆಡಲೆಂದು ಸಂಜೆ ಅವರ ಮನೆಗೆ ಓಡಿ ಬಿಡುತಿದ್ದಳು. ಉಷಾ ಮುದ್ದು ಮುದ್ದು ಹುಡುಗಿ. ಅವಳು ತೊದಲುತ್ತಾ ತೊದಲುತ್ತಾ ವೈದೇಹಿಯನ್ನು "ಚಿಕ್ಕಮ್ಮ" ಎಂದರೆ ವೈದೇಹಿಯ ಮನಸ್ಸಿಗೆ ಸ್ವರ್ಗಸುಖ. ಕೂಡಲೇ ಉಷೆಯನ್ನೆತ್ತಿಕೊಂಡು ಮುತ್ತುಗಳ ಸುರಿಮಳೆ ನಡೆಸಿಬಿಡುತ್ತಿದ್ದಳು. ಒಂದೊಂದು ದಿನ ಉಷೆಯನ್ನೆತ್ತಿಕೊಂಡು ತಮ್ಮ ಮನೆಗೆ ಹೊರಟುಬಿಡುವಳು. ತಾನೇ ಅವಳಿಗೆ ಅನ್ನ ಕಲಸಿ ತಿನ್ನಿಸುವಳು. ಒಂದು ನಿಮಿಷವಾಗಲೀ ಅವಳನ್ನು ಕಂಕುಳಿನಿಂದ ಇಳಿಸುತ್ತಿರಲಿಲ್ಲ. ವೈದೇಹಿಯ ತಾಯಿಯೇನೋ ಎಷ್ಟೋಬಾರಿ ಅವಳನ್ನು ಗದರಿಕೊಂಡರು: "ಮಗುವಿಗೆ ಇಷ್ಟು ಮುದ್ದು ಮಾಡಬೇಡ. ಮಗು ಆಮೇಲೆ ನಿನ್ನ ಹಾಗೆಯೇ ಹಟಮಾರಿಯಾಗಿಬಿಡುತ್ತದೆ" ಎನ್ನುತ್ತಿದ್ದರು. ಆದರೆ ವೈದೇಹಿ ಈ ಮಾತನ್ನು ಹುಚ್ಚುನಗೆಯಲ್ಲಿ ತೇಲಿಸಿಬಿಡುತ್ತಿದ್ದಳು. ಅವಳ ಹೃದಯದ ಯಾವುದೋ ಕನಸಿಗೆ ಇದರಿಂದ ನೀರೆರೆದಂತಾಗುತ್ತಿತ್ತು.

ಸೀತಾಲಕ್ಷ್ಮಿಯ ಅಕ್ಕ ಮಗುವನ್ನು ಕರೆದುಕೊಂಡು ಹೊರಟು ಹೋದಾಗ ವೈದೇಹಿಗೆ ಆದಷ್ಟು ನೋವು ಮತ್ತಾರಿಗೂ ಆಗಿರಲಿಲ್ಲ. ಎರಡು ದಿವಸ ಅನ್ನ ನೀರನ್ನೊಲ್ಲದೆ ಮೂಲೆಯಲ್ಲಿ ಕುಳಿತುಬಿಟ್ಟಿದ್ದಳು ವೈದೇಹಿ. ಉಷೆ ಅವಳಿಗೆ ಅಷ್ಟೊಂದು ಒಗ್ಗಿಹೋಗಿದ್ದಳು. ಇದಾದ ನಂತರ—ಅವರ ಎದುರುಮನೆಯ ಶಾರದಮ್ಮನವರ ಎರಡು ವರ್ಷದ ಕೂಸು ವಾಸು! ಶಾರದಮ್ಮನವರು ಹೊಸದಾಗಿ ಆ ಮನೆಗೆ ಬಾಡಿಗೆಗೆ ಬಂದಿದ್ದರು.

ಅವರ ಮಗು ವಾಸು, ದುಂಡುದುಂಡಾಗಿ, ಮುದ್ದಾಗಿ, ನಗುನಗುತ್ತಿದ್ದ. ಅವನು ಅಳುವುದನ್ನು ಕಂಡುದೇ ಅಪರೂಪ. ವೈದೇಹಿಗೆ ಅವನು ಅಚ್ಚುಮೆಚ್ಚಾದ. ವಾಸುವಿಗೆ ದ್ರಾಕ್ಷಿ ಬೇಕು. ವೈದೇಹಿಗೆ ವಾಸು ಬೇಕು. ಹೀಗಾಗಿ ವೈದೇಹಿಯ ವುಲ್ಲನ್ ದಾರದ ಡಬ್ಬಿಯ ಕಾಸೆಲ್ಲಾ ದ್ರಾಕ್ಷಿಗೇ ಮೀಸಲಾಯಿತು. ವಾಸುವಿಗೆ ನಡೆಯಲು ಬರುತ್ತಿದ್ದರೂ ಅವನನ್ನೆತ್ತಿಕೊಂಡೇ ತೀರಬೇಕು. ತನಗೆಷ್ಟೇ ಆಯಾಸವಾದರೂ ಅವನನ್ನು ಕೆಳಕ್ಕಿಳಿಸುತ್ತಲೂ ಇರಲಿಲ್ಲ. ಉಳಿದವರ ಕೈಗೆ ಕೊಡುತ್ತಲೂ ಇರಲಿಲ್ಲ. ಅವನನ್ನೆತ್ತಿಕೊಂಡು ತನ್ನ ಸ್ನೇಹಿತೆಯರ ಮನೆಗೆಲ್ಲಾ ಹೋಗಿ ಬರುತ್ತಿದ್ದಳು. ಸ್ಕೂಲಿಗೆ ಹೋಗುವಾಗಲ್ಲದೆ ಇನ್ನು ಮೂರು ಕಾಲವೂ ವಾಸು ವೈದೇಹಿಯ ಕಂಕುಳಲ್ಲಿ, ಇಲ್ಲ ಜತೆಯಲ್ಲಿ. ಇಷ್ಟೊಂದು ಪ್ರೀತಿಯನ್ನು ಕಂಡವರ ಮಗುವಿನಲ್ಲಿ ತೋರುವಾಗ ಜತೆಯ ಹುಡುಗಿಯರು ಹಾಸ್ಯಮಾಡದೆ ಇರುವರೆ? ಅದರಲ್ಲಿಯೂ ಹಾಸ್ಯವೇ ಅವರ ಜೀವಮಂತ್ರ ಆ ಕಾಲದಲ್ಲಿ. ಸರಿ, ಎಲ್ಲರೂ ವೈದೇಹಿಯನ್ನು ಗೇಲಿಮಾಡುವವರೇ—

"ಏನೇ? ಕಂಡವರ ಮನೆ ಮಗುವಿಗೇ ಇಷ್ಟು ಒದ್ದಾಡೋಳು ಇನ್ನೇನು— ನಿನಗೇ ಒಂದು ಆದರೆ ಪ್ರಾಣಾನೇ ಬಿಟ್ಟುಬಿಡ್ತೀಯ. ಅಲ್ಲವೇನೇ?"

"ನಮ್ಮ ವೈದೇಹಿಗೆ ಒಂದು ಹತ್ತು ಮಕ್ಕಳಾಗಲಿ ಅಂತ ದೇವರಿಗೆ ನಾನು ದಿನಾಲು ಪ್ರಾರ್ಥನೆ ಮಾಡ್ಕೊಳ್ತೀನಮ್ಮ!"

"ಹತ್ತು ಸಾಲದು ಕಣೇ. ಗಾಂಧಾರಿಗೆ ನೂರು ಆಯಿತು. ನಮ್ಮ ವೈದೇಹಿಗೆ ಏನಿಲ್ಲಾಂದರೂ ಅದರಲ್ಲಿ ಅರ್ಧ—"

"ಏ—ಸುಮ್ಮನಿರ್ರೀಮ್ಮ. ಹಾಸ್ಯಮಾಡ್ಬೇಡಿ" ಎಂದು ವೈದೇಹಿ ಕೋಪಗೊಳ್ಳುತ್ತಿದ್ದಳು. ನಿಜ, ಆದರೆ ಅದೆಲ್ಲಾ ಹುಸಿಮುನಿಸು ಅಷ್ಟೇ.— ಅವರ ಆ ಮಾತಿನಿಂದ ಅವಳ ಮನಸ್ಸಿಗೆ ನಿಜವಾಗಿಯೂ ಬಹಳ ಸಂತೋಷವಾಗಿತ್ತು. ತನಗೂ ಒಂದುಕೂಸು—ನಿಜ! ತನಗೂ ಒಂದು ಮುದ್ದು ಕೂಸು—ಬೇಕು ಎಂದು ಅವಳ ಹೃದಯಾಂತರಾಳ ಮಿಡಿಯುತ್ತಿತ್ತು.

ಆಮೇಲೆ ವೈದೇಹಿಗೆ ಮದುವೆಯಾಯಿತು. ಮದುವೆಯಾದಾಗ ಅವಳ ಕಿವಿಗೆ ಬಿದ್ದ "ದಶಾಸ್ಯಾಂಪುತ್ರಾನಾಧೇಹಿ"—ಎಂಬ ಆಶೀರ್ವಾದ

ಎಂದೂ ಮರೆಯುವಂತಹುದಲ್ಲ. ಯಾವಾಗಲೂ ಅದು ಕಿವಿಯಲ್ಲಿ ಮಧುರ ಸಂಗೀತದ ನೆನಪಿನಂತೆ ತುಡಿಯುತ್ತಿತ್ತು. ಬ್ರಾಹ್ಮಣರ ಆಶೀರ್ವಾದ ನಿಜವಾಗಲಿ ಎಂದು ದೇವರನ್ನು ನೂರುಬಾರಿ ಪ್ರಾರ್ಥಿಸಿಕೊಂಡಳು.

ಕೊನೆಗೊಮ್ಮೆ ಈ ಆಸೆ ಪೂರೈಸುವ ದಿನ ಬಂದಿತ್ತು. ಮದುವೆಯಾಗಿ ಗಂಡನ ಮನೆಗೆ ಹೋದಾಗಿನಿಂದ ಅವಳ ಮನಸ್ಸಿನಲ್ಲಿ ಈ ಆಸೆ ಕೊರೆಯುತ್ತಿತ್ತು. ಬಾಯಿಬಿಟ್ಟು ಹೇಳುವಂತಿಲ್ಲ. ಹೆಂಗಸಿನ ಸಂಕಟ ಹೆಂಗಸಿಗೇ ಗೊತ್ತು. ಎಷ್ಟೋ ಆಸೆಗಳು, ಬಯಕೆಗಳು, ಆಕಾಂಕ್ಷೆಗಳು ಮನಸ್ಸಿನಲ್ಲಿ ಬೇರುಬಿಟ್ಟು ಬಲಿತಿರುತ್ತವೆ. ಅವುಗಳನ್ನು ಬೇರೆಯವರಿಗೆ ಹೇಳಿಕೊಳ್ಳಲು ಸಾಧ್ಯವಾಗುವುದಿಲ್ಲ. ಗಂಡಸಿಗೆ ಹೇಳುವುದಂತೂ ಆಗದ ಮಾತು. ಇನ್ನು ಸರಿಯುವರೊಂದಿಗೆ ಹೇಳಿಕೊಳ್ಳೋಣವೆಂದರೆ ಏನೆನ್ನುವರೋ ಎನ್ನುವ ಹೆದರಿಕೆ. ಜತೆಗೆ ಸಹಜವಾದ ನಾಚಿಕೆ. ಹೀಗಾಗಿ ಹೆಂಗಸಿನ ನೂರು ಆಸೆಗಳಲ್ಲಿ ತೊಂಬತ್ತೊಂಬತ್ತು ಮನಸ್ಸಿನಲ್ಲೇ, ಹೃದಯದ ಕಾವಿನಲ್ಲಿ ಅಡೆ ಹಾಕಿದಂತೆ ಕಳಿತು ಹಣ್ಣಾದರೆ ಉಳಿದವರಿಗೆ ಅದು ತಿಳಿಯುವುದು. ಇಲ್ಲವಾದರೆ ಅದರ ಸುಳಿವೂ ಇತರರಿಗಿಲ್ಲ. ಅಂತಹುದೇ ಈ ಆಸೆ, ತಾಯ್ತನದ ಆಸೆ. ಗೊಂಬೆಯೊಂದಿಗೆ ಆಡುವ ಕಾಲ ಹೋಯಿತು. ಮತ್ತೊಬ್ಬರ ಮಕ್ಕಳನ್ನು ಮುದ್ದಿಡುವಾಗಲೆಲ್ಲಾ ತಾಯ್ತನ ಕೆರಳಿ ತಾನು ಬಂಜೆಯೇ ಎಂದು ಪ್ರಶ್ನೆಹಾಕುತ್ತಿತ್ತು. ಅದಕ್ಕೆ ಉತ್ತರ ಕೊಡುವಂತಿರಲಿಲ್ಲ. ಕೊಡಲು ಹೆದರಿಕೆ, ಸಂಶಯ.

ಮದುವೆಯಾದ ಮೂರು ವರುಷದವರೆಗೂ ಆ ಆಸೆ ಪೂರ್ಣವಾಗುವ ಸೂಚನೆ ತೋರಲಿಲ್ಲ. ಮೊದಲನೆಯ ವರುಷವೆಲ್ಲಾ ಸುಖವಾಗಿ, ಸಂತೋಷವಾಗಿ ಕಳೆಯಿತು. ವೈದೇಹಿಯ ಅತ್ತೆ, ಅವಳ ಯಜಮಾನರು ಇಬ್ಬರೂ ಅವಳನ್ನು ಬಹಳ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಯಜಮಾನರಂತೂ ಅವಳನ್ನು ತಮ್ಮ ಕಣ್ಣಿನ ಆಲಿಯಷ್ಟು ಮಮತೆಯಿಂದ ಕಾಪಾಡಿಕೊಂಡು ಬಂದರು. ಆದರೆ ಅವರಿಗೂ ಒಳಗೆ ಆಸೆ. ಅತ್ತೆಗೂ ಆಸೆ. ಮೂವರಿಗೂ ಒಂದೇ ಆಸೆ. ವೈದೇಹಿಗೊಂದು ಕೂಸಾದರೆ!

ತಾವು ಸಾಯುವ ಮುನ್ನ ಮೊಮ್ಮಗನನ್ನು ಎತ್ತಿ ಆಡಿಸುವ ಆಸೆ ಅತ್ತೆಗೆ. ತಮ್ಮಿಬ್ಬರ ಪ್ರೇಮದ ಮೂರ್ತಿ ಬೇಕೆನ್ನುವ ಆಸೆ ವೈದೇಹಿಯ ಗಂಡನಿಗೆ. ವೈದೇಹಿಗಂತೂ ಹೇಳಬೇಕಾದುದೇ ಇಲ್ಲ. ಅವಳ ಅತ್ತೆಯಂತೂ ಸೊಸೆಗೆ ಎಂದು ಸೀಮಂತ ಮಾಡುವೆನೋ ಮೊಮ್ಮಗನನ್ನು ಎಂದು ಆಡಿಸುವೆನೋ ಎನ್ನುವ ತವಕ. ಈ ತವಕ ದಿನ ಕಳೆದಂತೆ ಹೆಚ್ಚುತ್ತಾ ಬಂತು. ತವಕ ಹೆಚ್ಚಾದಂತೆ ಮನಸ್ಸಿನ ಅಸಮಾಧಾನವೂ ಹೆಚ್ಚುತ್ತಾ ಬಂತು. ವೈದೇಹಿಯ ಕಡೆಗಿದ್ದ ಒಲವು ತಗ್ಗುತ್ತಾ ಬಂತು. ಒಂದು ದಿನ ವೈದೇಹಿ ಕೋಣೆಯಲ್ಲಿ ಮಲಗಿದ್ದಾಗ ಹೊರಗೆ ತಾಯಿ—ಮಗ ಮಾತನಾಡಿಕೊಳ್ಳುವುದು ಕೇಳಿಸಿತು.—

"ಮದುವೆಗೆ ಮುಂಚೆಯೇ ನಾವು ಯೋಚನೆ ಮಾಡಬೇಕಾಗಿತ್ತು. ಅವರ ಮನೆಯಲ್ಲಿ ಇವಳೊಬ್ಬಳೇ ಮಗಳು. ತಂಗಿಯಿಲ್ಲ, ಅವಳಿಗೂ ಆಗುತ್ತೋ ಇಲ್ಲವೋ ? ತಮ್ಮನಿಲ್ಲ!"

"ಇನ್ನೂ ಏನಮ್ಮ——ಅವಳಿಗಿನ್ನೂ ಮಹಾ ವಯಸ್ಸಾಗಿ ಹೋಯಿತೇ ?—ಮನೆಗೆ ಬಂದು ಇನ್ನೂ ಒಂದು ವರ್ಷ ಆಯಿತು. ಅಷ್ಟೇ ತಾನೇ ? ನಮ್ಮ ಕಾಲೇಜಿನಲ್ಲಿ ಶಾಮಣ್ಣ ಇಲ್ಲವೇ—ಶಾಮಣ್ಣ ನಿನಗೆ ತಿಳಿಯದೇನಮ್ಮ—ಅವನಿಗೆ ಮದುವೆಯಾಗಿ ಎಷ್ಟು ವರ್ಷದ ಮೇಲೆ ಮಕ್ಕಳಾದ್ದು—"

"ಸರಿಯಪ್ಪ. ಅಷ್ಟರ ತನಕ ಯಮ ಕಾಯತಾನೇನೋ ? ನಾನು ಇನ್ನು ಅಬ್ಬಾ ಅಂದರೆ ಎರಡು ವರ್ಷ ಇರಬಹುದು—ಅಷ್ಟರೊಳಗೆ ಮೊಮ್ಮಗನನ್ನ ಆಡಿಸೋ ಆಸೆ—"

ವೈದೇಹಿ ಆ ಮಾತನ್ನು ಕೇಳಿ ಆವತ್ತು ತುಂಬಾ ಅತ್ತಿದ್ದಳು. ಅದು ತುಂಬು ಅಳು. ಅತ್ತೆಯವರ ಆಸೆ, ತನ್ನ ಆಸೆ, ತನ್ನ ಗಂಡನ ಆಸೆ—ಯಾವುದನ್ನೂ ತಾನು ಪೂರ್ಣಗೊಳಿಸಲಿಲ್ಲವಲ್ಲಾ ಎಂದು ಅತ್ತಳು. ಜತೆಗೆ ತನಗೆ ಚಿಕ್ಕಂದಿನಲ್ಲಿ ಆಡಲು ತಂಗಿ, ತಮ್ಮ ಯಾರೂ ಇರಲಿಲ್ಲವಲ್ಲಾ ಎನ್ನುವ ಗುಪ್ತದುಃಖವೂ ಕೂಡಿಕೊಂಡಿರಬಹುದು. ಅದಕ್ಕೂ ಮಿಗಿಲಾಗಿ ತನ್ನ ಗಂಡ ತನ್ನ ಪರವಾಗಿ ಮಾತನಾಡಿದ ಸಂತೋಷ. ಇವುಗಳ

ನಡುವೆ ಅತ್ತೆಯು ಅಸಮಾಧಾನ ಯಾವ ರೂಪವನ್ನು ತಾಳುವುದೋ ಎನ್ನುವ ಹೆದರಿಕೆ. ಇದೆಲ್ಲಾ ಅವಳ ಅಳುವಿನಲ್ಲಿ ಸೇರಿಕೊಂಡಿದ್ದುವು.

ಅತ್ತೆಯೇನೋ ಸೊಸೆಯ ಮನಸ್ಸು ನೊಂದುಕೊಳ್ಳಬಹುದೆಂದು ಬಾಯಲ್ಲಿ ಏನನ್ನೂ ಹೇಳುತ್ತಿರಲಿಲ್ಲ. ಆದರೆ ಒಳಗೆ ಬೆಂಕಿಯಿರುವಾಗ ಕಾವನ್ನು ಬಚ್ಚಿಡಲಾದೀತೇ? ಒಂದಲ್ಲ ಒಂದುರೀತಿಯಲ್ಲಿ ಅಸಮಾಧಾನ ತೋರಿಹೋಗುತ್ತಿತ್ತು. ಒಂದು ನಡೆಯಲ್ಲಿ, ಇಲ್ಲವೇ ಒಂದು ಹುಬ್ಬು ಚಿಮ್ಮಿನಲ್ಲಿ ವೈದೇಹಿಗೆ ಅವರ ಮನಸ್ಸಿನ ಅಸಮಾಧಾನ ಗೊತ್ತಾಗಿ ಹೋಗುತ್ತಿತ್ತು. ಅವಳಿಗೂ ಮನಸ್ಸಿಗೆ ಅಸಮಾಧಾನವಾಗುತ್ತಿತ್ತು. ಆದರೆ—ವೈದೇಹಿಯ ಗಂಡನಿಗೂ ದಿನೇದಿನೇ ಮನಸ್ಸು ವಿಹ್ವಲವಾಗುತ್ತಿತ್ತು. ವೈದೇಹಿಗೆ ಅದು ಚೆನ್ನಾಗಿ ಗೊತ್ತು. ಗಂಡನ ಹೃದಯದ ನಾಡಿಯು ಬಡಿತ ಅವಳಿಗೆ ಗೊತ್ತಿತ್ತು. ಗಂಡನ ಒಂದೊಂದು ನಡವಳಿಕೆಯಲ್ಲೂ ಅವಳಿಗೆ ಉದಾಸೀನದ ಛಾಯೆ ತೋರಿಬರುತ್ತಿತ್ತು. ಮದುವೆಯಾದ ಹೊಸದರಲ್ಲಿ ಅವಳನ್ನು ತನ್ನ ಜತೆಗೆ ಬೃಂದಾವನಕ್ಕೆ ವಾರಕ್ಕೊಮ್ಮೆ ಕರೆದುಕೊಂಡು ಹೋಗುತ್ತಿದ್ದ. ಆದರೆ ಈಗ ಬಹಳ ಅಪರೂಪ. ಅದೂ ಅವಳಾಗಿಯೇ ಕೇಳಿಕೊಳ್ಳಬೇಕು. ಆಗಲೇ ಒಂದು ದಿನ ಗಂಡ ಹೆಂಡತಿ ಇಬ್ಬರೂ ಸಿನಿಮಾಕ್ಕೆ ಹೋಗಿದ್ದರು. ಆಗ—ಯಾವುದೋ ಚಿತ್ರ—ಚಿತ್ರದಲ್ಲಿ ಒಬ್ಬ ಸನ್ಯಾಸಿ ಭಿಕ್ಷೆಬೇಡುವವನು, ಮನೆಯವಳಿಗೆ ಮಕ್ಕಳಿಲ್ಲವೆಂದು ತಿಳಿದು ಭಿಕ್ಷವನ್ನೊಲ್ಲದೆ ಹೊರಟು ಹೋಗುತ್ತಾನೆ. "ಮಕ್ಕಳಿದ್ದ ಮನೆ ಬೃಂದಾವನ, ಮಕ್ಕಳಿಲ್ಲದ ಮನೆ ಮಸಣ" ಎಂದು ಅವನು ಅಂದಾಗ ವೈದೇಹಿಯ ಹೃದಯಕ್ಕೆ ಒನಕೆಯ ಪೆಟ್ಟು ಕೊಟ್ಟಂತಾಯಿತು. ಜತೆಗೆ ಪಕ್ಕದಲ್ಲಿದ್ದ ಗಂಡ ಬೇರೆ ದೈನ್ಯವಾಗಿ ಅವಳ ಕಡೆಗೆ ಮುಖ ತಿರುವಿದ. ಇದರಿಂದ ವೈದೇಹಿಯ ಮನಸ್ಸು ಕೊಂಚ ಕಹಿಯಾಗಲು ಕಾರಣವಾಯಿತು. ದುಃಖ ಮಿತಿಮೀರಿದರೆ ಹೃದಯ ಕಹಿಯಾಗುವುದೇನೂ ಆಶ್ಚರ್ಯವಲ್ಲ!

ಉಳಿದವರ ಮಕ್ಕಳನ್ನೆತ್ತಿಕೊಳ್ಳುವುದರಲ್ಲಿ ಈಗ ಮೊದಲಿನ ಸುಖ ದೊರಲಿಲ್ಲ. "ಈ ಮಗು ಚೆನ್ನಾಗಿದೆ. ಎಷ್ಟು ಸೊಗಸಾಗಿ ಆಡುತ್ತದೆ.

ಇದರ ತೊದಲು ಮಾತೇ ವೀಣೆಯ ಸಂಗೀತಕ್ಕಿಂತ ಇಂಪಾಗಿದೆ" ಎನ್ನುವ ಮಾತು ಮರೆಯಿತು. "ಈ ಮಗು ಚೆನ್ನಾಗಿದೆ. ಆದರೆ ಇದು ನನ್ನದಲ್ಲ! ನನ್ನದಲ್ಲದುದು ಹೇಗಿದ್ದರೆ ನನಗೇನು ಬಂತು ಭಾಗ್ಯ?" ಎಂಬ ಭಾವನೆ ಮೆಲ್ಲನೆ ಬೆಳೆಯಲಾರಂಭವಾಯಿತು. ಅಂದರೆ ಉಳಿದವರ ಮಕ್ಕಳಲ್ಲಿ ವಿಶ್ವಾಸ ತಗ್ಗಿತೆಂದಲ್ಲ. ತನಗೆ ಆಗದೇ ಇದ್ದ ಮಗುವಿನ ಪ್ರೇಮ ಅದನ್ನು ಮರೆಮಾಡಿತ್ತು ಅಷ್ಟೇ! ಅವುಗಳನ್ನು ಎಂದಿನಂತೆಯೇ ಮುದ್ದಾಡುತ್ತಿದ್ದಳು. ಆದರೆ ಆ ಮುದ್ದಾಟದಲ್ಲಿ ಮೊದಲಿನ ಪರಿಪೂರ್ಣ ಆನಂದವಿರಲಿಲ್ಲ. ಆನಂದಕ್ಕೆ ಇಲ್ಲಿ ಕಹಿಯೂ ಕೂಡಿಕೊಂಡು ಬೇವುಬೆಲ್ಲವಾಗಿತ್ತು.

ಒಂದು ಬಾರಿ ಅವಳ ಪಕ್ಕದ ಮನೆಯವರ ಮಗು—ಒಂದೂವರೆ ವರ್ಷದ ಮಗು—ತಪ್ಪಿಸಿಕೊಂಡು ಬಿಟ್ಟಿತ್ತು. ಆ ದಿನ ಬೆಳಿಗ್ಗೆ ಎಲ್ಲರೂ ಬೆಟ್ಟಕ್ಕೆ ಹೋಗಬೇಕೆಂದು ಅಷ್ಟು ದೂರ ನಡೆದುಕೊಂಡು ಹೋಗಿದ್ದರು. ಆದರೆ ಆ ದಿನ ಬಸ್ಸು ಸಿಗದೆ ಹಾಗೆಯೇ ಹಿಂತಿರುಗಿದ್ದರು. ಮಗು ಆ ದಾರಿಯನ್ನೇ ನೆನಪಿನಲ್ಲಿಟ್ಟುಕೊಂಡು ಯಾರಿಗೂ ಕಾಣದಂತೆ ಅಷ್ಟು ದೂರ ಹೊರಟುಹೋಗಿತ್ತು. ಮಗು ಎಲ್ಲೋ ಕಾಣದಾಯಿತಲ್ಲಾ ಏನಾಯಿತೋ ಎಂದು ಮನೆಯವರೆಲ್ಲ ಗಾಬರಿಪಡುತ್ತಿದ್ದರು. ಎಲ್ಲರೂ ಹಾರಾಡುತ್ತಿದ್ದರು. ಮಗು ಎಲ್ಲಿ, ಎಲ್ಲಿ ಎಂದು ಹುಡುಕಲು ಹೊರಟರು. ಅವರ ಮನೆಯಲ್ಲಿ ಅವರ ತಮ್ಮ ಇದ್ದವನು ಅಕ್ಕನ ಮೇಲೆ ರೇಗಾಡುತ್ತಿದ್ದ. "ಮಕ್ಕಳನ್ನು ನೋಡಿಕೊಳ್ಳಲಾಗದ ಇಂತಹವರಿಗೆ ಮಕ್ಕಳೇಕಾಗಬೇಕೋ ಕಾಣೆ!" ಎಂದು ಗುಡುಗಿದ. ಈ ಮಾತನ್ನು ಕೇಳಿದೊಡನೆಯೇ ವೈದೇಹಿಯ ಕಣ್ಣುಗಳಲ್ಲಿ ನೀರು ತಾನೇ ತಾನಾಗಿ ಉಕ್ಕಿತ್ತು. ತಾಯ್ತನದ ಸವಿ, ನೋವು, ಗಂಡಸಿಗೆ ಹೇಗೆ ತಿಳಿಯಬೇಕು?

ವೈದೇಹಿ ಅತ್ತೆಯ ಮನೆಗೆ ಬಂದು ಎರಡು ವರ್ಷ ಕಳೆಯಿತು. ಆದರೂ ಮೊಮ್ಮಗನನ್ನು ಆಡಿಸುವ ಅತ್ತೆಯ ಆಸೆ ಪೂರೈಸುವ ಸೂಚನೆಯೇ ಕಾಣಲಿಲ್ಲ. ದಿನ ಕಳೆದಂತೆ ಅತ್ತೆ ಗಡುಸಾಗುತ್ತ ಬಂದರು. ಮೊದಲಿನ ಮಮತೆ, ಮೃದುತೆಯೆಲ್ಲ ಇಳಿಮುಖವಾಗಿ ಅಸಮಾಧಾನ

ಮುಖಹಾಕಿತು. ಮೊದಲು ಬರಿಯ ಒಂದು ನೋಟದಲ್ಲಿದ್ದುದು ಈಗ ಮಾತಿಗೂ ಇಳಿದಿತ್ತು. ಮಾತು ಮಾತಿಗೂ ಅತ್ತೆ ವೈದೇಹಿಯನ್ನು ಹೀಯಾಳಿಸಲಾರಂಭಿಸಿದರು. ಯಾವುದೋ ಸಾಮಾನ್ಯ ಸಂಗತಿಗೆ ಗೊಣಗಲು ಆರಂಭಿಸಿ ಕೊನೆಗೆ "ಈ ಬಂಜೆಸೊಸೆಯನ್ನು ಕಟ್ಟಿ ಕೊಂಡುದು ನನ್ನ ಹಣೆಯ ಬರೆಹ" ಎಂದುಬಿಡುತ್ತಿದ್ದರು. ಆ ಮಾತು ಕೇಳಿದೊಡನೆಯೇ ವೈದೇಹಿಗೆ ವಿಷಸರ್ಪ ಕಚ್ಚಿದಂತಾಗುತ್ತಿತ್ತು. ಹೃದ ಯಾಂತರಾಳದಿಂದ ದುಃಖ ಚಿಮ್ಮಿಬರುತ್ತಿತ್ತು. ಆಗ ಮನಸ್ಸಿಗೆ ಸಮಾಧಾನವಾಗುವವರೆಗೂ ಕುಳಿತು ಅತ್ತುಬಿಡುತ್ತಿದ್ದಳು. ಆದರೆ ಅತ್ತೆಯ ಮೇಲೆ ಅವಳಿಗೆ ಕೊಂಚವಾದರೂ ಕೋಪ ಬರುತ್ತಿರಲಿಲ್ಲ. ತನ್ನದು ಹೇಗೆ ಒಡೆದ ಆಸೆಯೋ, ಅತ್ತೆಯದೂ ಹಾಗೆಯೇ ಎಂದು ಅವಳಿಗೆ ಗೊತ್ತು. ಹೃದಯದ ಆಸೆ ಚೂರಾದಾಗ ಒಡಕು ಧ್ವನಿ ಬರುವುದು ಸಹಜ. ಅದು ಅತ್ತೆಯ ತಪ್ಪಲ್ಲ, ತನ್ನದೇ ಎಂದು ತನ್ನ ಮೇಲೆಯೇ ತಪ್ಪುಹೊರಿಸಿಕೊಳ್ಳುತ್ತಿದ್ದಳು.

ಕೊನೆಗೂ ಒಮ್ಮೆ ಅವರೆಲ್ಲರ ಆಸೆ ಪೂರ್ಣವಾಗುವಂತೆ ತೋರಿತು. ಆರು ತಿಂಗಳಿಂದ ತಾನು ದಿನವೂ ಬೆಳಿಗ್ಗೆ ಮಾಡುತ್ತಿದ್ದ ಅಶ್ವತ್ಥ ಪ್ರದಕ್ಷಿಣೆಯ ಫಲವೆಂದು ವೈದೇಹಿಯ ನಂಬಿಕೆ. ಚಾಮುಂಡೇಶ್ವರಿಗೆ ತಾವು ಸಹಸ್ರನಾಮ ಮಾಡಿಸುವುದಾಗಿಯೂ, ಮುತ್ತೈದೆಯರನ್ನು ಕರೆಸಿ ಹೂವೀಳ್ಯ ಮಾಡಿಸುವುದಾಗಿಯೂ ಮಾಡಿಸಿಕೊಂಡಿದ್ದ ಹರಕೆಯ ಫಲವೆಂದು ವೈದೇಹಿಯ ಅತ್ತೆಯ ವಿಶ್ವಾಸ. ಗುಟ್ಟಾಗಿ ತನ್ನಲ್ಲಿಯೇ ಬಚ್ಚಿಟ್ಟುಕೊಂಡು, ಅರೆನಂಬಿಕೆಯಿಂದ, ಅರೆಸಂಶಯದಿಂದ ತಾನು ನಾಗರ ಪ್ರತಿಷ್ಠೆಗೆ ಹಣ ಕೊಟ್ಟುದರ ಫಲವೆಂದು ವೈದೇಹಿಯ ಗಂಡ. ಅಂತೂ ಮೂವರಿಗೂ ಅತಿ ಸಂತೋಷದ ಸುದ್ದಿ. ಮೂವರ ಏಕಮುಖ ಆಸೆ ಪೂರ್ಣವಾಗುವ ಆನಂದ. ಮನೆಯಲ್ಲಿ ಮತ್ತೆ ಹಿಂದಿನ ನಗೆ ಮೂಡಿತು. ಎಲ್ಲರ ಮುಖವೂ ಅರಳಿತು. ಅತ್ತೆಯಂತೂ ವೈದೇಹಿಯನ್ನು ಯಾವ ಕೆಲಸ ಮಾಡಲೂ ಬಿಡುತ್ತಿರಲಿಲ್ಲ. ತಮ್ಮ ಮಗಳಿದ್ದಿದ್ದರೆ ಎಷ್ಟು ಮಚ್ಚು ಟೆಯಿಂದ ನೋಡಿಕೊಳ್ಳುತ್ತಿದ್ದರೋ ಅಷ್ಟೇ ಎಚ್ಚರಿಕೆಯಿಂದ, ಮಮತೆ

ಯಿಂದ ವೈದೇಹಿಯನ್ನು ನೋಡಿಕೊಳ್ಳುತ್ತಿದ್ದರು. ಬಸುರಿಗೆ ಮೂರು ತಿಂಗಳಾಗುವ ಮೊದಲೇ ಬಯಕೆ ಸಂಕಟಗಳು ತೋರಿಕೊಂಡವು. ಆಗಂತೂ ವೈದೇಹಿಯ ಅತ್ತೆ ಸದಾ ಅವಳ ಹತ್ತಿರದಲ್ಲೇ ಇರುತ್ತಿದ್ದರು. ತಮ್ಮ ಸೊಸೆ ಸುಖವಾಗಿ ಹೆತ್ತು ಕಳೆದುಕೊಳ್ಳಲೆಂದು ನಿತ್ಯವೂ ತುಪ್ಪದ ದೀಪ ಹೊತ್ತಿಸುತ್ತಿದ್ದರು. ಶನಿವಾರವಂತೂ ಮನೆಯಲ್ಲಿ ಶನಿದೀಪ ಹೊತ್ತಿಸಿ, ಆಂಜನೇಯನ ಗುಡಿಗೆ ಹೋಗಿ ಅಲ್ಲಿ ಎಳ್ಳು ದೀಪ ಹೊತ್ತಿಸಿ ಸೊಸೆಗೆ ರಕ್ಷೆಯಿಟ್ಟ ಹೊರತು ಅವರಿಗೆ ಸಮಾಧಾನವಿಲ್ಲ.

ಮೂರನೆಯ ತಿಂಗಳಲ್ಲಿ ಮೊಗ್ಗು ಮುಡಿಸುವ ಶಾಸ್ತ್ರವೊಂದಿದೆ. ಇದು ಹೆಸರಿಗೆ ಅಷ್ಟೇ. ಸಾಮಾನ್ಯವಾಗಿ ಇದನ್ನು ಯಾರೂ ಸರಿಯಾಗಿ ಆಚರಿಸುವುದೇ ಇಲ್ಲ. ವೈದೇಹಿಯ ಅತ್ತೆ ಮಾತ್ರ ಅದನ್ನು ವಿಜೃಂಭಣೆ ಯಿಂದಲೇ ನಡೆಸಿಬಿಟ್ಟರು. ಆಗ ಹೊಲಿಸಲೇಬೇಕಾದ ಹಸುರು ಕುಪ್ಪ ಸಕ್ಕೆ ಸುಮಾರು ೪೦ ರೂಪಾಯಿ ಆಗಿರಬಹುದೆಂದು ಆರತಿಗೆ ಬಂದ ಹೆಂಗಸರ ಅಂದಾಜು. ಆರತಿಗಂತೂ ಸುತ್ತಲೂ ಹೂಬಿಟ್ಟ ಹೂಕುಂಡ ಗಳನ್ನಿಟ್ಟು ಮಗನಿಂದ ಮಂಟಪದಂತೆ ಕಟ್ಟಿಸಿ, ಒಳಗೆ ಕುರ್ಚಿಯನ್ನೇ ಸಿಂಹಾಸನವಾಗಿ ಮಾರ್ಪಡಿಸಿ ಶ್ರೀ ಶಾರದೆಯ ಅಲಂಕಾರ ಮಾಡಿ ಸೊಸೆಯನ್ನು ಕೂರಿಸಿದ್ದರು. ಅಂದಿನ ವೈದೇಹಿ ನಿಜವಾಗಿಯೂ ಜನಕನ ಮಗಳು ಸೀತೆಯಂತೆಯೇ ! ಕಣ್ಣೆಸರು ಆಗುವಷ್ಟು ಸುಂದರವಾಗಿ ತೋರು ತ್ತಿದ್ದಳು. ಅಂದಿನ ಆರತಿಸಾಮಾನು ಬಾಗಿನಕ್ಕೇ ಏನಿಲ್ಲೆಂದರೂ ೧೦೦ ರೂಪಾಯಿ ಖರ್ಚಾಗಿರಬೇಕು.

ಇದಾದ ಮೇಲೆ ಬಳೆ ತೊಡಿಸುವುದು. ತಾಯಿಯ ಮನೆಯಲ್ಲಾಗ ಬೇಕಾದುದನ್ನು ಅತ್ತೆಯ ಮನೆಯಲ್ಲೇ ಮಾಡಿಬಿಟ್ಟರು. ಗುರುತಿನ ಹೆಂಗಸರೆಲ್ಲಾ ಮತ್ತೆ ನಾಲ್ಕು ತಿಂಗಳು ಬಳೆಗಳನ್ನೇ ಕೊಂಡುಕೊಳ್ಳಲಿಲ್ಲ. ಅದಾದ ಮೇಲೆ ಸೀಮಂತೋತ್ಸವ. ಯಾವ ಶಾಸ್ತ್ರವನ್ನೂ ಚಾಚೂ ತಪ್ಪದೆ ವೈದೇಹಿಯ ಅತ್ತೆ ನೆರವೇರಿಸಿಕೊಂಡು ಬಂದರು. ಈ ಮಧ್ಯೆ ಅವರು ತಮ್ಮ ಹರಕೆಯನ್ನು ಮರೆಯಲಿಲ್ಲ. ಒಂದು ಶುಕ್ರವಾರ ಸೊಸೆ ಯನ್ನು ಕರೆದುಕೊಂಡು ಹೋಗಿ ಚಾಮುಂಡೇಶ್ವರಿಗೆ ಸಹಸ್ರನಾಮ

ಕುಂಕುಮಾರ್ಚನೆ ಮಾಡಿಸಿ, ಸುಖವಾಗಿ ಹೆತ್ತು ಕಳೆದುಕೊಂಡರೆ ಮತ್ತೊಂದು ಸಹಸ್ರನಾಮ ಮಾಡಿಸುವುದಾಗಿ ಹರಕೆ ಹೊತ್ತು ಹಿಂತಿರುಗಿದರು.

ಗಂಡುಮಗುವಾಗುವುದೋ ಹೆಣ್ಣಾಗುವುದೋ ಎಂದೊಂದು ಕಾತರ. ತಾಯಿಯಾಗುವ ಹೆಂಗಸಿಗೆ ತನ್ನ ಕೂಸು ಹೇಗಿದ್ದೀತೆಂಬ ಯೋಚನೆ ಮೊದಲಿನಿಂದಲೇ. ವೈದೇಹಿ ಎಷ್ಟೋ ಬಾರಿ ಸುಮ್ಮನೆ ಕಣ್ಣು ಮುಚ್ಚಿ ಕುಳಿತು ತನ್ನ ಮಗುವಿನ ಚಿತ್ರವನ್ನು ಕಲ್ಪನೆಯಲ್ಲೇ ಚಿತ್ರಿಸಿಕೊಳ್ಳುತ್ತಿದ್ದಳು. ಅದೇಕೋ ಏನೋ ಅವಳ ಮನಸ್ಸಿಗೆ ಮಗು ಹೆಣ್ಣು ಎನಿಸುತ್ತಿತ್ತು. ಆದರೆ ಅವಳ ಗಂಡನಿಗೆ, ಅತ್ತೆಗೆ ಬೇಕಾಗಿದ್ದುದು' ಹೆಣ್ಣಲ್ಲ, ಗಂಡು. ಕೂಡಲೇ ವೈದೇಹಿ ಮನಸ್ಸನ್ನು ಹರಿಬಿಡುತ್ತಿದ್ದಳು. ಕೂಸು ಗಂಡು. ಅದಕ್ಕೆ ಏನು ಹೆಸರಿಡುವುದು. ಎಂತಹ ಉಡುಪು ತೊಡಿಸುವುದು-ತಕ್ಷಣ ಜರಿಯ ಲಂಗದ ಚಿತ್ರ. ಇದರ ಜತೆಗೆ ಮತ್ತೆ ಮತ್ತೊಂದು ಯೋಚನೆ—ಮಗುವಿನ ಬಣ್ಣ—ಕಪ್ಪು ಬಣ್ಣವಾದರೆ ಚೆನ್ನಾಗಿರುವುದಿಲ್ಲ. ಶ್ರೀಕೃಷ್ಣನೇನೋ ನೀಲಮೇಘಶ್ಯಾಮನಾದರೂ ಅವನ ಬಣ್ಣ ಭೂಮಿಯ ಮಕ್ಕಳಿಗೆ ಒಗ್ಗದು. ಯಾವ ತಾಯಿಯೂ ತನ್ನ ಮಗುವಿಗೆ ಶ್ರೀಕೃಷ್ಣನ ಮೈ ಬಣ್ಣ ಬೇಕೆನ್ನಲಾರಳು. ಅಂದರೆ ಬಿಳುಪಾಗಿರಬೇಕೇ ಕೂಸು? ಅಚ್ಚ ಬಿಳುಪು ಬಯಸುವುದು ಹುಚ್ಚುತನ. ಮಗು ಗುಲಾಬಿಯ ಮುಖ ಪಡೆದಿರಬೇಕು. ಆದರೆ—ಕಪ್ಪಾಗಿಬಿಟ್ಟರೆ!—ಅದೊಂದು ಹೆದರಿಕೆ. ತನ್ನ ಮತ್ತು ತನ್ನ ಯಜಮಾನರ ಬಣ್ಣವೇನೂ ಕಪ್ಪಲ್ಲ. ಆದರೂ ಹೇಗೆ ಹೇಳಲು ಸಾಧ್ಯ? ಮೂರನೆಯ ಮನೆಯ ಬಾಲಸುಂದರಮ್ಮನ ಮಗು ಕಾಡಿಗೆಗಪ್ಪು. ಬಾಲಸುಂದರಮ್ಮನೂ ಅವಳ ಯಜಮಾನರೂ ಒಳ್ಳೆಯ ಬಿಳುಪು. ಅದಕ್ಕೆಂದೇ ವೈದೇಹಿ ಮನಸ್ಸಿನಲ್ಲಿ ಚಿಂತಿಸಿದಳು. ತನ್ನ ಪಕ್ಕದ ಮನೆಯ ಮಲೆಯಾಳಿ ಆಂಡಾಳಮ್ಮನ ಮಾತನ್ನು ಕೇಳುವುದೇ ಎಂದು. ಬಸುರಿಯಾದಾಗ ಅಕ್ಕಿಯನ್ನು ಹಾಗೆಯೇ ಮುಕ್ಕಿದರೆ ಮಗು ಬಿಳುಪಾಗುತ್ತದೆಂದು ಆಂಡಾಳಮ್ಮನ ಉಪದೇಶವಾಗಿತ್ತು. ಅದನ್ನು ಕೇಳಿದಾಗಲೇನೋ ವೈದೇಹಿಗೆ ಹೊಟ್ಟೆತುಂಬ ನಗುಬಂತು. ಆದರೆ

ಮಗುವಿನ ರೂಪದರ್ಶನದ ಬಯಕೆ ಹೆಚ್ಚಿದಂತೆ ಅದರಲ್ಲಿ ಅರ್ಥನಂಬಿಕೆ ಬಂದಿತು. ಆದರೆ ಒರಿಯು ಅಕ್ಕಿಯನ್ನು ಮುಕ್ಕುವುದಾದರೂ ಹೇಗೆ? ಆದರೆ ಈ ಎಲ್ಲ ಆಸೆಗಳಿಗೂ ಒಂದು ದಿನ ಕೊಡಲಿ ಪೆಟ್ಟು ಬಿತ್ತು. ಅದು ಸಹಿಸಲಾರದ ಪೆಟ್ಟು. ಅನಿರೀಕ್ಷಿತವಾದ ಪೆಟ್ಟು-ಸೀಮಂತವಾದ ಮೂರು ನಾಲ್ಕು ದಿನದನಂತರ ವೈದೇಹಿ ಊಟಮಾಡಿ ಮಲಗಿಕೊಳ್ಳಲೆಂದು ಹಾಸಿಗೆಯ ಹತ್ತಿರ ಹೋದಳು. ಹೊಟ್ಟೆಯಲ್ಲಿ ತೊಳಸು ಆರಂಭ ವಾಯಿತು. ಒಂದೆರಡು ನಿಮಿಷದಲ್ಲೇ ವಾಂತಿ—ಅಂದಿನಿಂದ ವೈದೇಹಿಯ ಸಂಕಟ ಹೇಳತೀರದು. ಮೈಯಿಳಿದು ಕಾಯಿಲೆ ಬಿದ್ದು ಅವಳು ಬದುಕಿ ಕೊಳ್ಳುವುದೇ ಕಷ್ಟವಾಯಿತು. ಆಗ ಆಸೆಗಳೆಲ್ಲಕ್ಕು ಬೆಂಕಿಬಿದ್ದು ಉರಿದು ಹೋದರೂ—ಅತ್ತೆ ಅದನ್ನು ಬಹು ಕಷ್ಟದಿಂದ ಸಹಿಸಿಕೊಂಡರು. ಅಷ್ಟೇ ಅಲ್ಲ. ಕಾಯಿಲೆ ಬಿದ್ದ ವೈದೇಹಿಗೆ ಶುಶ್ರೂಷೆ ಮಾಡಿದರು. ಆಗ ಅವರು ಅವಳಿಗೆ ಸಹಾನುಭೂತಿ, ಮಮತೆ ತೋರಿಸದಿದ್ದರೆ ವೈದೇಹಿ ಖಂಡಿತ ವಾಗಿ ಉಳಿಯುತ್ತಿರಲಿಲ್ಲ. ವೈದೇಹಿಗೆ ಒಂದು ಕಡೆ ಕಾಯಿಲೆಯ ಕಿತ್ತಾಟ, ಮತ್ತೊಂದು ಕಡೆ ಮನಸ್ಸಿನ ನೋವು. ಅಯ್ಯೋ! ತನ್ನ ಜನ್ಮ ಕೆಟ್ಟುದು. ಎಲ್ಲರ ಬಯಕೆಯ ಸಸಿಯನ್ನು ಮುರುಟಿ ಹಾಕಿದ ತನ್ನ ಹಣೆಯಬರಹ ಕೆಟ್ಟುದೆಂದು ತನ್ನನ್ನು ತಾನೇ ಹಳಿದುಕೊಳ್ಳುತ್ತಿದ್ದಳು. ಇಷ್ಟು ದಿನವೂ ಕಾಣುತ್ತಿದ್ದ ತಾಯ್ತನದ ಸ್ವಪ್ನ ಕಣ್ಣುಮುಂದೆಯೇ ಚೂರಾಗಿತ್ತು. ಆ ರಭಸಕ್ಕೆ ಮೈ ಬಾಡಿತ್ತು. ಆ ಸುಸ್ತಿನಿಂದ ಸುಧಾ ರಿಸಿಕೊಂಡು ಹಾಸಿಗೆ ಬಿಟ್ಟೇಳಬೇಕಾದರೆ ವೈದೇಹಿಗೆ ಮೂರು ತಿಂಗಳು ಬೇಕಾಯಿತು.

ತನ್ನ ದುರವಸ್ಥೆಯಿಂದ ಅತ್ತೆಗೂ, ಗಂಡನಿಗೂ ಎಷ್ಟು ನೋವೆಂ ಬುದು ಅವಳಿಗೆ ಗೊತ್ತು. ಅವಳ ಗಂಡ ಯಾವುದನ್ನೂ ಬಿಚ್ಚಿ ಹೇಳ ದಿದ್ದರೂ ಅವರ ಹೃದಯ ಚೂರಾಗಿದೆಯೆಂದೂ ಅವಳಿಗೆ ತಿಳಿದಿತ್ತು. ಆ ನೋವನ್ನೆಲ್ಲಾ ಒಳಗೆ ಹುದುಗಿಸಿಟ್ಟು ಕೊರಗನ್ನು ಕೊಂಚವಾದರೂ ಕಾಣಬಿಡದೆ, ತನಗೆ ಸಮಾಧಾನ ನೀಡುವ ಅವರಿಬ್ಬರ ಸ್ಥೈರ್ಯವನ್ನು ವೈದೇಹಿ ಬಹಳ ಮೆಚ್ಚಿದಳು. ಏಳೇಳು ಜನ್ಮಕ್ಕೂ ಇವರೇ ನನ್ನವರಾಗಲಿ

ಎಂದು ದೇವರಲ್ಲಿ ಮೊರೆಯಿಟ್ಟಳು. ಅವರ ಸಹಾನುಭೂತಿ, ಮಮತೆಯಲ್ಲಿ ಮೆಲ್ಲನೆ ಮೊದಲಿನಂತೆಯೇ ಆದಳು.

ವೈದೇಹಿ ಎರಡನೆಯ ಬಾರಿ ಬಸುರಾದಾಗ ಮನೆಯಲ್ಲಿ ಎಲ್ಲರ ಮುಖದಮೇಲೂ ಯಾವುದೋ ನೆರಳು ಬಿದ್ದಂತಿತ್ತು. ಹೊರಗೆ ಯಾರೂ ತೋರ್ಪಡಿಸದಿದ್ದರೂ ಒಳಗೇ ಎಲ್ಲರ ಮನಸ್ಸು ಕುದಿಯುತ್ತಿತ್ತು. ಕಳೆದಬಾರಿ ದುರಂತವಾಗಿ ಹೋಯಿತು. ಈ ಬಾರಿ ಏನಾಗಿ ಹೋಗುವುದೋ ಎಂದು ಎಲ್ಲರಿಗೂ ಮಿಡುಕು. ವೈದೇಹಿಯ ಮನಸ್ಸಿನ ತಾಕಲಾಟವಂತೂ ಹೇಳತೀರದು. ಹೇಗೋ, ಏನೋ, ಏನುಗತಿ— ಇದೇ ಯೋಚನೆ. ಈ ಬಾರಿಯೂ ಅತ್ತೆಯವರಿಂದ ಉಪಚಾರ ಕಡಿಮೆ ಯಾಗಲಿಲ್ಲ. ಸೊಸೆಗೆ ನಿಶ್ಶಕ್ತಿ. ಆ ನಿಶ್ಶಕ್ತಿಯಿದ್ದರೆ ಕೂಸಿಗೆ ಕೆಡುಕೆಂದು ಅನುಭವಿಯಾದ ಅತ್ತೆಗೆ ಗೊತ್ತಿತ್ತು. ಅದರಿಂದಲೇ ವೈದೇಹಿಗೆ ಯಾವು ದಕ್ಕೂ ಅವರು ಕಡಿಮೆ ಮಾಡಲಿಲ್ಲ. ಎಂದಿನಂತೆಯೇ ನೀರುನಿಡಿ, ಊಟಉಪಚಾರಗಳಾಗುತ್ತಿದ್ದುವು. ಇಷ್ಟಾದರೂ ಅವರಿಗೂ ತನಗೂ ಮಧ್ಯೆ ಯಾವುದೋ ಒಂದು ನೆರಳು ಕಾಲು ಚಾಚಿದೆಯೆಂದು ವೈದೇಹಿಗೆ ಅನಿಸಿತು. ಅದು ಸಹಜವಾಗಿಯೇ ತೋಚಿದ ಭಾವನೆ. ಮೊದಲಬಾರಿ ತನಗಾದ ಪ್ರಕರಣದಿಂದ ಅತ್ತೆಯ ಮೃದುತೆ ಕೊಂಚ ತಗ್ಗಿದೆಯೆಂದು ಅವಳ ಹೃದಯಕ್ಕೆ ಗೊತ್ತಾಗಿತ್ತು. ಆದರೂ ಅತ್ತೆಗೆ ತನ್ನ ವಿಷಯಕ್ಕೆ ಸಹಾನುಭೂತಿಯಿದೆ, ಅಕ್ಕರೆಯಿದೆ ಎಂಬುದೂ ಗೊತ್ತು. ಅದೊಂದು ವಿಚಿತ್ರ ಸನ್ನಿವೇಶ!

ವೈದೇಹಿಗೆ ದಿನ ತುಂಬಿದಂತೆ ಕಳವಳವೂ ಹೆಚ್ಚುತ್ತಾ ಬಂತು. ಅತ್ತೆಗೂ ಸಂಶಯ, ಗಂಡನಿಗೂ ಒಂದು ಬಗೆಯ ಅನಿಶ್ಚಯತೆ, ವೈದೇ ಹಿಗೂ ಕಳವಳ, ಕಾತರ. ಒಂದೊಂದು ದಿನವೂ ಒಂದೊಂದು ಯುಗವಾಗಿ ಪರಿಣಮಿಸುವಂತಿತ್ತು. ಅತ್ತೆಯಂತೂ ವೈದೇಹಿಯ ವಿಷಯ ಕೊರಗಿ ಕೊರಗಿ ತರಗಾಗಿಬಿಟ್ಟಿದ್ದರು. ಈ ಬಾರಿಯಾದರೂ ಸುಖವಾಗಿ ಹೆರಿಗೆ ಯಾಗಲೆಂದು ಅತ್ತೆ ಕಂಡಕಂಡ ದೇವರಿಗೆಲ್ಲಾ ಕೈಮುಗಿಯುತಿದ್ದರು. ಹರಕೆ ಹೊತ್ತಿದ್ದರು. ವೈದೇಹಿಯ ಜಾತಕವನ್ನು ತೆಗೆದುಕೊಂಡು

ಹೋಗಿ ತಮಗೆ ಗುರುತಾಗಿದ್ದ ಜೋಯಿಸರಿಗೆಲ್ಲಾ ತೋರಿಸಿತಂದಿದ್ದರು. ಕಣ್ಣಿನಲ್ಲಿ ಕಣ್ಣಿಟ್ಟು ಸೊಸೆಯನ್ನು ನೋಡಿಕೊಳ್ಳುತ್ತಿದ್ದರು. ಇಷ್ಟೆಲ್ಲಾ ಆದರೂ ಮನಸ್ಸಿನೊಳಗೆ ಅವಲಕ್ಕಿ ಕುಟ್ಟುತ್ತಿತ್ತು. ವೈದೇಹಿಗೆ ಹೇಗೋ ಏನೋ ಎಂದು ಯೋಚಿಸುತ್ತಾ ತಲೆಯ ಮೇಲೆ ಕೈಯಿಟ್ಟು ಕುಳಿತು ಬಿಡುತ್ತಿದ್ದರು. ಒಂದೊಂದುಬಾರಿ ಅವರಿಗೂ ಯೋಚನೆ ಬರುತ್ತಿತ್ತು. ಇದೂ ಹಾಗೆಯೇ ಆಗಿಬಿಟ್ಟರೆ ಆಗೇನು ?—ಈ ಪ್ರಶ್ನೆಗೆ ಉತ್ತರಕೊಡುವುದು ಕಷ್ಟ. ಹೇಗೆತಾನೇ ಅದಕ್ಕೆ ಉತ್ತರ ಕೊಡಲು ಸಾಧ್ಯ? ಆ ಯೋಚನೆ ಬಿಡುವುದೇ ಒಳ್ಳೆಯದು ಎಂದುಕೊಳ್ಳುತ್ತಿದ್ದರು. ಆದರೆ ಬಿಡುವೆನೆಂದರೂ ಅದೂ ಬಿಡಬೇಕಲ್ಲ! ಬೃಂದಾವನದಲ್ಲಿ ದೋಣಿಯಲ್ಲಿ ಕುಳಿತು ಹೋಗುತ್ತಿರುವಾಗ ಅಲ್ಲಿದ್ದ ಅಂಬಿಗ—ಸುಮಾರು ಅರವತ್ತು ವರುಷದವನು—ಮಕ್ಕಳಾಗಲಿಲ್ಲವೆಂದು ಆರನೆಯ ಮದುವೆಮಾಡಿಕೊಂಡೆನೆಂದು ಹೇಳಿರಲಿಲ್ಲವೇ ? ಛೆ! ತಮ್ಮ ಮಗನಿಗೆ ಹಾಗೆ ಮಾಡಲಾಗದು. ವೈದೇಹಿಗೆ ಅದು ದ್ರೋಹವಾಗುತ್ತದೆ ಎಂದುಕೊಳ್ಳುತ್ತಿದ್ದರು. ಆದರೆ ಆ ಯೋಚನೆ ಮಾತ್ರ ದಿನ ಕಳೆದಂತೆ ಕುಡಿಯಿಟ್ಟು ಸಸಿಯಾಗುತ್ತಿತ್ತು. ಈ ತಾಕಲಾಟದಲ್ಲಿ ಅವರೂ ಸಂಕಟಪಡುತ್ತಿದ್ದರು. ವೈದೇಹಿಗೂ ಅವರ ಈ ಸಂಕಟ ಚೆನ್ನಾಗಿ ಗೊತ್ತಿತ್ತು.

ವೈದೇಹಿಗೆ ಯಾವ ಉಪಚಾರಕ್ಕೂ ಕಡಿಮೆಯಿರಲಿಲ್ಲ. ಸಹಾನುಭೂತಿ, ವಿಶ್ವಾಸಗಳೆಲ್ಲ ಬೇಕಾದಷ್ಟಿತ್ತು. ಅದರ ಜತೆಗೇ ಹೃದಯದಲ್ಲಿ ಅಪಾರಭೀತಿ—ಹೆದರಿಕೆ ಮನೆ ಮಾಡಿಕೊಂಡಿತ್ತು. ಏನೋ ಕೆಡಕು ಆಗಿಹೋಗುತ್ತದೆಂದು ಅವಳಿಗೆ ಕಳವಳ. ಮೊದಲಬಾರಿ ಬಸುರಿಯಾದಾಗಿನ ಸಂತೋಷವಾಗಲಿ, ಆನಂದವಾಗಲಿ ಈಗ ಇರಲಿಲ್ಲ. ತಾಯ್ತನದ ಹಿಗ್ಗು ತಗ್ಗಿತ್ತು, ತಾಯ್ತನದ ಹೆದರಿಕೆ ಆರಂಭವಾಗಿತ್ತು. ಹೃದಯ ನುಗ್ಗುನುರಿಯಾಗುತ್ತಿತ್ತು. ಅದನ್ನು ಹೇಳಿಕೊಳ್ಳುವಂತಿಲ್ಲ. ಬಿಡುವಂತಿಲ್ಲ. ಮುಖ ಕಳೆಗುಂದುತ್ತಿದ್ದುದನ್ನು ಕಂಡ ಅಕ್ಕಪಕ್ಕದ ಮನೆಯವರೇನೋ "ಏನೂ ಹೆದರಿಕೊಳ್ಳಬೇಡಿ-ಎಲ್ಲಾ ಸರಿಯಾಗುತ್ತದೆ" ಎಂದು ಭರವಸೆ ಕೊಡುತ್ತಿದ್ದರು. ಆದರೂ ಆ ಭರವಸೆ ಅವಳಿಗೆ ಸಾಲದು.

ಅತ್ತೆ ಕೂಡ ಸಮಾಧಾನ ಹೇಳಿದ ದಿನಗಳುಂಟು, ಆ ಸಮಾಧಾನದ ಹಿಂದಿನ ಅಗಾಧ ಅಸಮಾಧಾನ ವೈದೇಹಿಯ ಹೃದಯತಾಗುತ್ತಿತ್ತು. ಆಗ—ಗುಟ್ಟಾಗಿ ಕಣ್ಣೀರು ಕರೆಯುತ್ತಿದ್ದಳು. ಮತ್ತೆ ಹೇಗೋ ಏನೋ ತನಗೆ ತಾನೇ ಸಮಾಧಾನ ತಂದುಕೊಳ್ಳುತ್ತಿದ್ದಳು.

ಅವಳ ವಿಷಯಕ್ಕೆ ಅವಳ ಗಂಡನಿಗೆ ಎಷ್ಟು ಕಳವಳವೆಂಬುದಕ್ಕೆ ಪ್ರತಿವಾರವೂ ಅವಳನ್ನು ಬಲವಂತದಿಂದ ಆಸ್ಪತ್ರೆಗೆ ಕರೆದೊಯ್ಯುತ್ತಿದ್ದುದೇ ಸಾಕ್ಷಿ. ಅದು ಕೂಡ ವೈದೇಹಿಗೆ ಬೇಸರವಾಗಹತ್ತಿತು. ಪ್ರತಿ ವಾರವೂ ತಪ್ಪದೆ ಆಸ್ಪತ್ರೆಗೆ ಹೋಗುತ್ತಿದ್ದುದೆಷ್ಟೋ ಅಷ್ಟೇ. ಲೇಡಿ ಡಾಕ್ಟರು ತಿಂಗಳಿಗೊಮ್ಮೆ ಪರೀಕ್ಷಿಸುವ ಆಟ ಹೂಡಿ ಕಳಿಸಿಬಿಡುತ್ತಿದ್ದರು. ಈ ಆಸ್ಪತ್ರೆಯ ಯಾತ್ರೆಯಿಂದ ಆದ ಫಲ—ಗಾಡಿಗೊಂದಿಷ್ಟು ಹಣ. ಗಂಡನ ಮನಸ್ಸಿಗೊಂದಿಷ್ಟು ಸಮಾಧಾನ ಅಷ್ಟೇ. ವೈದೇಹಿಗೂ ಲೇಡಿ ಡಾಕ್ಟರ ಮಾತಿನಿಂದ ಕೊಂಚ ಭರವಸೆ ಬಂದರೂ ಕಳವಳದ ಗಾಳಿಯಲ್ಲಿ ಅದು ತೂರಿಹೋಗಿರುತ್ತಿತ್ತು.

ಈ ಬಾರಿಯ ಬಾಣಂತಿತನಕ್ಕೆ ಮನೆಯಲ್ಲಿಟ್ಟುಕೊಳ್ಳುವುದು ಬೇಡ. ಆಸ್ಪತ್ರೆಗೇ ಕಳಿಸುವುದು ಸರಿಯೆಂದು ವೈದೇಹಿಯ ಅತ್ತೆ ತೀರ್ಮಾನಿಸಿದರು. ಮನೆಯಲ್ಲಿ ಏನಾದರೂ ಅಚಾತುರ್ಯ ಸಂಭವಿಸಿಬಿಟ್ಟರೆ ಎಂದು ಅವರಿಗೆ ಹೆದರಿಕೆ. ಆದರೆ ವೈದೇಹಿಗೆ ಆಸ್ಪತ್ರೆಗೆ ಹೋಗಲು ಹೆದರಿಕೆ. ಅಲ್ಲಿ ಚೆನ್ನಾಗಿ ನೋಡಿಕೊಳ್ಳುವರೋ ಇಲ್ಲವೋ ಎನ್ನುವ ಸಂಶಯ. ಈ ಸಂಶಯವನ್ನು ಅತ್ತೆಗೆ ತಿಳಿಸಲು ಬಹಳ ಸಂಕೋಚ. ಹಾಗೂ ಹೀಗೂ ಮಾಡಿ ಗಂಡನಿಗೆ ಹೇಳಿದಳು. ಆದರೆ ಗಂಡನೂ ಅದೇ ಮಾತು ಹೇಳಿದ. ಆಸ್ಪತ್ರೆಯೇ ವಾಸಿ. ಅಲ್ಲಿ ನರ್ಸುಗಳಿರುತ್ತಾರೆ. ಡಾಕ್ಟರು ಬಂದು ನೋಡಿಕೊಂಡು ಹೋಗುತ್ತಾರೆ. ಏನೂ ಕಷ್ಟವಾಗುವುದಿಲ್ಲ. ಅವಳನ್ನು ಸ್ಪೆಷಲ್ ವಾರ್ಡಿನಲ್ಲಿ ಇಡುವ ಏರ್ಪಾಡು ಮಾಡಿದರೆ ತಾವು ನಿತ್ಯವೂ ಅವಳ ಜತೆಯಲ್ಲೇ ಇರಬಹುದೆಂದು ಸಮಾಧಾನ ಹೇಳಿದ. ವೈದೇಹಿ ಎದುರುಮಾತಿಲ್ಲದೆ ಒಪ್ಪಿಕೊಂಡಳು.

ಒಂಬತ್ತನೆಯ ತಿಂಗಳು ತುಂಬಿದಾಗ ಒಂದು ದಿನ ಇದ್ದಕ್ಕಿದ್ದಂತೆ

ಮೊದಲಿನಂತೆಯೇ ವಾಂತಿ ಆರಂಭವಾಯಿತು. ಈ ಬಾರಿಯೂ ಅದೇ ಅಚಾತುರ್ಯವಾಗಿ ಹೋಗುವುದೆಂದು ಎಲ್ಲರಿಗೂ ಕಳವಳ. ಆದರೂ ಹಾಗಾಗಲಾರದೆಂದು ಮಿಣುಕು ಆಸೆ. ವಾಂತಿಯಾದ ಮೇಲೆ ವೈದೇಹಿಗೆ ಬಹಳ ಸುಸ್ತಾಗಿ ಮಲಗಿಕೊಂಡಳು. ಆಯಾಸದಿಂದ ಚೆನ್ನಾಗಿ ನಿದ್ರೆ ಯೇನೋ ಬಂತು. ಆದರೆ ಅವಳ ಅತ್ತೆ ಅವಳ ಹಾಸಿಗೆಯ ಪಕ್ಕದಲ್ಲೇ ಕಣ್ಣಿಗೆ ಎಣ್ಣೆ ಹಾಕಿಕೊಂಡು ಕುಳಿತಿದ್ದರು. ವೈದೇಹಿ ಎದ್ದಾಗ ಪಕ್ಕ ದಲ್ಲಿ ಇನ್ನೂ ಅತ್ತೆ ಕುಳಿತಿದ್ದುದನ್ನು ಕಂಡು ಎದೆಯಲ್ಲಿ ದುಃಖ ಒತ್ತಿ ಬಂತು. ಅತ್ತೆಗೆ ತನ್ನಲ್ಲಿ ಎಷ್ಟು ಮಮತೆಯೆಂದು ಹೃದಯ ಹಿಗ್ಗಿತು. ಈ ಬಾರಿಯಾದರೂ ಅವರ ಆಸೆ ಒಡೆಯದಿರಲೆಂದು ದೇವರಲ್ಲಿ ಬೇಡಿ ಕೊಂಡಳು.

ಅದೇ ದಿನ ರಾತ್ರಿ ವೈದೇಹಿಗೆ ಹೊಟ್ಟೆ ಕಿವುಚಿದಂತಾಯಿತು. ನೋವು ತಿನ್ನಲಾರಂಭ. ಹಿಂದಿನ ದಿನ ತಾನೇ ಆಸ್ಪತ್ರೆಗೆ ಹೋಗಿ ಪರೀಕ್ಷೆ ಮಾಡಿಸಿಕೊಂಡು ಬಂದಿದ್ದಳು. ಇನ್ನು ಹದಿನೈದು ದಿನದವರೆಗೂ ಏನೂ ಯೋಚನೆಯಿಲ್ಲವೆಂದು ಡಾಕ್ಟರು ಭರವಸೆ ಕೊಟ್ಟಿದ್ದರು. ಆದರೆ ಈಗ ಇದ್ದಕ್ಕಿದ್ದಂತೆ ನೋವು ತಿನ್ನಲಾರಂಭವಾಗಿತ್ತು. ಎಲ್ಲರಿಗೂ ಗಾಬರಿ. ಕ್ಷಣಕ್ಷಣಕ್ಕೂ ನೋವು ಹೆಚ್ಚಾಗುತ್ತಿತ್ತು. ವೈದೇಹಿ ಸಂಕಟ ದಲ್ಲಿ ಒದ್ದಾಡಿಬಿಟ್ಟಳು. ಗಂಡ ಹೋಗಿ ಗಾಡಿ ತಂದು, ವೈದೇಹಿಯನ್ನು ಗಾಡಿಯಲ್ಲಿ ಕೂರಿಸಿಕೊಳ್ಳುವ ಹೊತ್ತಿಗೆ ವೈದೇಹಿಗೆ ಅರ್ಧಜ್ಞಾನ. ಆಸ್ಪ ತ್ರೆಯ ಹತ್ತಿರ ಹೋಗುವ ವೇಳೆಗೆ ಅವಳಿಗೆ ಜ್ಞಾನ ತಪ್ಪಿ ಹೋಗಿತ್ತು.

ಒಂದು ಹಿಂಚಾಯಿತು, ಒಂದು ಮುಂಚಾಯಿತು. ಜ್ಞಾನತಪ್ಪಿದ ವೈದೇಹಿಯನ್ನು ನರ್ಸ್‌ಗಳು ಆಪರೇಷನ್ ರೂಮಿಗೆ ಕರೆದೊಯ್ದಿದ್ದರು. ವೈದೇಹಿಯ ಅತ್ತೆ, ಗಂಡ ಹೊರಗೆ ಛಳಿ ಗಾಳಿಯಲ್ಲಿ ಕಾದು ಕುಳಿತಿದ್ದರು. ಒಳಗಿನಿಂದ ಏನಾದರೂ ಮಗುವಿನ ಅಳುವಿನ ದನಿ ಕೇಳುವುದೋ ಎಂದು ಮೈಯೆಲ್ಲಾ ಕಿವಿಯಾಗಿ, ಕಾತರವಾಗಿ ಕುಳಿತಿದ್ದರು. ಕೇಳಿದುದು ನರ್ಸುಗಳ ಓಡಾಟದ ಸದ್ದು, ವೈದೇಹಿಯ ನರಳುವಿಕೆಯ ದನಿ ಮಾತ್ರ. ಈಬಾರಿಯೂ ಕೂಸಿನ ಅಳು ಕೇಳುವ ಸೌಭಾಗ್ಯ ಅವರದಾಗಲಿಲ್ಲ.

ಈ ಎರಡನೆಯ ಬಾಣಂತನದನಂತರ ವೈದೇಹಿಯ ಜೀವನ ದುರ್ಭರವಾಗುತ್ತಾ ಬಂತು. ಮೊದಲಬಾರಿ ಮೈಯಿಳಿದಾಗ ಅತ್ತೆ ಗಂಡ ಇವರು ಅಂತಃಕರಣ ತೋರಿದರು; ವಿಶ್ವಾಸ ತೋರಿದರು. ಮಮತೆಯ ಮದ್ದಿನಿಂದ ಅವಳ ಮನಸ್ಸಿನ ಗಾಯ ಮಾಗುವಂತೆ ಮಾಡಿದರು. ಅವರ ಸಹಾನುಭೂತಿಯ ನೆರಳಿನಲ್ಲಿ ಅವಳಿಗೆ ಆಗ ಅಷ್ಟೊಂದು ಕಷ್ಟವಾಗಲಿಲ್ಲ. ಆದರೆ ಈಗ—ಅಬ್ಬಾ—ಕೂಸು ಹೊಟ್ಟೆಯಲ್ಲಿಯೇ ಸತ್ತಿದ್ದು, ಅದನ್ನು ಹೊರತೆಗೆದರೆಂದಮೇಲೆ ಅತ್ತೆ ವಿರೋಧಪಕ್ಷವಾಗಿದ್ದರು. ಮೊದಲ ಬಾರಿಯ ಸಮಾಧಾನದ ಮಾತಿಗೆ ಬದಲು ಈಗ ಬರಿಯ ಕಟುನುಡಿಗಳು, ಉಪಚಾರಕ್ಕೆ ಬದಲು ತಾತ್ಸಾರ. ಮಾತು ಮಾತಿನಲ್ಲೂ ನಡೆ ನುಡಿಯಲ್ಲೂ ಒಂದೊಂದು ಸಣ್ಣಪುಟ್ಟ ವಿಷಯದಲ್ಲೂ ಈ ತಾತ್ಸಾರ ತುಂಬಿ ಕಾಣುತ್ತಿತ್ತು. ಎರಡುಬಾರಿ ತಾವು ಕಟ್ಟಿದ ಆಸೆಯ ಅರಮನೆ ನೆಲಸಮವಾದುದು ಇವರಿಗೆ ಸಹಿಸಲಾಗಲಿಲ್ಲ. ಇದರಲ್ಲಿ ವೈದೇಹಿಯದೇನೂ ತಪ್ಪಿಲ್ಲವೆಂದು ಅವರಿಗೆ ತೋರಲಿಲ್ಲ. ಮೊಮ್ಮಗನನ್ನು ಕಾಣುವ ಮಹಾ ಆಸೆಯಲ್ಲಿ ಸೊಸೆಯ ಮೇಲಿನ ಮಮತೆಯೆಲ್ಲಾ ಕರಗಿಹೋಯಿತು. ಅವರ ಈ ತಾತ್ಸಾರದ ಜತೆಗೆ ಗಂಡನ ಮೌನವನ್ನು ಸಹಿಸಬೇಕಾಗಿತ್ತು. ಮಾತೇ ಆಡದೆ ದಿನಗಳೆಷ್ಟೋ ಹಾಗೆಯೇ ಕಳೆದುಹೋಗುತ್ತಿದ್ದುವು. ಗಂಡನ ಮುಖದ ಮೇಲೆ ನಗು ಸುಳಿದುದನ್ನು ಕಂಡು ಯುಗಗಳಾದಂತಾಗಿತ್ತು. ನೋವಿನ ಭಾರದಲ್ಲಿ ಹೃದಯವಷ್ಟೇ ಅಲ್ಲ, ಮನಸ್ಸೂ ಕುಗ್ಗಿತ್ತು. ಅವರಿಗೆ ಸಮಾಧಾನ ನೀಡಲು ಅವಳಿಂದಲಂತೂ ಸಾಗುತ್ತಿರಲಿಲ್ಲ. ಅತ್ತೆ ಯಾವಾಗಲೂ ಗೊಣಗುತ್ತಲೇ ಇರುತ್ತಿದ್ದರು. ವೈದೇಹಿಗೆ ಇದೆಲ್ಲಾ ಸೇರಿ ಯೋಚನೆಯಿಂದ ತಿಂದ ಅನ್ನ ಮೈಹತ್ತುತ್ತಿರಲಿಲ್ಲ. ದಿನೇ ದಿನೇ ಕೊರಗು ಅವಳನ್ನು ತಿನ್ನುತ್ತಾ ಬಂತು. ಕೃಶಳಾಗುತ್ತಾ ಬಂದಳು. ಒಳ ಕೊರಗನ್ನು ಯಾರಿಗಾದರೂ ಹೇಳಿಕೊಳ್ಳೋಣವೆಂದರೆ ಯಾರೂ ಇಲ್ಲ. ಅಕ್ಕಪಕ್ಕದ ಮನೆಯವರು ಸಮಾಧಾನದ ಮಾತಾಡುವರೆಂದಿದ್ದಳು. ಆದರೆ ಯಾರೂ ತುಟಿಪಿಟಕ್ಕೆನ್ನಲಿಲ್ಲ. ಒಂದು ದಿನವೇನೋ ಒಬ್ಬಾಕೆ ಬಂದು ಬಾಯಿಮಾತಿನ ಸಮಾಧಾನ ಹೇಳಿದ್ದರು. ತನ್ನ ಕೋಣೆಯಿಂದ ಹೊರಗೆ ಹೋದೊಡನೆಯೇ ಅತ್ತೆಯೊಂದಿಗೆ ಅವರು ಆಡಿದ ಮಾತು ವೈದೇಹಿಯ ಕಿವಿಗೆ ಬಿದ್ದಿತ್ತು.

"ಅಯ್ಯೋ! ಸುಮ್ಮನೆ ತವರಿಗೆ ಅಟ್ಟಿಬಿಟ್ಟು ಮಗನಿಗೆ ಬೇರೆ ಮದುವೆ ಮಾಡಿಸಿ ಬಿಡಿ ಅಂದ್ರೆ"

"ಹೇಗಮ್ಮ—" ಅತ್ತೆ ಒಂದರೆನಿಮಿಷ ಸಂಪ್ರದಾಯಕ್ಕೋಸ್ಕರ ಕೋರಿಕೆಗೋಸ್ಕರ ಸಂಶಯ ತೋರಿದರು; ಅದೂ ವೈದೇಹಿಗೆ ಗೊತ್ತು.

"ಹೇಗಮ್ಮ ಅಂದರೆ ಹೇಗಾಗುತ್ತೆ ಹೇಳಿ—ಹೀಗೆಯೇ ಒಂದಾಗುತ್ತಲೇ ಒಂದು ಆದರೆ ನೀವು ಮೊಮ್ಮಕ್ಕಳನ್ನು ಕಾಣೋದು ಯಾವಾಗ? ಸುಮ್ಮನೆ ನಾ ಹೇಳಿದ ಹಾಗೆ ಮಾಡಿ—"

"ಏನೋಮ್ಮ"

"ಸಿಂಗಲಾಪುರದಲ್ಲಿ ನಮ್ಮ ಗುರುತಿನವರೊಬ್ಬರಿದಾರೆ. ಒಳ್ಳೇ ಜನ, ಮನೆತುಂಬಾ ಮಕ್ಕಳಿರೋವರು; ಹುಡುಗಿಯೂ ಚೆನ್ನಾಗಿದೆ—ಇನ್ನು ೧೪ ವರ್ಷ—ಸ್ವಸ್ಥವಾಗಿ ತಂದುಕೊಳ್ಳಿ"

ವೈದೇಹಿಗೆ ನೊಂದ ಗಾಯಕ್ಕೆ ಬರೆಹಾಕಿದಂತಾಯಿತು. ತನ್ನನ್ನು ಓಡಿಸಿ ಬಿಡುವರು—ಅಯ್ಯೋ! ತನ್ನ ಯಜಮಾನರನ್ನು ಬಿಟ್ಟು ತಾನೆಲ್ಲಿ ಹೋಗುವುದು—ಎಲ್ಲಿಹೋಗುವುದು—ಅವರು ಬೇರೆ ಒಂದು ಮದುವೆ ಮಾಡಿಕೊಂಡರೆ! ಅಬ್ಬಾ! ಅವಳು ಕಂಡ ಕೆಟ್ಟ ಕನಸುಗಳೆಲ್ಲದರ ಭಯ ಸೇರಿಸಿದರೂ ಈಗಾದಷ್ಟು ಹೆದರಿಕೆ ಮತ್ತೆಂದೂ ಆಗಿರಲಿಲ್ಲ. ಅವರಿಗೆ ಮತ್ತೊಂದು ಮದುವೆ—ತನಗೆ—ಗೊತ್ತೇ ಇದೆ. ಸವತಿಯ ಸೇವೆ, ಇಲ್ಲವೆ ತವರುಮನೆಯ ಗೋಳಾಟ. ಹೆಣ್ಣಿನ ಜೀವನ ಇಷ್ಟು ಕಠಿಣ, ಅತ್ತದರಿ, ಇತ್ತ ಪುಲಿಯಾಗುತ್ತದೆಂದು ಅವಳಿಗೆ ಇದುವರೆಗೂ ಗೊತ್ತಿರಲಿಲ್ಲ. ಹೆಣ್ಣಿನ ಬಾಳು ಕಣ್ಣೀರು ಎಂದು ಯಾರೋ ಅಂದಿದ್ದರು—ಬಹಳ ಹಿಂದೆ ತನಗೆ ಮದುವೆಯಾದ ಹೊಸದರಲ್ಲಿ. ಆಗ ತಾನು ಆ ಮಾತನ್ನು ನಗೆಯಲ್ಲಿ ಹಾರಿಸಿಬಿಟ್ಟಿದ್ದಳು. ಆದರೆ ಈಗ ಅದರ ಸತ್ಯ ಮನವರಿಕೆಯಾಗುತ್ತ ಬಂತು. ಮನಸ್ಸಿಗೆ ಒಂದು ನಿಮಿಷವಾಗಲಿ ಸಮಾಧಾನವಿಲ್ಲ. ಮೈಗಂತೂ ಹೇಳುವಂತೆಯೇ ಇಲ್ಲ. ಮಗು ಸತ್ತಿತ್ತು. ಬಾಣಂತಿಗೆ ಮೊಲೆಹಾಲು ಬಂದರೆ ಕೆಟ್ಟುದೆಂದು ಅದನ್ನು ನಿಲ್ಲಿಸಲು ಆಸ್ಪತ್ರೆಯಲ್ಲಿ ಔಷಧಿ ಬೇರೆ ಕೊಟ್ಟಿದ್ದರು. ಕೊಡುವಾಗಲೇನೋ ಇದರಿಂದೇನೂ ಕೆಡಕಾಗುವುದಿಲ್ಲವೆಂದು ಹೇಳಿ ಕೊಟ್ಟಿದ್ದರು. ಆದರೆ ವೈದೇಹಿಗೆ ಎದೆ

ನೋವು, ಪಕ್ಕೆ ನೋವು ಆರಂಭವಾಗಿತ್ತು. ಎದೆಗೆ ಹಾರೆ ಗಡಾರಿ ಗಳನ್ನು ಹಾಕಿ ತಿವಿದಂತೆ, ಪಕ್ಕೆಯ ಎಲುಬು ಎಲುಬನ್ನೂ ಸುತ್ತಿಗೆ ಯಿಂದ ಚಮ್ಮಟಿಗೆಯಿಂದ ಹೊಡೆದು ಪುಡಿ ಮಾಡಿದಂತೆ ತೋರುತ್ತಿತ್ತು. ತಾಯ್ತನದ ಕೋಲೆ ನಡೆಸಬೇಕಾಗಿತ್ತು. ಸಹಜವಾಗಿಯೇ ಉಕ್ಕಿ ಬರುವ ತಾಯ್ತನವನ್ನು ತಡೆಗಟ್ಟಬೇಕಾಗಿತ್ತು. ಹಿಂದೆ ತಾನು ಚಿಕ್ಕವ ಳಾಗಿದ್ದಾಗ ತಮ್ಮ ಮನೆಯ ಹಸುವಿನ ಕರು ಸತ್ತಾಗ ಹಸು ಒಂದೇ ಸಮನೆ ಆರ್ತಸ್ವರದಿಂದ ರಾತ್ರಿಯೆಲ್ಲಾ ಕೂಗಿಕೊಳ್ಳುತ್ತಿದ್ದುದನ್ನು ಕಂಡಿ ದ್ದಳು. ಇಷ್ಟು ಆರ್ಭಟ ಯಾತಕ್ಕೆ ಮಾಡುತ್ತದೆಂದು ಅವಳಿಗೆ ಆಗ ಗೊತ್ತಾಗಲಿಲ್ಲ. ಆದರೆ ಈಗ ಅದೇ ನೋವನ್ನು ತಾನೂ ಅನುಭವಿಸು ತ್ತಿದ್ದಳು. ಅದೇ ಮೂಕ ಸಂಕಟ, ಅದೇ ಕೊರಗು. ಅದೇ ನೋವು! ಔಷಧಿ ಅವಳಲ್ಲಿ ಅಳಿದುಳಿದ ಅಲ್ಪಸ್ವಲ್ಪ ಶಕ್ತಿಯನ್ನೂ ತಿಂದುಬಿಟ್ಟಿತು. ಈಗ ವೈದೇಹಿ ಬರಿಯ ಎಲುಬಿನ ಗೊಂಬೆಯಾಗಿದ್ದಳು. ಅದಕ್ಕೆ ಕೂಡಿ ದಂತೆ ಮನಸ್ಸಿನ ಕೊರಗು ಬೇರೆ! ವೈದೇಹಿಯ ಸೂಕ್ಷ್ಮ ಮನಸ್ಸಿಗೆ ಅತ್ತೆಯ ಮಾತಿನ ಚಾಟಿಯ ಪೆಟ್ಟುಗಳನ್ನು ಸಹಿಸಲಾಗುತ್ತಿರಲಿಲ್ಲ. ಒಂದೊಂದು ಪೆಟ್ಟು ಬಿದ್ದಾಗಲೂ ಕಣ್ಣು ಕೆಂಡವಾಗುತ್ತಿತ್ತು. ದುಃಖ ದಿಂದ—ಆದರೆ ದುಃಖ ಯಾರೊಂದಿಗೆ ತೋಡಿಕೊಳ್ಳುವುದು. ತನ್ನನ್ನು ಕಾಪಾಡುವ ಅತ್ತೆಯೇ ತನ್ನ ಮೇಲೆ ತಿರುಗಿಬಿದ್ದಿದ್ದರು. ಬಾಣಂತಿ— ಮಗುವಿಲ್ಲದಿದ್ದರೂ ತಾನು ಬಾಣಂತಿಯಲ್ಲವೇ. ಬಾಣಂತಿಗೆ ಒಂದಾದರೂ ಉಪಚಾರವಿಲ್ಲ. ನೀರುನಿಡಿ, ಊಟ ಉಪಚಾರ ಎಲ್ಲಾ ಕನಸಾಗಿ ಹೋಯಿತು. ಈಗ ಸಿಗುತ್ತಿದ್ದುದೆಂದರೆ ಕಟುಮಾತುಗಳು. ಬೈಗಳಿಗೇನೂ ಕಡಿಮೆಯಿರಲಿಲ್ಲ. ಅತ್ತೆ ಇದುವರೆಗೂ ಇಟ್ಟಿದ್ದ ಮಮತೆ ಈಗ ದ್ವೇಷವಾಗಿ ಹೋಗಿತ್ತು. ಒಮ್ಮೆ ಪ್ರೇಮಿಸುವ ವಸ್ತುವನ್ನು ನಾವು ದ್ವೇಷಿಸಲಾ ರಂಭಿಸಿದರೆ ಆ ದ್ವೇಷ ಪ್ರೇಮಕ್ಕಿಂತಲೂ ಹೆಚ್ಚು! ಹಾಗೆಯೇ ಆಗಿತ್ತು ಅತ್ತೆಯ ವಿಷಯ—ಮಾತು ಮಾತಿಗೂ "ಬಂಜೆ ಬಂಜೆ" ಎಂದು ಬೈಯು ತ್ತಿದ್ದರು. ವೈದೇಹಿಗೆ ಅಳಲು ಕೂಡ ಸಾಕಷ್ಟು ತ್ರಾಣವಿರಲಿಲ್ಲ.

ದಿನ ಬೆಳಗಾದರೆ ಮಗನಿಗೆ ಬೇರೆ ಮದುವೆ ಮಾಡುವ ಮಾತು ಹೊರತು ಬೇರೇನೂ ಇಲ್ಲ. "ಕೆಟ್ಟ ಕುಲದ ಹೆಣ್ಣು, ಕೂಸುಗಳನ್ನೆಲ್ಲಾ

ತಿಂದುಕೊಳ್ಳುವ ಶಾಕಿನಿ, ಮನೆ ಹಾಳುಮಾಡಲು ಬಂದ ಡಾಕಿನಿ, ಅವಳಿಗೆಲ್ಲಿ ಮಗುವಾಗುತ್ತದೆ, ಅವಳು ನಮ್ಮ ಕುಲ ಹಾಳುಮಾಡಲೆಂದೇ ನಮ್ಮ ಮನೆ ಮೆಟ್ಟಿದುದು" ಎಂದು ಕಂಡ ಕಂಡ ಜನರೊಂದಿಗೆಲ್ಲಾ ಅತ್ತೆ ತನ್ನನ್ನು ಬೈಯುತ್ತಿದ್ದುದು ವೈದೇಹಿಗೆ ಗೊತ್ತು. ಈಗ ವೈದೇಹಿಯ ಹತ್ತಿರಕ್ಕೆ ಯಾವ ಮಗುವೂ ಬರುತ್ತಿರಲಿಲ್ಲ. ಮೊದಲು ಅವಳ ಸುತ್ತ ಮುತ್ತಿಕೊಂಡು ಕತೆ ಹಾಡು ಹೇಳಿಸಿಕೊಳ್ಳುತ್ತಿದ್ದ ಮಕ್ಕಳು ಅವಳನ್ನು ಕಾಣಲು ಹೆದರುತ್ತಿದ್ದರು. ಅವಳ ದೃಷ್ಟಿ ಬಿದ್ದರೇ ಸಾಕು ಮಕ್ಕಳಿಗೆ ಚೀಟು ಕಟ್ಟಿಸಬೇಕೆಂದು ಸುತ್ತಮುತ್ತಿನ ಹೆಂಗಸರ ಭಾವನೆ. ಅಂತಹ ವಿಷಮ ವಾತಾವರಣದಲ್ಲಿ ವೈದೇಹಿಗೆ ಸಮಾಧಾನವಾದರೂ ಎಲ್ಲಿ ಸಿಗಬೇಕು? ಹೇಗೆ ಸಿಗಬೇಕು!

ತಾಯ್ತನದ ಆಸೆ ವೈದೇಹಿಯ ಹೃದಯದಲ್ಲಿ ಹಿಂಗಿಹೋಗಲಿಲ್ಲ. ಅದು ದಿನ ಕಳೆದಂತೆ ಇನ್ನೂ ಪ್ರಖರವಾಯಿತು. ತಾನೊಮ್ಮೆ ತಾಯಿಯಾದರೆ ತನಗೆ ಈ ಕಷ್ಟಗಳೆಲ್ಲಾ ತಪ್ಪಿಹೋಗುತ್ತವೆ. ತಾನು ಸುಖವಾಗಿರಬಹುದು. ಸಂಸಾರ ಒಪ್ಪವಾಗುತ್ತದೆ. ಈಗಿನ ವೈಷಮ್ಯ ನೋವು, ಕೊರಗುಗಳಿರುವುದಿಲ್ಲವೆಂದು ಅವಳ ಕಲ್ಪನೆ. ಆದರೆ ತಾಯ್ತನ ತನ್ನ ಹಣೆಯಲ್ಲಿ ಬರೆದಿಲ್ಲವೋ ಏನೋ? ತಾನು ಹಿಂದಿನ ಜನ್ಮದಲ್ಲಿ ಯಾರ ಮಕ್ಕಳಿಗೆ ಮೃತ್ಯುವಾಗಿದ್ದೆನೋ ಈಗ ತನ್ನ ಮಕ್ಕಳು ತನಗೆ ದಕ್ಕುತ್ತಿಲ್ಲವೆಂದು ತನ್ನ ಅದೃಷ್ಟಕ್ಕಾಗಿ ಅತ್ತುಕೊಂಡಳು. ಆದರೆ ಅತ್ತರೆ ಸಮಾಧಾನಕ್ಕೆ ಬದಲು ನೋವು ಹೆಚ್ಚುತ್ತಿತ್ತು. ಅತ್ತೆಯೆಲ್ಲಾದರೂ ತಾನು ಅಳುವುದನ್ನು ಕಂಡುಬಿಡುವರೋ ಎಂಬ ದಿಗಿಲು ಬೇರೆ. ಒಂದು ದಿನ ವೈದೇಹಿ ಅಳುತ್ತಿದ್ದಾಗ ಅತ್ತೆ ನೋಡಿ "ಕಣ್ಣೀರಿನಲ್ಲಿ ನಮ್ಮ ಮನೆ ತೊಳೆದು ಹಾಕಿಬಿಡು" ಎಂದು ಅಂದಿದ್ದರು. ಅತ್ತೆ ಏನೆಂದರೂ ಗಂಡ ಸುಮ್ಮನಿರುತ್ತಿದ್ದ. ವೈದೇಹಿಯ ಪರವಾಗಿ ಒಂದು ಮಾತನ್ನೂ ಆಡುತ್ತಿರಲಿಲ್ಲ. ಮೌನವಾಗಿಯೇ ಅವಳ ಕಡೆಗೆ ತಾತ್ಸಾರ ತೋರಿ ಹೊರಟು ಹೋಗುತ್ತಿದ್ದ. ಮೂಲೆಯಲ್ಲಿದ್ದ ಪೊರಕೆಯೇ ನಿನಗಿಂತ ವಾಸಿ. ಅದು ಕೊಂಚವಾದರೂ ಉಪಯೋಗಕ್ಕೆ ಬರುತ್ತದೆ ಎನ್ನುವಂತಿತ್ತು ಅವನ ದೃಷ್ಟಿ! ಅದೊಂದು ನೋಟವೇ ಸಾಕು ವೈದೇಹಿಯ ಎಲ್ಲಾ ಆಸೆಗಳೂ ತರಗಾಗಲು!

ಕೊನೆಗೂ ವೈದೇಹಿ ಮೂರನೆಯ ಬಾರಿ ಬಸುರಾದಳು. ಅವಳಿಗೆ ಆಸೆ ನಿರಾಸೆ! ನಿರಾಸೆಯ ನೆಲಗಟ್ಟಿನ ಮೇಲೆ ಆಸೆಯ ಗುಡಿಸಲು ಕಟ್ಟಿತ್ತು ಅವಳ ಹೃದಯ. ಎಲ್ಲಾ ಆಸೆ ಆಕಾಂಕ್ಷೆಗಳೂ ಮುರಿದು ಹೋಗುವ ಕೊನೆಯ ವಿಷಮ ನಿಮಿಷದಲ್ಲೂ ಆಸೆ ಇದ್ದಕ್ಕಿದ್ದಂತೆ ಚಿಗುರೊಡೆದಿತ್ತು. ಈ ಬಾರಿ ಬಸುರಾದರೆ ಎಲ್ಲವೂ ಸರಿಹೋಗಬಹುದು. ಬಂಜೆತನ ಕೊನೆಯಾಗಿ ತಾಯ್ತನ ಬರಬಹುದೆನ್ನುವ ಆಸೆ. ಆದರೆ ಬಸು ರೆಂದರೆ ಭಯ! ಮೊದಲೆರಡು ಬಾರಿಯ ಅನುಭವ ಮನಸ್ಸಿನಲ್ಲಿ ಅಚ್ಚಳಿಯ ದಂತೆ ಮೂಡಿತ್ತು. ಬರೆಯ ಕರೆ ಇನ್ನೂ ಸುಡುತ್ತಿತ್ತು. ಅಂತಹುದರಲ್ಲಿ ಈಗ—ಆದರೂ ವೈದೇಹಿಗೆ ತಾಯ್ತನದ ಹುಚ್ಚು ಆಸೆ! ಹೀಗಾಗಿ ಆಸೆ ನಿರಾಸೆಗಳ ಎದುರುಗಾಳಿಗೆ ಸಿಕ್ಕಿ ಅವಳ ಹೃದಯದ ಪಟ ತೂರಾಡುತ್ತಿತ್ತು. ಈ ಬಾರಿ ಸೊಸೆ ಬಸುರಾದುದರಿಂದ ವೈದೇಹಿಯ ಅತ್ತೆಯೇನೂ ಸಂತೋಷ ಪಡಲಿಲ್ಲ. "ಹುಳುಕುಮರದಲ್ಲಿ ಹುಳುಬಿದ್ದ ಹಣ್ಣೇ" ಎಂದು ಅಂದರು. ಆ ಮಾತಿನಿಂದ ಸೊಸೆಯ ಮನಸ್ಸಿಗೆ ಎಷ್ಟು ನೋವಾಗಬಹುದೆಂಬುದನ್ನು ಅವರು ಯೋಚನೆ ಮಾಡಲೇ ಇಲ್ಲ. ವೈದೇಹಿ ಈಗ ಅವರ ಪಾಲಿಗೆ ಹೆಣ್ಣಲ್ಲ. ಅದೂ ಒಂದು ಪ್ರಾಣಿ ಎನ್ನುವ ತುಚ್ಛಭಾವನೆ. ತಾವು ಅವಳಿಗೆ ಸಹಾನುಭೂತಿ ನೀಡಬೇಕು. ತಾವೀಗ ತೋರುತ್ತಿರುವ ತಾತ್ಸಾರ ತಪ್ಪು ಎಂದು ಅವರಿಗೆ ತೋರಲೇ ಇಲ್ಲ. ಮೊಮ್ಮಗನನ್ನು ಕಾಣುವ ಆಸೆ, ಆತುರ ಅವರನ್ನು ಉಳಿದುದೆಲ್ಲಕ್ಕು ಕುರುಡಾಗಿಸಿತ್ತು. ವೈದೇಹಿಯ ಮೂಲಕ ಮೊಮ್ಮಗ ಆಗಲಾರನೆಂದು ಅವರಿಗೆ ಈಗ ದೃಢ ವಾಗಿ ಹೋಗಿತ್ತು. ಅಂದಮೇಲೆ ಅವಳಿಂದ ತಮಗಿನ್ನೇನು? ಅದರ ಪರಿಣಾಮ ವೈದೇಹಿಯ ನೊಂದ ಮನಸ್ಸಿನಮೇಲೆ ಏನಾಗಬಹುದೆಂಬು ದನ್ನು ಅವರು ಸಾಮಾನ್ಯವಾಗಿ ಯೋಚಿಸುತ್ತಿರಲಿಲ್ಲ. ಯೋಚಿಸುವಷ್ಟು ಸಮಾಧಾನ ಅವರಿಗೆ ಇರುತ್ತಲೂ ಇರಲಿಲ್ಲ. ಇಷ್ಟಾದರೂ ಒಂದೊಂದು ಬಾರಿ ಆಸೆ ತೋರುತ್ತಿತ್ತು. ಮೊದಲೆರಡು ಕೆಟ್ಟರೂ ಮೂರನೆಯದೇಕೆ ಸರಿಹೋಗಬಾರದು ಎಂದೂ ಒಮ್ಮೊಮ್ಮೆ ಯೋಚನೆ ಬರುತ್ತಿತ್ತು. ಮೂರನೆಯದು ಸರಿಹೋಗಬಹುದು ಎಂದು ಅನಿಸಿದಾಗ ಕಾಠಿಣ್ಯ ಇದ್ದ ಕ್ಕಿದ್ದಂತೆ ಮಾಯವಾಗುತ್ತಿತ್ತು. ವೈದೇಹಿಗೆ ಆಗ ಅವರು ತಾಯಿಯಾ

ಗುತ್ತಿದ್ದರು. ಆದರೆ ಆ ಭಾವನೆ ಅಪರೂಪ. ಒಂದರೂ ಕ್ಷಣಕಾಲ ಮಾತ್ರ. ಮತ್ತೆ ಅವರ ಕಟುತ್ವ ಮೇಲುಗೈಯಾಗುತ್ತಿತ್ತು. ಮೃದುತೆ ಯೆಲ್ಲ ಮಂಜಿನ ಹನಿಯಂತೆ ಮಾಯವಾಗುತ್ತಿತ್ತು.

ದಿನ ಕಳೆದಂತೆ ವೈದೇಹಿಯ ಮನಸ್ಸಿನ ನೋವು ಹೆಚ್ಚುತ್ತಾಬಂತು. ಈ ಬಾರಿ ಏನಾದರೂ ಅಚಾತುರ್ಯವಾಗಿ ಬಿಟ್ಟರೆ ಖಂಡಿತ ತನ್ನ ಬಾಳು ಮಣ್ಣುಗೂಡಿದಂತೆಯೇ ಎಂದು ಅವಳಿಗೆ ಸ್ಥಿರವಾಗಿ ಹೋಗಿತ್ತು. ಅತ್ತೆಯ ಮಾತುಮಾತಿನಲ್ಲೂ ಅವಳಿಗೆ ಅದು ತೋರುತ್ತಿತ್ತು. ಒಂದೊಂದುಬಾರಿ ಅತ್ತೆ ಮಮತೆ ತೋರಿದರೂ ಅದು ಅವರ ಕಾಠಿಣ್ಯದಲ್ಲಿ ಅಳಿಸಿಹೋಗು ತ್ತಿತ್ತು. ತನ್ನ ಗಂಡ ಕೂಡ ಆ ಮಾತಿಗೆ ಒಪ್ಪಿರುವುದು ಅವಳಿಗೆ ಗೊತ್ತು. ಆವತ್ತು—ಎಂದರೆ ಎರಡು ತಿಂಗಳ ಹಿಂದೆ, ವೈದೇಹಿಗೆ ಏಳು ತಿಂಗಳು ತುಂಬಿ ದ್ದಾಗ—ಗಂಡ ಅತ್ತೆಯೊಂದಿಗೆ ಮಾತಾಡುವುದು ಅವಳ ಕಿವಿಗೆ ಬಿದ್ದಿತ್ತು—

"ಅವಳಿಗೆ ಏಳು ತಿಂಗಳಾಯಿತಲ್ಲವೇ ಅಮ್ಮ?" ನೊಂದ ದನಿಯಲ್ಲಿ ಗಂಡ ಕೇಳಿದ.

"ಹೂಂ, ಏಳಾಯಿತು. ಆದರೇನು?" ಗಡುಸಾಗಿಯೇ ಅಂದರು ಅತ್ತೆ.

"ಏನೋ ದೇವರ ದಯದಿಂದ ಈಬಾರಿಯಾದರೂ ಸರಿಯಾದರೆ—"

"ನನಗೇನೋ ನಂಬಿಕೆಯಿಲ್ಲಪ್ಪ—ಆದರೆ ನೋಡು—ನಾನಾಗಲೇ ಎಲ್ಲಾ ನೋಡಿದೀನಿ. ಸಿಂಗಲಾಪುರದ ಶಿರಸ್ತೇದಾರ್ ರಾಮಸ್ವಾಮಿಯ ಮಗಳು ಸರೋಜ—ಒಳ್ಳೆಯ ಹುಡುಗಿ—ಇನ್ನೂ ೧೪ ವರ್ಷ—"

"ಈಗ ಆ ಮಾತು ಬೇಡಮ್ಮ—"

ತನ್ನ ಗಂಡನ ಈ ಮಾತು ಅರೆಮನಸ್ಸಿನದೆಂದು ವೈದೇಹಿಗೆ ಹೇಳ ಬೇಕಾಗಿರಲಿಲ್ಲ. ಅತ್ತೆ ಇನ್ನೂ ಕೊಂಚ ಬಲವಂತಮಾಡಿದರೆ ಒಪ್ಪಿಗೆ ಒಡನೆಯೇ ಎಂದು ಅವಳಿಗೆ ಗೊತ್ತು. ಮುಂದಿನಮಾತು ಕೇಳದಿರಲೆಂದು ಕಿವಿ ಮುಚ್ಚಿಕೊಂಡಿದ್ದಳು.

ನೆನಪಿನಲ್ಲಿ ಈ ಮಾತೆಲ್ಲಾ ಹಾದುಹೋದಂತೆ ವೈದೇಹಿಯ ಕಣ್ಣಿ ನಲ್ಲಿ ಒಂದೇ ಸಮನಾಗಿ ನೀರು ಹರಿಯುತ್ತಿತ್ತು. ನರ್ಸ್ ಮೆಲ್ಲನೆ ಕಣ್ಣೊ ನ್ನೊರಸುತ್ತಾ "ಯಾಕಮ್ಮ?" ಎಂದಳು.

ಅವಳ ಈ ಮೃದುಮಾತಿನಿಂದ ವೈದೇಹಿಯ ಹೃದಯದ ನೋವು ಮತ್ತೂ ಹೆಚ್ಚಿತು. ಬಾಳಿನ ದುಃಖವೆಲ್ಲಾ ಒಂದೇಸಾರಿಗೆ ಉಮ್ಮಳಿಸಿ ಬಂತು. ಬಿಕ್ಕಿ ಬಿಕ್ಕಿ ಅತ್ತು ಮುಖ ಮುಚ್ಚಿಕೊಂಡಳು. ನೆನಪಿನ ಅನುಭವದಿಂದ ಮನಸ್ಸಿಗೆ ಬಹಳ ಆಯಾಸವಾಗಿತ್ತು. ನೋವು ತಿಂದು ತಿಂದು ಮೈ ನಿಶ್ಯಕ್ತಿಯಿಂದ ಬಳಲಿತ್ತು. ತಲೆ ಗಿರ್ರನೆ ಸುತ್ತುವಂತಾಗಿ ಇದ್ದಕಿದ್ದಂತೆ ನೋವು ಹೆಚ್ಚಾಯಿತು.

"ಅಯ್ಯೋ!" ನೋವಿನಲ್ಲಿ ಮತ್ತೊಮ್ಮೆ ಜೋರಾಗಿ ಕಿರಿಚಿಕೊಂಡಳು.

ನರ್ಸ್ ಮೆಲ್ಲನೆ ಬಂದು ಅವಳ ಕೈ ಹಿಡಿದುಕೊಂಡಳು. ಮನಸ್ಸಿನ ಚಿಂತೆಯಿಂದ ವೈದೇಹಿಯ ಮೈ ಕಾದುಹೋಗಿತ್ತು. ಹೊಟ್ಟೆಯಮೇಲೆ ಭಾರವಾದ ಕಲ್ಲು ಹಾಕಿದಂತಾಗಿತ್ತು. ಏನು ಮಾಡಿದರೂ ಅವಳಿಗೆ ಸಮಾಧಾನವಾಗಲೊಲ್ಲದು. ನರ್ಸ್ ಮತ್ತೇನೂ ಮಾಡಲು ತೋರದೆ ಡಾಕ್ಟರಿಗೆ ಹೇಳಿಕಳಿಸಿದಳು.

ವೈದೇಹಿಯ ಮೈ ಕಾವಷ್ಟೇ ಅಲ್ಲದೆ ಮನಸ್ಸಿನ ಕಾವೂ ಮಿತಿ ಮೀರಿತ್ತು. ಈ ಅತಿಕಾವಿನಲ್ಲಿ ಪ್ರತಿಯೊಂದು ಭೂತಾಕಾರ ತಾಳುತ್ತಿತ್ತು. ಕಣ್ಣಿನ ಮುಂದಿದ್ದುದೆಲ್ಲಾ ಮಸಕಾಗಿ ಕಲ್ಪನೆಯದೆಲ್ಲಾ ಸ್ಫುಟವಾಗಿ ಕಾಣಹತ್ತಿತು. ಈ ಬಾರಿ ತಾನು ತಾಯಿಯಾಗದಿದ್ದರೆ, ಕೂಸು ಉಳಿಯದಿದ್ದರೆ, ತನಗೆ ಬೀದಿಯೇ ಗತಿ, ತನ್ನನ್ನು ಅತ್ತೆ ಇರಗೊಡುವುದಿಲ್ಲ, ಗಂಡ ಬೇರೆ ಮದುವೆಯನ್ನು ಖಂಡಿತವಾಗಿ ಮಾಡಿಕೊಳ್ಳುವನೆಂಬುದು ಮನಸ್ಸಿನಲ್ಲಿ ಕೊರೆಯುತ್ತಿತ್ತು. ಅರೆಮರೆವಿನಲ್ಲಿ ಧಿಗ್ಗನೆ ಮನಸ್ಸಿನ ಹಿನ್ನೆಲೆಯಿಂದ ಅತ್ತೆಯ ಆಕೃತಿ—ಒಂದಕ್ಕೆ ನೂರರಷ್ಟು ಆಕಾರ ತಾಳಿ ಗುಡುಗಿತು.

"ನೀನು ಸಾಯಿ—ನೀನು ಸಾಯಿ"

"ಅಯ್ಯೋ! ಅಯ್ಯೋ!" ಎಂದಳು ವೈದೇಹಿ.

"ನೀನು ಸಾಯಿ! ನನ್ನ ಮಗನಿಗೆ ಬೇರೆ ಮದುವೆ!"

ಅತ್ತೆ ಗಹಗಹಿಸಿ ನಕ್ಕಂತಾಯಿತು. ಆ ನಗೆಯ ಸಿಡಿಲು ತಲೆ ತಿರುಗುವಂತಿತ್ತು.

" ಅಯ್ಯೋ ! ಅಯ್ಯೋ !"

ವೈದೇಹಿಗೆ ಹೆದರಿಕೆಯಲ್ಲಿ, ಪ್ರಾಣಭೀತಿಯಲ್ಲಿ ಮಾತೇ ಹೊರಡದು; ಕೂಗಿಕೊಳ್ಳಬೇಕೆಂದಿದ್ದುದು ಕೊರಳಿನಲ್ಲಿ ಸಿಕ್ಕಿಹಾಕಿಕೊಂಡಿತು.

ಡಾಕ್ಟರು ಅವಳಿಗೆ ಕ್ಲೋರೋಫಾರಂ ಕೊಟ್ಟರು. ತೋರಿಕೆಗೆ ವೈದೇಹಿಗೆ ಜ್ಞಾನ ತಪ್ಪಿತು. ಆದರೆ ಒಳಗೆ ಕಲ್ಪನೆ, ಮನಸ್ಸಿನ ಹಿನ್ನೆಲೆ ನಿದ್ದೆಮಾಡುತ್ತಿರಲಿಲ್ಲ. ಬುದ್ಧಿಯ ಅಂತರಾಳ ಚುರುಕಿನಿಂದ ಕೆಲಸ ಮಾಡುತ್ತಿತ್ತು. ಆ ಅರಿವಿಲ್ಲದ ಅರಿವಿನಲ್ಲಿ ಒಂದು ಭಯಂಕರ ಸ್ವಪ್ನ— ಅತ್ತೆ ರುದ್ರ ರೂಪತಾಳಿ, ಮಹಾ ಕಾಳಿಯಾಗಿ ತನ್ನನ್ನು ಮನೆಯಿಂದ ಹೊರದೂಡುತ್ತಿರುವರು. ತಾನು ಹೊಸಲಿನಲ್ಲಿ ನಿಂತು ಎಷ್ಟೇ ಬೇಡಿ ಕೊಂಡರೂ ಕೊಂಚವಾದರೂ ಕರುಣೆ ತೋರಿಸುವುದಿಲ್ಲ. ಪಕ್ಕದಲ್ಲೇ ತನ್ನ ಗಂಡ, ಸಮ್ಮತಿ ಸೂಚಿಸುವ ಅವನಿಂದಲೂ ತನ್ನ ಪರವಾಗಿ ಒಂದೇ ಒಂದು ತೊದಲು ಮಾತೂ ಇಲ್ಲ. ಆಗ ಅತ್ತೆ ತನ್ನನ್ನು ನೂಕಲು ಕಾಲಿನಿಂದ ಹೊಟ್ಟೆಯಮೇಲೊದ್ದಂತೆ—ತಾನುರುಳಿದಂತೆ—ಅಬ್ಬಾ ! ಅಸಾಧ್ಯ ನೋವು !—ಮರು ನಿಮಿಷ ಕತ್ತಲು ! ಗಂಡು ಮಗುವಿನ ಅಳುವಿನ ದನಿ ಕೋಣೆಯಲ್ಲಿ ಪ್ರತಿಧ್ವನಿತವಾಯಿತು. ಡಾಕ್ಟರು ಬಹು ಕಷ್ಟದಿಂದ ಮಗುವನ್ನು ಹೊರ ತೆಗೆದಿದ್ದರು. ಆದರೆ ಅದೇ ಕ್ಷಣದಲ್ಲಿ ತಾಯಿ ಜೀವ ನಂದಿಹೋದುದು ಅವರ ಗಮನಕ್ಕೇ ಬರಲಿಲ್ಲ. ನರ್ಸ್ ಕೈಗೆ ಮಗುವನ್ನು ಕೊಟ್ಟ ಮೇಲೆ ಡಾಕ್ಟರು ವೈದೇಹಿಯನ್ನು ಮುಟ್ಟಿ ನೋಡಿದರು. ವೈದೇಹಿಗೆ ತನ್ನ ಮಗುವನ್ನು ನೋಡುವ ಭಾಗ್ಯವಿರಲಿಲ್ಲ. ಡಾಕ್ಟರು ಮೆಲ್ಲನೆ ಅವಳ ಹೆಣದಮೇಲೆ ಬಿಳಿಯ ಬಟ್ಟೆ ಹೊದಿಸಿದರು.

ವೈದೇಹಿಯೇನೋ ಕೊನೆಗೂ ತಾಯಿಯಾದಳು. ಆದರೆ ಅವಳು ಸತ್ತುದು ಮಾತ್ರ ಬಂಜೆಯಾಗಿಯೇ !

———